ಸಾಹಿತ್ಯ ದಾಸೋಹ – 219

ಸಂಚಿಕೆ 43 – ಡಿಸೆಂಬರ್ 2023

11.11.2023ರ ದಾಸೋಹದ ಬರಹಗಳ ಸಂಕಲನ





ಗ್ರಂಥದ ಗುಡಿಯಲ್ಲಿ ಗಮಕ ಸಪರ್ಯೆ



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . . .

ಆತ್ಮೀಯರೆ,

ಇದು ಕರ್ನಾಟಕ ರಾಜ್ಯೋತ್ಸವ ಮತ್ತು ದೀಪಾವಳಿ ಹಬ್ಬದ ಸಂಭ್ರಮದ ನಡುವೆ 11ನೆಯ ನವೆಂಬರ್ 2023ರಂದು ಅಂತರಜಾಲ ಮುಖೇನ ನಡೆದ 219ನೆಯ ಸಾಹಿತ್ಯ ದಾಸೋಹದ ಸಂಚಿಕೆ. .

ಡಾ. ಶುಭಶ್ರೀ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ದಾಸೋಹದಲ್ಲಿ ಒಟ್ಟು 18 ಜನ ದಾಸೋಹಿಗಳು ತಮ್ಮ ಪ್ರಸ್ತುತಿಗಳನ್ನು ಮಂಡಿಸಿದ್ದಾರೆ. ದಾಸೋಹದ ಅಧ್ಯಕ್ಷತೆ ವಹಿಸಿ ಎಲ್ಲಾ ಪ್ರಸ್ತುತಿಗಳನ್ನೂ ವಿಶ್ಲೇಷಿಸಿದ ಡಾ. ಶುಭಶ್ರೀ ಪ್ರಸಾದ್ ಅವರಿಗೂ, ಎಲ್ಲ ದಾಸೋಹಿ ಗಳಿಗೂ, ಈ ಸಂಚಿಕೆಯನ್ನು ರೂಪಿಸಿದ ಶ್ರೀ ಎಸ್. ಶೃಂಗೇಶ್ವರ ಶರ್ಮ ಅವರಿಗೂ ತಾಂತ್ರಿಕ ನಿರ್ವಹಣೆಯಲ್ಲಿ ಸಹಕರಿಸಿದ ಎಲ್ಲರಿಗೂ ನಮ್ಮ ಕೃತಜ್ಞತೆಗಳು.

ಇದಲ್ಲದೆ, 9ನೆಯ ಡಿಸೆಂಬರ್ 2023ರಂದು ನಮ್ಮ ಪ್ರತಿಷ್ಠಾನದ ಆಶ್ರಯದಲ್ಲಿ 'ಗ್ರಂಥದ ಗುಡಿಯಲ್ಲಿ ಗಮಕ ಸಪರ್ಯೆ' ಎಂಬ ವಿಶೇಷ ಕಾರ್ಯಕ್ರಮ ಜರುಗಿತು. ಈ ಕುರಿತ ವರದಿ, ಛಾಯಾಚಿತ್ರಗಳು ಹಾಗೂ ಪ್ರೇಕ್ಷಕರ ಅನಿಸಿಕೆಗಳನ್ನೂ ಈ ಸಂಚಿಕೆ ಒಳಗೊಂಡಿದೆ.

ಸಂಚಿಕೆಯ ಬಗ್ಗೆ ನಮ್ಮ ಸದಸ್ಯರ ಪ್ರತಿಕ್ರಿಯೆ, ಅಭಿಪ್ರಾಯ, ಸಲಹೆ, ಸೂಚನೆಗಳನ್ನು ಸ್ವಾಗತಿಸುತ್ತೇವೆ.

ಧನ್ಯವಾದಗಳು,

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ದಾಸೋಹ ವೇದಿಕೆ, ಬೆಂಗಳೂರು 16.12.2023


ದಾಸೋಹದ ಪುಟಗಳಲ್ಲಿ ...

ಸಮನ್ವಯ ಸಮಿತಿ – ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ 219

ಕಾರ್ಯಕ್ರಮ ವರದಿ: ಎಸ್.ಶೃಂಗೇಶ್ವರ ಶರ್ಮ

ನಮ್ಮ ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣವಾದ 50ನೆಯ ವರ್ಷದ 'ಸುವರ್ಣ ಸಂಭ್ರಮ' ಮತ್ತು ನಾಡಿನಾದ್ಯಂತ ದೀಪಾವಳ ಹಬ್ಬವನ್ನು ಆಚರಿಸುತ್ತಿರುವ ಸುಸಂದರ್ಭದಲ್ಲಿ 219ನೇ ಸಾಹಿತ್ಯ ದಾಸೋಹವು 11ನೆಯ ನವೆಂಬರ್ 2023ರಂದು ಡಾ. ಶುಭಶ್ರೀ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಗೂಗಲ್ ಮೀಟ್ ಅಂತರಜಾಲ ವೇದಿಕಯಲ್ಲಿ ನಡೆಯಿತು.



ಆರಂಭದಲ್ಲಿ ಕನ್ನಡ ರಾಜ್ಯೋತ್ಸವ ಮತ್ತು ದೀಪಾವಳ ಹಬ್ಬದ ಶುಭಾಶಯವನ್ನು ಕೋರುತ್ತಾ ಎಲ್ಲರನ್ನೂ ಸ್ವಾಗತಿಸಿದ ಶ್ರೀಮತಿ ಸಿ.ಆರ್. ಕಮಲಾಕ್ಷಿಯವರು, ದಾಸೋಹದ ಅಧ್ಯಕ್ಷತೆ ವಹಿಸಿರುವ ಡಾ. ಶುಭಶ್ರೀ ಪ್ರಸಾದ್ ಅವರನ್ನು ಸಭೆಗೆ ಪರಿಚಯಿಸಿದರು.

ಪ್ರಸಕ್ತ ಭಾರತೀಯ ಸ್ಟೇಟ್ ಬ್ಯಾಂಕಿನ ಮಂಡ್ಯದ ಕೆರಗೋಡು ಶಾಖೆಯ ಉದ್ಯೋಗಿಯಾಗಿರುವ ಶುಭಶ್ರೀಯವರು ಕನ್ನಡ ಭಾಷೆಯಲ್ಲಿ ಎಂ.ಎ. ಸ್ನಾತಕೋತ್ತರ ಪದವಿ ಪಡೆದಿದ್ದು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ಪಿಎಚ್‌ಡಿ ಗಳಿಸಿರುತ್ತಾರೆ. ಇದಲ್ಲದೆ, 'ಕನ್ನಡ ಸಾಹಿತ್ಯದಲ್ಲಿ ದೇಗುಲಗಳ ಪರಿಕಲ್ಪನೆ' ಎಂಬ ವಿಷಯದ ಮೇಲೆ ಮಹಾಪ್ರಬಂಧಕ್ಕೆ 2015ರಲ್ಲಿ ಡಾಕ್ಟರೇಟ್ ಪದವಿ ಪಡೆದಿರುತ್ತಾರೆ. ಹೀಗೆ ಎರಡು ಪಿಎಚ್‌ಡಿ ಪದವಿಗೆ ಪಾತ್ರರಾದ ಇವರು, ಕತೆ, ಕವನ, ಲೇಖನ, ಪ್ರಬಂಧಗಳ ರಚನೆ, ಚಿತ್ರಗ್ರಹಣ, ವಾರ್ತಾ ವಾಚನ, ಕಾರ್ಯಕ್ರಮ ನಿರೂಪಣೆಯಲ್ಲಿ ಸತತವಾಗಿ ತೊಡಗಿಸಿಕೊಂಡಿದ್ದಾರೆ. ಇವರ 'ಒಡಲ ಕರೆಗೆ ಓಗೊಟ್ಟು' ಎಂಬ ಕಥಾ ಸಂಕಲನ, 'ಒಳಮನ', 'ಹೂದಂಡೆಯ ಬೇಲಿ', 'ಮಂಜಿನ ಮತ್ತು ಪಾತ್ರೆ', 'ಶುಭ ನುಡಿ' ಕವನ ಸಂಕಲನಗಳು, 'ಹುಲ್ಲು ಹಾಸಿನ ಮೇಲೆ ತಕಧಿಮಿ', 'ಓದಿನ ಓದು', 'ಬ್ಯಾಂಕರ್ಸ್ ಡೈರಿ' ಎಂಬ ಲಲಿತ ಪ್ರಬಂಧ ಸಂಕನಗಳು ಪ್ರಕಟವಾಗಿವೆ. ಡಾ. ಎಚ್.ಡಿ. ಚೌಡಯ್ಯ ರಾಜ್ಯ ಮಟ್ಟದ ಸಾಹಿತ್ಯ ಪ್ರಶಸ್ತಿ, ಜೀಶಂಪ ವೇದಿಕೆಯ ಕಾವ್ಯಶ್ರೀ ಪ್ರಶಸ್ತಿ, ಅನ್ನಪೂರ್ಣಶ್ರೀ ಪ್ರಶಸ್ತಿ, ರಾಜಮಾತೆ ಪ್ರತಾಪಕುಮಾರಿ ಅಮ್ಮಣ್ಣಿ ಪ್ರಶಸ್ತಿ, ಹುಬ್ಬಳ್ಳಿಯ ಚೇತನಶ್ರೀ ಸಾಹಿತ್ಯ ಪ್ರಶಸ್ತಿ, ಬೀದರ್‌ನ ದೇಶಪಾಂಡೆ ಸಾಹಿತ್ಯ ಸಾಂಸ್ಕೃತಿಕ ವೇದಿಕೆಯಿಂದ 'ಸಾಹಿತ್ಯ ಚೂಡಾಮಣಿ ರತ್ನ' ಪ್ರಶಸ್ತಿ ಇನ್ನೂ ಮುಂತಾದ ಪ್ರಶಸ್ತಿಗಳಿಗೆ ಭಾಜನರಾಗಿರುವ ಡಾ. ಶುಭಶ್ರೀ ಪ್ರಸಾದ್ ಅವರು ಹಲವು ಕವಿಗೋಷ್ಠಿಗಳಲ್ಲಿ ಹಾಗೂ ಮೈಸೂರು ಆಕಾಶವಾಣಿಯ 'ಚಿಂತನ' ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. 'ಸ್ವಾಹಾ' ಎಂಬ ಚಲನಚಿತ್ರದಲ್ಲಿ ಒಂದು ಪಾತ್ರವನ್ನು ಸಹಾ

ನಿರ್ವಹಿಸಿದ್ದಾರೆ ಎಂದು ಶುಭಶ್ರೀ ಅವರ ಬಹುಮುಖ ಪ್ರತಿಭೆಯನ್ನು ಪರಿಚಯಿಸಿದ ಶ್ರೀಮತಿ ಕಮಲಾಕ್ಷಿಯವರು, ಅವರನ್ನು ಕಾರ್ಯಕ್ರಮಕ್ಕೆ ಸ್ವಾಗತಿಸಿದರು.

ನಂತರ ಪ್ರಾಸ್ತಾವಿಕ ನುಡಿಗಳನ್ನಾಡಿದ ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಬೆಂ.ಶ್ರೀ. ರವೀಂದ್ರ ಅವರು, ರಾಜ್ಯೋತ್ಸವದ ಅಂಗವಾಗಿ ನಡೆಸುತ್ತಿರುವ ವಿವಿಧ ವಿಷಯಗಳ ಕುರಿತು ಪ್ರಬಂಧಗಳ ರಚನೆ, 'ಬ್ಯಾಂಕಿಂಗ್ ಪ್ರಪಂಚ'ದಲ್ಲಿ ಪ್ರಾ.ಎಚ್ಚೆಸ್ಕೆಯವರು ಬರೆದ ಸಂಪಾದಕೀಯ ಲೇಖನಗಳ ಧ್ವನಿಮುದ್ರಣ, ಬೆಂಗಳೂರಿನ ಕುಮಾರಸ್ವಾಮಿ ಬಡಾವಣೆಯಲ್ಲಿರುವ ದಕ್ಷಿಣ ವಲಯದ ನಗರ ಕೇಂದ್ರ ಗ್ರಂಥಾಲಯದಲ್ಲಿ ನಡೆಯಲಿರುವ ಕುವೆಂಪು 'ರಾಮಾಯಣ ದರ್ಶನ' ಒಂದು ಭಾಗದ ಗಮಕ ವಾಚನ – ಹೀಗೆ ವೇದಿಕೆಯು ಹಮ್ಮಿಕೊಂಡಿರುವ ಹಲವು ಕಾರ್ಯಕ್ರಮಗಳ ಬಗ್ಗೆ ಸಂಕ್ಷಿಪ್ತವಾದ ವಿವರಗಳನ್ನು ನೀಡಿ, ವೇದಿಕೆಯ ಸದಸ್ಯರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಈ ಎಲ್ಲ ಅಭಿಯಾನಗಳಲ್ಲಿ ಪಾಲ್ಗೊಳ್ಳಬೇಕೆಂದು ಕರೆ ನೀಡಿದರು.

ದಾಸೋಹದಲ್ಲಿ ಒಟ್ಟು 18 ದಾಸೋಹಿಗಳು ತಮ್ಮ ಲೇಖನ, ಕವನ, ಕಿರುನಾಟಕ, ಪ್ರಬಂಧಗಳನ್ನು ಪ್ರಸ್ತುತಪಡಿಸಿದರು.

ದಾಸೋಹದ ಅಧ್ಯಕ್ಷತೆ ವಹಿಸಿದ್ದ ಡಾ. ಶುಭಶ್ರೀ ಪ್ರಸಾದ್ ಅವರು, ಸಾಹಿತ್ಯ ಪ್ರಜ್ಞೆ ಹಾಗೂ ಸೃಜನಶೀಲತೆಯ ಬಗ್ಗೆ ಸವಿಸ್ತಾರವಾಗಿ ವಿಶ್ಲೇಷಿಸಿದರಲ್ಲದೆ, ನಮ್ಮ ಮನದ ಭಾವನೆಗಳನ್ನು ಸಶಕ್ತವಾಗಿ ಹೊರಹೊಮ್ಮಿಸಲು ಮಾತೃಭಾಷೆಯೇ ಪ್ರಧಾನವಾದ ಮಾಧ್ಯಮ. ದೈನಂದಿನ ವ್ಯವಹಾರದಲ್ಲಿ ನಾವು ಅನ್ಯ ಭಾಷೆಗಳನ್ನು ಅನಿವಾರ್ಯವಾಗಿ ಬಳಸಿದರೂ ನಮ್ಮ ಇನಿದಾದ ಕನ್ನಡವನ್ನು ನಮ್ಮ ಉಸಿರಿನ ಭಾಷೆಯನ್ನಾಗಿ ಮಾಡಿಕೊಂಡರೆ ನಮ್ಮ ಭಾಷೆಯ ಬಗ್ಗೆ ನಿರಭಿಮಾನ ಅನ್ನುವುದೇ ಇರುವುದಿಲ್ಲ ಮತ್ತು ನಮ್ಮ ಮಾತೃಭಾಷೆಯೂ ಜೀವಂತವಾಗಿ ಉಳಿಯುತ್ತದೆ ಎಂದು ತಿಳಿಸಿ, ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ನಡೆಯುತ್ತಿರುವ ಈ 219ನೇ ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸುವದಕ್ಕೆ ಅವಕಾಶ ದೊರೆತಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು. ನಂತರ ದಾಸೋಹದಲ್ಲಿ ಮಂಡಿಸಲಾದ ಎಲ್ಲ ಪ್ರಸ್ತುತಿಗಳನ್ನು ಅವಲೋಕಿಸಿ ತಮ್ಮದೇ ಆದ ವಿಶಿಷ್ಟ ಸಾಹಿತ್ಯಭರಿತ ಪಾಂಡಿತ್ಯಪೂರ್ಣ ಶೈಲಿಯಲ್ಲಿ ವಿಶ್ಲೇಷಿಸಿದರು. (ಅಧ್ಯಕ್ಷರ ಅನಿಸಿಕೆಗಳ ಪೂರ್ಣಪಾಠವನ್ನು ಈ ಸಂಚಿಕೆಯ ಕೊನೆಯ ಭಾಗದಲ್ಲಿ ನೀಡಲಾಗಿದೆ).

23ನೆಯ ಅಕ್ಟೋಬರ್ 2023ರಂದು ನಡೆದ 219ನೆಯ ದಾಸೋಹದ ವಿವಿಧ ಪ್ರಸ್ತುತಿಗಳು, ವರದಿಗಳು, ಛಾಯಾಚಿತ್ರಗಳನ್ನೊಳಗೊಂಡ ಪಿಡಿಎಫ್ ರೂಪದ ಸಂಚಿಕೆಯನ್ನು ಶ್ರೀ ಗುರುರಾಜ ಶಾಸ್ತ್ರಿಯವರು ಬಿಡುಗಡೆ ಮಾಡಿದರು.

ಸುಮಾರು ಮೂರು ಗಂಟೆಗಳ ಕಾಲ ನಡೆದ 219ನೆಯ ಸಾಹಿತ್ಯ ದಾಸೋಹವನ್ನು ನಿರೂಪಿಸಿದ ಶ್ರೀ ಹು.ವಾ.ಶ್ರೀಪ್ರಕಾಶ್ ಅವರು ಕೊನೆಯಲ್ಲಿ ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿ ಕಾರ್ಯಕ್ರಮವನ್ನು ಸಂಪನ್ನಗೊಳಿಸಿದರು.


(ಇಡೀ ಸಾಹಿತ್ಯ ದಾಸೋಹದ ಸಂಪೂರ್ಣ ನಡವಳಿಕೆಗಳು 'ಸಮನ್ವಯ ಸಮಿತಿ ಕನ್ನಡವೇ ಸತ್ಯ' ವೇದಿಕೆಯ ಯುಟ್ಯೂಬ್ ನಲ್ಲಿ ನೋಡಲು ಲಭ್ಯವಿದೆ)

***

ಸಮನ್ವಯ ಸಮಿತಿ – ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಗ್ರಂಥದ ಗುಡಿಯಲ್ಲಿ ಗಮಕ ಸಪರ್ಯೆ

ಕಾರ್ಯಕ್ರಮ ವರದಿ: ಹು.ವಾ. ಶ್ರೀಪ್ರಕಾಶ್




೯ನೆಯ ಡಿಸೆಂಬರ್ 2023ರಂದು ಶನಿವಾರ ಸಂಜೆ 6 ಗಂಟೆಗೆ ಬೆಂಗಳೂರಿನ ಕುಮಾರಸ್ವಾಮಿ ಬಡಾವಣೆಯಲ್ಲಿರುವ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಬೆಂಗಳೂರು ದಕ್ಷಿಣ ವಲಯದ ನಗರ ಕೇಂದ್ರ ಗ್ರಂಥಾಲಯ ಹಾಗೂ ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಸಹಯೋಗದಲ್ಲಿ 'ಗ್ರಂಥದ ಗುಡಿಯಲ್ಲಿ ಗಮಕ ಸಪರ್ಯೆ' ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ವೇದಿಕೆಯಲ್ಲಿದ್ದ ಶ್ರೀಯುತರಾದ ಬೆಂ.ಶ್ರೀ. ರವೀಂದ್ರ, ಕೆ.ಎನ್. ಮಹಾಬಲ, ಸುಬ್ರಹ್ಮಣ್ಯಾಚಾರ್ ಹಾಗೂ ಶ್ರೀಮತಿ ಶಾಂತಾ ನಾಗಮಂಗಲ ಮತ್ತು ಶ್ರೀಮತಿ ರಾಧಾ ಕೃಷ್ಣ ಸ್ವರೂಪ ಅವರು ದೀಪ ಬೆಳಗುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಗ್ರಂಥಪಾಲಕರಾದ ಶ್ರೀ ಎಸ್. ಆನಂದರವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕುಮಾರ ಅನಿರುದ್ಧನ ಪ್ರಾರ್ಥನೆಯ ನಂತರ ಗ್ರಂಥಾಲಯವು ನಡೆಸುತ್ತಿರುವ ಯಶಸ್ವಿ 124ನೇ 'ಪುಟ್ಟ ಮಗು ಕಥೆ ಕೇಳು' ವಿಶೇಷ ಸಂಚಿಕೆಯ ಅಂಗವಾಗಿ ನಿವೃತ್ತ ಹಿರಿಯ ಶಿಕ್ಷಕರಾದ ಶ್ರೀ ಸುಬ್ರಹ್ಮಣ್ಯಾಚಾರ್‌ರವರು ಮಕ್ಕಳಿಗೆ ಸುಂದರವಾದ ಒಂದು ಕಥೆ ಹೇಳಿದರು.

ಶ್ರೀ ಗುರುರಾಜ ಶಾಸ್ತ್ರಿಯವರು ಎಲ್ಲರನ್ನೂ ಸ್ವಾಗತಿಸಿ ಗಮಕ ಸಪರ್ಯೆ ಕಾರ್ಯಕ್ರಮ ನಡೆಸಿಕೊಡುತ್ತಿರುವ ವಿದುಷಿಯರಾದ ಶ್ರೀಮತಿ ಶಾಂತಾ ನಾಗಮಂಗಲ ಮತ್ತು ಶ್ರೀಮತಿ ರಾಧಾ ಕೃಷ್ಣ ಸ್ವರೂಪರವರನ್ನು ಹಾಗೂ ನಗರ ಕೇಂದ್ರ





ಗ್ರಂಥಾಲಯವನ್ನು ಅತ್ಯುತ್ತಮವಾಗಿ ಒಂದು ಮಾದರಿ ಗ್ರಂಥಾಲಯವಾಗಿ ನಡೆಸಿಕೊಂಡು ಬರುತ್ತಿರುವ ಸರಳ ಸಜ್ಜನ ಶ್ರೀ ಎಸ್ ಆನಂದರವರನ್ನು ಸಭೆಗೆ ಪರಿಚಯಿಸಿದರು. ಸಭೆಯಲ್ಲಿ ಉಪಸ್ಥಿತರಿದ್ದ ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಕಾರ್ಯದರ್ಶಿ ಶ್ರೀ ಕೆ.ಎನ್. ಮಹಾಬಲ ಹಾಗೂ ಅಧ್ಯಕ್ಷರಾದ ಶ್ರೀ ಬೆಂ.ಶ್ರೀ. ರವೀಂದ್ರರವರು ಔಪಚಾರಿಕವಾಗಿ ಮಾತನಾಡಿ, ಪ್ರತಿಷ್ಠಾನದ ಬಗ್ಗೆ ಮತ್ತು ಗ್ರಂಥಾಲಯದಲ್ಲಿ ಕಾರ್ಯಕ್ರಮ ಆಯೋಜಿಸುವಂತಹ ವಿಶಿಷ್ಟ ಅವಕಾಶ ಒದಗಿಬಂದುದರ ಬಗ್ಗೆ ವಿವರಿಸಿದರು.



ನಂತರ ಸುಮಾರು 2 ಗಂಟೆಗಳ ಕಾಲ ಗಮಕ ವಾಚನ ವ್ಯಾಖ್ಯಾನ ಕಾರ್ಯಕ್ರಮ ಬಹಳ ಅದ್ಭುತವಾಗಿ ನಡೆಯಿತು. ಶ್ರೀ ಕುವೆಂಪುರವರ ಜ್ಞಾನಪೀಠ ಪ್ರಶಸ್ತಿ ವಿಜೇತ ಕೃತಿ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದಿಂದ 'ಶಿಲಾತಪಸ್ವಿನಿ' ಎಂಬ ಭಾಗವನ್ನು ಪ್ರಸ್ತುತ ಪಡಿಸಿದರು. ಶ್ರೀಮತಿ ರಾಧಾರವರ ಸುಮಧುರವಾದ ವಾಚನ ಹಾಗೂ ಶ್ರೀಮತಿ ಶಾಂತಾ ನಾಗಮಂಗಲರವರ ವ್ಯಾಖ್ಯಾನ ಪ್ರೇಕ್ಷಕರನ್ನು ಸೆರೆಹಿಡಿದಿಟ್ಟಿತ್ತು.

ದಶರಥನ ಆಸ್ಥಾನಕ್ಕೆ ವಿಶ್ವಾಮಿತ್ರನ ಆಗಮನ, ಮಕ್ಕಳನ್ನು ಕಳಿಸಿಕೊಡಲು ದಶರಥನ ಕಳವಳ, ಸುಂದರ ನದಿ ವನಗಳ ಪ್ರಕೃತಿಯ ಸೌಂದರ್ಯದ ಮಡಿಲಲ್ಲಿ ಅರಮನೆಯೇ ರಾಮ ಲಕ್ಷ್ಮಣರಿಗೆ ಬಡವಾಗಿ ಕಾಣುವ ಪರಿ, ಭೀಕರ ಕಾನನದ ಪ್ರವೇಶ, ಅಲ್ಲಿ ಭಯಂಕರವಾಗಿ ತಾಟಕಿಯ ಆಗಮನ, ತಾಯಿ ಕೌಸಲ್ಯೆ ಕರೆಯುತ್ತಿರುವಂತೆ ಶಿಲೆಯಿಂದ ರಾಮನಿಗೆ ಕೇಳಿಸುವ ದನಿ, ರಾಮನ ಪಾದ ಚುಂಬನದಿಂದ ಬೆಣ್ಣೆಯಂತಾಗುವ ಶಿಲೆ, ಸೀತಾ ಸ್ವಯಂವರದ ವಿಚಾರ ತಿಳಿದು ಪುಳಕಗೊಳ್ಳುವ ರಾಮ, ಹೂದೋಟದಲ್ಲಿ ತನ್ನ ಕನಸಿನ ಪುರುಷ ರಾಮನನ್ನು ಕಂಡು, ಇವನೆತ್ತಿದಾಗ ಶಿವ ಧನಸ್ಸು ತುಕ್ಕು ಹಿಡಿದು ಮುರಿಯಲಿ ಎಂದು ಆಶಿಸುವ ಸೀತೆ ಕೊನೆಯಲ್ಲಿ ಮಂದಗಮನೆಯಾಗಿ ಬಂದು ರಾಮನಿಗೆ ಮಾಲೆ ಹಾಕುವುದರೊಂದಿಗೆ ಮಂಗಳ ಹಾಡಲಾಯಿತು. ಚಿನ್ನದ ಗಣಿಯಂತಿರುವ ಮಹಾಕಾವ್ಯದ ಒಂದು ಸುಂದರ ಭಾಗದ ಕೆಲವೇ ಪದ್ಯಗಳ ವಾಚನ ವ್ಯಾಖ್ಯಾನ ಕಲಾವಂತಿಕೆ ಮತ್ತು ಪಾಂಡಿತ್ಯದ ಸಮಪಾಕವಾಗಿ, ಸಂಗೀತ ಸಾಹಿತ್ಯದ ಸುಂದರ ಮಿಲನವಾಗಿ ಶ್ರೋತೃಗಳನ್ನು ಸೆರೆ ಹಿಡಿದಿಟ್ಟಿತು.







ಕಾವ್ಯವನ್ನು ಅರ್ಥಮಾಡಿಕೊಂಡು ಅದಕ್ಕೆ ಸರಿಯಾದ ರಾಗಗಳನ್ನು ಬಳಸಿ ಹಾಡಿದ ರೀತಿ, ರಸಕಾವ್ಯದ ಭಾಷಾ ಸೊಬಗು ಅರಿವಾಗುವಂತೆ ಮಾಡಿ ಪಾಂಡಿತ್ಯಪೂರ್ಣ ವ್ಯಾಖ್ಯಾನದಿಂದ ಕಾವ್ಯದ ಅರ್ಥ, ಸ್ವಾರಸ್ಯ ಕೇಳುಗರಿಗೆ ದೊರಕುವಂತೆ ಮಾಡಿದ ಪರಿಗೆ ಮೆಚ್ಚಿಕೊಂಡ ಸಭಿಕರು ಕಾರ್ಯಕ್ರಮದ ಬಗ್ಗೆ ಅಪಾರ ಸಂತಸ ವ್ಯಕ್ತಪಡಿಸಿದರು.

ಕರ್ನಾಟಕವೆಂದು ಹೆಸರಾಗಿ ಐವತ್ತು ವರ್ಷವಾಗಿದ್ದು, ಇದೇ ಡಿಸೆಂಬರ್ 29 ರಂದು ಕುವೆಂಪುರವರ ಜನ್ಮದಿನದ ಆಚರಣೆ ಇರುವ ಈ ಸಂಧರ್ಭದಲ್ಲಿ ಅವರ ಮಹಾಕಾವ್ಯದ ಗಮಕ ಸಪರ್ಯೆ ನಡೆಯುತ್ತಿರುವುದು ಯೋಗಾಯೋಗ ಎಂದು ಶ್ರೀಮತಿ ಶಾಂತಾ ನಾಗಮಂಗಲರವರು ಹರ್ಷ ವ್ಯಕ್ತಪಡಿಸಿದರು.



ಶ್ರೀ ಸುಬ್ರಹ್ಮಣ್ಯಾಚಾರ್, ಶ್ರೀಮತಿ ಶಾಂತಾ ನಾಗಮಂಗಲ, ಶ್ರೀಮತಿ ರಾಧಾ ಕೃಷ್ಣ ಸ್ವರೂಪ ಹಾಗೂ ಶ್ರೀ ಎಸ್ ಆನಂದರವರನ್ನು ಶಾಲು ಹೊದಿಸಿ, ಪೇಟ ತೊಡಿಸಿ ಸನ್ಮಾನಿಸಲಾಯಿತು. ಕೊನೆಯಲ್ಲಿ ಶ್ರೀ ರವಿಕುಸುಬಿಯವರು ಎಲ್ಲರಿಗೂ ವಂದಿಸಿದರು.

ಇದೇ ಸಂದರ್ಭದಲ್ಲಿ ಸಮನ್ವಯ ಸಮಿತಿಯ ಸದಸ್ಯರು ತಮ್ಮಲ್ಲಿದ್ದ ಹಲವು ಪುಸ್ತಕಗಳನ್ನು ಗ್ರಂಥಾಲಯಕ್ಕೆ ಕೊಡುಗೆಯಾಗಿ ನೀಡಿದರು.

(ಆಸಕ್ತರು ಇಡೀ ಕಾರ್ಯಕ್ರಮವನ್ನು ಸಮನ್ವಯ ಸಮಿತಿ ವೇದಿಕೆಯ ಯುಟ್ಯೂಬ್‌ನಲ್ಲಿ ವೀಕ್ಷಿಸಬಹುದು).

***

ಗ್ರಂಥದ ಗುಡಿಯಲ್ಲಿ ಗಮಕ ಸಪರ್ಯೆ

ವೀಕ್ಷಕರ ವಾಣಿ

'ಗ್ರಂಥದ ಗುಡಿಯಲ್ಲಿ ಗಮಕ ಸಪರ್ಯೆ' – ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಆಶ್ರಯದಲ್ಲಿ ನಡೆದ ಒಂದು ವಿಶಿಷ್ಟ ಕಾರ್ಯಕ್ರಮ. ವಿಶೇಷವೆಂದರೆ ಈ ಗಮಕ ವಾಚನ ವ್ಯಾಖ್ಯಾನ ಕಾರ್ಯಕ್ರಮ ನಡೆದದ್ದು ಬೆಂಗಳೂರಿನ ಕುಮಾರಸ್ವಾಮಿ ಬಡಾವಣೆಯಲ್ಲಿರುವ ಒಂದು ಸರ್ಕಾರಿ ಗ್ರಂಥಾಲಯದಲ್ಲಿ ಅಂದರೆ 'ಗ್ರಂಥದ ಗುಡಿಯಲ್ಲಿ'.

ಗ್ರಂಥಾಲಯದ ಗೋಡೆಯ ಮೇಲಿನ ಚಿತ್ರಗಳು, ವಿನ್ಯಾಸಗಳು ಎಲ್ಲವನ್ನೂ ನೋಡಿದಾಗ ಇದೊಂದು ಸಾಹಿತ್ಯ ಶಾರದೆಯ ದೇಗುಲವೇ ಹೌದು ಎಂಬ ಭಕ್ತಿಭಾವ ಹೊರಹೊಮ್ಮುತ್ತದೆ. ಇದೊಂದು ಕೇವಲ ಗ್ರಂಥಾಲಯ/ ವಾಚನಾಲಯವಷ್ಟೇ ಅಲ್ಲ, ಇದೊಂದು ಸಕ್ರಿಯ ಸಾಂಸ್ಕೃತಿಕ ಕೇಂದ್ರ. ಪುಟ್ಟ ಮಗು, ಕಥೆ ಕೇಳು, ಜ್ಞಾನ ದಸರಾ, ಪ್ರಮುಖ ವ್ಯಕ್ತಿಗಳ ಜನ್ಮದಿನ, ಮಕ್ಕಳು ಮತ್ತು ಹಿರಿಯರಿಗೆ ಸಾಂಸ್ಕೃತಿಕ ಸ್ಪರ್ಧೆಗಳು ಮುಂತಾದ ಕಾರ್ಯಕ್ರಮಗಳ ಏರ್ಪಾಡು, ಸಾರ್ವಜನಿಕರಿಂದ ಗ್ರಂಥಾಲಯಕ್ಕೆ ಪುಸ್ತಕಗಳ ಕೊಡುಗೆಗೆ ಅವಕಾಶ, ಹಲವು ಪರಾಮರ್ಶನ ಗ್ರಂಥಗಳೂ ಸೇರಿದಂತೆ ಸಾವಿರಾರು ಗ್ರಂಥಗಳ ಅಚ್ಚುಕಟ್ಟಾದ ನಿರ್ವಹಣೆ ಇತ್ಯಾದಿ, ಇತ್ಯಾದಿ ಈ ಗ್ರಂಥದ ಗುಡಿಯ ವಿಶೇಷ. ಇದಕ್ಕೆಲ್ಲ ಕಾರಣ ಅಲ್ಲಿನ ಗ್ರಂಥಪಾಲಕ ಶ್ರೀ ಎಸ್. ಆನಂದ ಅವರ ವಿಶೇಷ ಕಾಳಜಿ.

ಇಂತಹ ಒಂದು ವಿಶಿಷ್ಟ ವಾತಾವರಣದಲ್ಲಿ ವಿದುಷಿಯರಾದ ಶ್ರೀಮತಿ ರಾಧಾ ಕೃಷ್ಣ ಸ್ವರೂಪ ಹಾಗೂ ಶ್ರೀಮತಿ ಶಾಂತಾ ನಾಗಮಂಗಲ ಅವರು ಮಹಾಕವಿ ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಿಂದ ಆಯ್ದ 'ಶಿಲಾಡಪಸ್ವಿನಿ' ಎಂಬ ಭಾಗದ ಸುಶ್ರಾವ್ಯ ವಾಚನ ಮತ್ತು ವ್ಯಾಖ್ಯಾನವನ್ನು 9ನೆಯ ಡಿಸೆಂಬರ್ 2023ರಂದು ಪ್ರಸ್ತುತಪಡಿಸಿದರು.

ಗಮಕ ಸಪರ್ಯೆ ಎಂದರೆ...

ಗಮಕ ವಾಚನ, ವ್ಯಾಖ್ಯಾನ ಇವೆಲ್ಲ ಕೇಳಿದ್ದೇವೆ. ಆದರೆ 'ಗಮಕ ಸಪರ್ಯೆ' ಎಂದರೆ?

ಈ ಪ್ರಶ್ನೆ ಹಲವರಲ್ಲಿ ಉಂಟಾದುದು ಸಹಜ. ಅದಕ್ಕೆ ಇಲ್ಲಿದೆ ಉತ್ತರ.

ಸಂಸ್ಕೃತದಲ್ಲಿ 'ಸಪರ್ಯಾ' ಅಂದರೆ ಪೂಜೆ ಎಂದರ್ಥ. ಅದೇ ಕನ್ನಡದಲ್ಲಿ 'ಸಪರ್ಯೆ'. ಕೆಲವೆಡೆ ದೇವಾಲಯಗಳಲ್ಲಿ 'ಸೇವೆ' ಎಂಬದಕ್ಕೆ 'ಸಪರ್ಯೆ' ಎನ್ನುತ್ತಾರೆ.

ಪ್ರಸಕ್ತ ಗಮಕ ವಾಚನ, ವ್ಯಾಖ್ಯಾನವು 'ಗ್ರಂಥದ ಗುಡಿಯಲ್ಲಿ' ಏರ್ಪಾಟಾದ ಕಾರಣ, ಗಮಕದ ಪೂಜೆ ಅಥವಾ ಸೇವೆ ಎಂಬರ್ಥದಲ್ಲಿ 'ಸಪರ್ಯೆ' ಎಂದು ಬಳಸಲಾಗಿದೆ. ಒಟ್ಟಾರೆ ಗ್ರಂಥದ ಗುಡಿಯಲ್ಲಿ ಕುಳಿತು ಕಾವ್ಯವನ್ನು ಶ್ರದ್ಧೆಯಿಂದ ಲಯ, ರಾಗ, ಶೃತಿಬದ್ಧವಾಗಿ ಹಾಡಿ, ರಾಗರಾಗಿಣಿಯರಿಂದ ಸಿಂಗರಿಸಿ ವಾಚಿಸುವುದು 'ಗಮಕ ಸಪರ್ಯೆ' ಕಾರ್ಯಕ್ರಮದ ಉದ್ದೇಶ.

ಸದಾ ನೆನಪಿನಲ್ಲಿ ಉಳಿಯುವ ಈ ಕಾರ್ಯಕ್ರಮಕ್ಕೆ ವೀಕ್ಷಕರಿಂದ ಬಂದ ಸ್ಪಂದನೆಗಳೂ ಅತ್ಯಪೂರ್ವ. ವೀಕ್ಷಕರು ನಮ್ಮ ವಾಟ್ಸಾಪ್ ವೇದಿಕೆಯಲ್ಲಿ ಪ್ರಸ್ತುತಪಡಿಸಿದ ಆಯ್ದ ಕೆಲವು ಪ್ರತಿಕ್ರಿಯೆಗಳನ್ನು ಇಲ್ಲಿ ದಾಖಲಿಸಲಾಗಿದೆ.

ವೀಕ್ಷಕರ ವಾಣಿ

ಗ್ರಂಥಾಲಯದಲ್ಲಿ ನಿಶ್ಶಬ್ದವಾಗಿರದೆ, ಶ್ರೀರಾಮಾಯಣ ದರ್ಶನಂ ಮಾತನಾಡಿದಾಗ!!

'ಭೂಕಂಪ ಕಾಲದೊಳ್ ಶಿಖರದೌನ್ನತ್ಯದಿಂ ಕಣಿವೆ ಕಿಬ್ಬಿಗುರುಳ್ದು ಬೀಳ್ವ ಪೆರ್ಬಂಡೆ ....' – ಎಂದು 160ನೆಯ ಪದ್ಯ ಭಾಗವನ್ನು ಶ್ರೀಮತಿ. ರಾಧಾ ಕೃಷ್ಣ ಸ್ವರೂಪರು ಅತ್ಯಂತ ನಾಟಕೀಯವಾಗಿ, ಪದ ಪದದ ಉಚ್ಚಾರಣೆಯನ್ನೂ ಎತ್ತಿ ಹಾಡುತ್ತಿದ್ದ ರೀತಿಗೆ, ಅದೇಕೋ ಇಂದು ತಾಟಕಿಯ ಮೇಲೆ ಬಹಳ ಅಸೂಯೆಗೊಂಡೆ. ಅವಳ ಅಕರಾಳ ವಿಕರಾಳ ಕುರೂಪದ ಅನುಪಮ ವರ್ಣನೆಯನ್ನು ಕಟ್ಟಿಕೊಟ್ಟಿರುವ ರಸಋಷಿಗಳ ಪದಗಳಿಗೆ ಅದೇನು ಆಕೆಯ ಮೇಲೆ ಅಷ್ಟು ಮೋಹವೋ ಕಾಣೆ. ರಾಕ್ಷಸೀ ವರ್ಣನೆಗೂ ಇಂತಹ ಬೊಬ್ಬಿಡುವ ಪದಗಳೇ??!! ಮತ್ತು ಅಷ್ಟೇ ಕರ್ಣ ಮನೋಹರ ಗಾಯನ ಬೇರೆ!!!!

'ಪೊಕ್ಕರದನೇನೆಂಬೆನಾ ಮಹಾ ಶಕುನಮಯ ದುಃಖಗರ್ಭಿತ ಮೌನಮಂ! ಹಾಡದಿವೆ ಹಕ್ಕಿ. ನಲಿದಾಡದಿವೆ ಮಿಗಂ. ಸಂಚರಿಸದಿದೆ ಗಾಳಿ. ತನಿಗಂಪನೀಯದಿವಿ ಮರಗೋಡಿನೊಳ್ ಮಲರ್. ಚಲಿಸವೆಲೆ ಪುಲ್ಲೆಸಳ್, ಆವ ದುಃಖವೊ ಅಲ್ಲಿ ಕೊನೆಗಾಣದಂತಮಂ ದಿನಮುಂ ನಿರೀಕ್ಷಿಪೊಲ್ ಮೂಗುವುಟ್ಟಿರ್ದ ಬನಮೆಸೆದುದಾ ಪಥಿಕರ್ಗೆ ಬರೆದಂತೆ ನೀರವಂ, ಕೊರೆದಂತೆ ನಿಶ್ಚಲಂ, ನಿಶ್ಶಬ್ದತಾ ಕುಂಭಕಸ್ಥಿತಿಯ ಯತಿನಾದದೋಲ್....' ಎಂದು 220ನೆಯ ಪದ್ಯಭಾಗವನ್ನು ಆಳ ದನಿಯಲ್ಲಿ ಹಾಡುತ್ತಿದ್ದಾಗ, ನಿಧಾನವಾಗಿ ಆ ವನಪ್ರದೇಶದ ನೀರವತೆ, ನಿಶ್ಚಲತೆ, ನಿಶ್ಶಬ್ದ ಗಿಡ, ಮರ, ಹೂವುಗಳ ಮ್ಲಾನಭಾವ ಕಣ್ಮುಂದೆ ನಿಂತು, ಅಹಲ್ಯೆಯ ಸುದೀರ್ಘ ನಿರೀಕ್ಷೆ ನಮ್ಮೆದುರು ಹಾಸಿಕೊಂಡಿತ್ತು. ಎದೆ ದ್ರವಿಸಿ, ಕಣ್ಣುಗಳು ಜಿನುಗಿದವು. ಅದೆಂತಹ ತಣ್ಣನೆಯ ಪದಗಳು?!! ಮತ್ತು ಅದೆಂತಹ ಎದೆಗಿಳಿವ ಗಾಯನ!!

'ಹರ ಶರಾಸನವಂತೆ! ತೆಗೆ, ಪರೀಕ್ಷೆಯದೇಕೆ ತಾನೊಲಿದ ನಲ್ಲಂಗೆ? ಜಗದೇಕವೀರಂಗೆ ಪದ್ಧತಿಯ ಪಾಳ್ ತೊಡರುಮೆಡರೇಕೆ? ತುಕ್ಕಡರಿ ಮುರಿಯಲಾ ರುದ್ರಚಾಪಂ! –ಎನುತೆ ಸೀತಾ....' ಎಂದು 460ನೆಯ ಪದ್ಯವನ್ನು ನಾಟಕೀಯವಾಗಿ ವಾಚನ ಮಾಡಿದಾಗ, ಅಲ್ಲಿ ಹುಸಿ ಮುನಿಸಿನ ಅರ್ಧ ಕಿಶೋರಿ, ಅರ್ಧ ತರುಣಿ, ಪೂರ್ಣ ಪ್ರೇಮಿ ಸೀತೆಯು, ಸೊಂಟದ ಮೇಲೆ ಕೈಯಿಟ್ಟು ಮೂತಿ ತಿರುವುತ್ತಿದ್ದಳು.

ಇಂದು 'ಶ್ರೀ ರಾಮಾಯಣ ದರ್ಶನಂ'ನ ಕಾರ್ತಿಕ ದೀಪಗಳನ್ನು ಕಾವ್ಯಮಯವಾಗಿ, ನಾದಮಯವಾಗಿ, ಭಾವಮಯವಾಗಿ, ಸುಶ್ರಾವ್ಯವಾಗಿ ನಮ್ಮ ಎದೆಯಲ್ಲಿ ಬೆಳಗಿ ಬಿತ್ತಿದ ಶ್ರೀಮತಿ ರಾಧಾ ಕೃಷ್ಣ ಸ್ವರೂಪ ಅವರಿಗೆ ಶತ ಶತ ನಮನಗಳು. ಇವರ ಗಾಯನದ ಸಮಕ್ಕೆ ವ್ಯಾಖ್ಯಾನವು ಹರಿದು ಬಂದು, ಅಕ್ಷರಶಃ ಕಾವ್ಯ ದೀಪೋತ್ಸವ ಅನುಭವಿಸಿದೆವು, ಆನಂದಿಸಿದೆವು.

ರಸಋಷಿ ಕುವೆಂಪು ಅವರ ಭಾಷಾ ಸೊಗಸು, ಪದ ಕಟ್ಟಡದ ಚಮತ್ಕಾರಗಳು, ಸನ್ನಿವೇಶಗಳಿಗೆ ತಕ್ಕಂತೆ ಕಟ್ಟಿಕೊಳ್ಳುವ ಕಾವ್ಯ ಪ್ರತಿಮೆಗಳು, ಅವುಗಳ ಸೌಂದರ್ಯ, ಅವರ ಸನಾತನ ಮನೋಧರ್ಮ ಮತ್ತು ಅದರ ಪ್ರತಿಪಾದನೆ, ರಾಮಾಯಣ ವೆಂಬ ಮಹಾಕಾವ್ಯದ ಕರ್ತೃತ್ವದಲ್ಲಿ ಅವರಿಗಿದ್ದ ಬದ್ಧತೆ ಹಾಗೂ ನಂಬಿಕೆಗಳು– ಹೀಗೆ ಒಂದೊಂದು ವಿಷಯವನ್ನೂ ನಮಗೆ ಅತ್ಯಂತ ಸಹಜವಾಗಿ, ಕಾವ್ಯದ ಕೈಹಿಡಿದು ನಡೆವಂತೆ ಪರಿಚಯಿಸಿದ ಶ್ರೀಮತಿ ಶಾಂತಾ ನಾಗಮಂಗಲ ಅವರ ಚುರುಕಾದ, ಮೌಲಿಕ, ತೌಲನಿಕ ಹಾಗೂ ವಿದ್ವತ್ಪೂರ್ಣ ವ್ಯಾಖ್ಯಾನಕ್ಕೆ ಮತ್ತೊಮ್ಮೆ ಶತ ಶತ ನಮನಗಳು. ಮಹಾಕಾವ್ಯ ಹಾಗೂ ಕಾವ್ಯದ ಕರ್ತೃಗಳಿಗೆ ಅತ್ಯಂತ ನ್ಯಾಯಯುತ, ಗೌರವಯುತ ಹಾಗೂ ನಾದಮಯ ಸಪರ್ಯೆ ಇದು.

ಇದು ಮಾನ್ಯ ಕುವೆಂಪು ಅವರ ಹುಟ್ಟು ಹಬ್ಬದ ಮಾಸ. ಇದನ್ನು ತಿಳಿಸಿಯೇ ಶ್ರೀಮತಿ ಶಾಂತಾ ಅವರು ವ್ಯಾಖ್ಯಾನ ಆರಂಭಿಸಿದರು.

ಶ್ರೀ ಬೆಂ.ಶ್ರೀ. ರವೀಂದ್ರ ಅವರ ಕವನ ನೆನಪೋಲೆಗಳು ಸ್ಟ್ಯಾಂಪ್ ಇಲ್ಲದೆ ನಿತ್ಯವೂ ನಮ್ಮ ಕೈ ಸೇರಿ, ಗ್ರಂಥಾಲಯಕ್ಕೆ ದೌಡಾಯಿಸಲು ಕರೆಯುತ್ತಿದ್ದವು. ಗ್ರಂಥಾಲಯದ ಗ್ರಂಥಪಾಲಕ ಶ್ರೀ ಎಸ್.ಆನಂದ ಅವರ ಆಸಕ್ತಿ, ಶಿಸ್ತು, ಸ್ವಚ್ಛತೆ ಹಾಗೂ ಬದ್ಧತೆಗೆ ಹೃತ್ಪೂರ್ವಕ ಅಭಿನಂದನೆಗಳು ಹಾಗೂ ವಂದನೆಗಳು.

ಇಂತಹ ಒಂದು ಕಾವ್ಯ ರಸಸಂಜೆ ಹಾಗೂ ಉಪಾಹಾರವನ್ನು ಆಯೋಜಿಸಿದ ಸಂಚಾಲಕ ಮಂಡಳಿಯ ಸತ್ಕಾರ್ಯ ಹಾಗೂ ಸತ್ಕಾರಕ್ಕೆ ಗೌರವಪೂರ್ಣ ವಂದನೆಗಳು.

– ರಾಧಿಕಾ ವಿ ಗುಜ್ಜರ್

***

ಗ್ರಂಥ ಗುಡಿಯಲ್ಲಿ ಗಮಕ ಚಮತ್ಕಾರ

ಹೃನ್ಮನ ತುಂಬಿದ ರಸಸಂಜೆಯಿದು. ಹೌದು, ರಸಋಷಿ, ರಾಷ್ಟ್ರಕವಿ ಕುವೆಂಪು ಅವರ ಜ್ಞಾನಪೀಠ ಪುರಸ್ಕೃತ ಶ್ರೀ ರಾಮಾಯಣ ದರ್ಶನಂ ಆಯ್ದ ಗಮಕ ವಾಚನ ಹಾಗೂ ವ್ಯಾಖ್ಯಾನ ಹಾಲು ಜೇನು ಬೆರೆತಂತೆ ಸ್ವಾದಿಷ್ಟಪೂರ್ಣವಾಗಿತ್ತು. ಬಾಯಾರಿದವರಿಗೆ ಅಮೃತವನ್ನು ಉಣಬಡಿಸಿದಂತಿತ್ತು ಅವರಿಬ್ಬರ ಪ್ರಸ್ತುತಿ.

ಶಿಲಾತಪಸ್ವಿನಿಯ ಭಾಗದಿಂದ ವಿಶ್ವಾಮಿತ್ರರು ತಾಟಕಿಯ ಹತ್ಯೆಗಾಗಿ ಶ್ರೀ ರಾಮಲಕ್ಷ್ಮಣರನ್ನು ಕರೆದೊಯ್ಯುವ, ಅಹಲ್ಯೆ ಶಾಪ ವಿಮೋಚನೆ ಬಳಿಕ ರಾಮ ಲಕ್ಷ್ಮಣರು ಮಿಥಿಲೆಯನ್ನು ಪ್ರವೇಶಿಸಿದ್ದು, ಶಿವಧನುಸ್ಸನ್ನು ಮುರಿದ ಭಾಗಗಳ ವಾಚನ ಹಾಗೂ ವ್ಯಾಖ್ಯಾನ ಮಾಡಿದರು ಎನ್ನುವುದಕ್ಕಿಂತ ತಮ್ಮ ಧ್ವನಿಯಿಂದ ದೃಶ್ಯಗಳನ್ನು ಕಣ್ಣಮುಂದೆ ನಡೆಯುತ್ತಿವೆಯೇನೋ ಎಂದೆನಿಸಿತು. ಕುವೆಂಪುರವರ ವಿಶಿಷ್ಟವಾದ ಪದಪ್ರಯೋಗಗಳನ್ನು ಪರಿಚಯಿಸಿದ ವೈಖರಿ ಅಮೋಘವಾಗಿತ್ತು.

ನಿರರ್ಗಳವಾಗಿ, ಭಾವಪೂರ್ಣವಾಗಿ ಗಮಕ ವಾಚನ ಹಾಗೂ ವ್ಯಾಖ್ಯಾನ ನಡೆಸಿಕೊಟ್ಟ ವಿದುಷಿಯರಾದ ಶ್ರೀಮತಿ ಶಾಂತ ನಾಗಮಂಗಲ ಹಾಗೂ ರಾಧಾ ಕೃಷ್ಣ ಸ್ವರೂಪ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು ಹಾಗೂ ಧನ್ಯವಾದಗಳು.

ಹೂವಿನೊಡನೆ ನಾರೂ ಸ್ವರ್ಗ ಸೇರುವುದು ಎನ್ನುವಂತೆ, ಸಸಕಸ ಕಾರ್ಯಕಾರಿ ಸಮಿತಿಯ ಎಲ್ಲಾ ರೂವಾರಿಗಳು ಇಂತಹ ಕಾರ್ಯಕ್ರಮ ಆಯೋಜಿಸಿದ್ದಕ್ಕಾಗಿ ನನಗೆ ಇಂತಹ ಅವಕಾಶ ಲಭಿಸಿತು. ಯಶಸ್ವಿ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತೃಪ್ತ ಭಾವ ನನ್ನದಾಯಿತು. ಸಸಕಸ ಸಮಿತಿಯ ಎಲ್ಲಾ ರೂವಾರಿಗಳಿಗೆ ಧನ್ಯವಾದಗಳು.

– ಕಮಲಾಕ್ಷಿ ಸಿ ಆರ್

***

ಗುಡಿಯಲ್ಲಿ ನಡೆದ ಗಮಕ ಸಪರ್ಯೆ....ಒಂದು ಸುಂದರ ಕಲ್ಪನೆ ...

ಇದಕ್ಕೆ ಜೀವವಿತ್ತವರು ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆ, ಗ್ರಂಥಾಲಯದ ಗ್ರಂಥಪಾಲಕರು, ಗಮಕ ವಾಚನ-ವ್ಯಾಖ್ಯಾನಕಾರರು. ಶನಿವಾರದ ಸಂಜೆಯನ್ನು ಸಾರ್ಥಕವಾಗಿಸಿದ ಎಲ್ಲರಿಗೂ ತುಂಬು ಹೃದಯದ ಧನ್ಯವಾದಗಳು.

'ರಾಮಾಯಣ ದರ್ಶನಂ'ನ ವಾಚನದಲ್ಲಿ ಶಾಂತಾ ಮೇಡಂ ಹೇಳಿದ ಹಾಗೆ ಎಲ್ಲಿ ಯತಿ ಕೊಡುವುದೆಂಬುದೆ ಕೆಲವೊಮ್ಮೆ ಕಷ್ಟ.. ಎಲ್ಲವನ್ನೂ ಮೀರಿ ಅತ್ಯದ್ಭುತ ವಾಚನ ಮಾಡಿದ ರಾಧಾ ಕೃಷ್ಣ ಸ್ವರೂಪ ಅವರು ನಮ್ಮ ಗಮಕ ಕುಟುಂಬದ ಹೆಮ್ಮೆ. ಇನ್ನು ವ್ಯಾಖ್ಯಾನಕ್ಕೆ ಯಾವ ವ್ಯಾಖ್ಯಾನ ಮಾಡೋಣ. ಕಥೆ ಕೇಳುವ ಪುಟ್ಟ ಮಕ್ಕಳಂತೆ ಕುಳಿತ ಎಲ್ಲ ಸಭಿಕರನ್ನು ನೋಡಿದಾಗಲೇ ಅವರ ವಾಗ್ಝರಿಯ ಪ್ರಭೆ ಅರಿವಾಗುತ್ತದೆ. ತುಂಬಿದ ಸಭೆಯನ್ನು ನೋಡಿ ಆನಂದವಾಯಿತು. ಕಾರ್ಯಕ್ರಮ ಸಮಯಕ್ಕೆ ಸರಿಯಾಗಿ ಪ್ರಾರಂಭವಾಗಿದ್ದರೆ ಚೆನ್ನಾಗಿತ್ತು ಎಂದೆನಿಸಿತು..

– .ಮಂಜುಳಾ ಮರಾಠೆ

ಗ್ರಂಥದ ಗುಡಿಯಲ್ಲಿ ಗಮಕ ಆರಾಧನೆ

ಇಂದು ಕುಮಾರಸ್ವಾಮಿ ಬಡಾವಣೆಯ ನಗರ ಕೇಂದ್ರ ಗ್ರಂಥಾಲಯದ ಗ್ರಂಥದ ಗುಡಿಯಲ್ಲಿ ಗ್ರಂಥಪಾಲಕ ಶ್ರೀ ಎಸ್ ಆನಂದ ಅವರ ಸಹಕಾರದಿಂದ ವಿದುಷಿಯರಾದ ಶ್ರೀಮತಿ ಶಾಂತಾ ನಾಗಮಂಗಲ ಮತ್ತು ಶ್ರೀಮತಿ ರಾಧಾ ಕೃಷ್ಣ ಸ್ವರೂಪ ಅವರಿಂದ ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಮಹಾಕಾವ್ಯದಿಂದ ಶಿಲಾ ತಪಸ್ವಿನಿ ಭಾಗದ ಆಯ್ದ ಪದ್ಯಗಳ ಸುಮಧುರ ಗಮಕ ವಾಚನ ಮತ್ತು ಗಮಕ ವ್ಯಾಖ್ಯಾನ ಸೊಗಸಾಗಿತ್ತು.

ಕುವೆಂಪುರವರ ವಿಶಿಷ್ಟವಾದ ನಮನಗಳೊಂದಿಗೆ (ವಿವಿಧ ಕವಿಗಳಿಗೆ, ಹಳಬರಿಗೆ, ಹೊಸಬರಿಗೆ) ಆರಂಭವಾದ ಈ ಸುಂದರ ಗಮಕ ಆರಾಧನೆ ಶ್ರೋತೃಗಳ ಮನ ತಣಿಸಿತಲ್ಲದೇ, ಮಹಾಕವಿಯ ಕಾವ್ಯದ ರಸದೂಟವನ್ನೂ ಮಾಡಿಸಿತು.

ಬ್ರಹ್ಮರ್ಷಿ ವಿಶ್ವಾಮಿತ್ರರು ಅಯೋಧ್ಯೆಗೆ ಬಂದು ರಾಮ ಲಕ್ಷ್ಮಣರನ್ನು ತಮ್ಮೊಂದಿಗೆ ತಾಟಕಿಯ ಸಂಹಾರಕ್ಕೆ ಕಳುಹಿಸುವಂತೆ ಕೇಳಿಕೊಂಡಾಗ ದಶರಥನ ಗೋಳಾಟವನ್ನೂ, ಕುಲಪುರೋಹಿತ ಬ್ರಹ್ಮರ್ಷಿ ವಸಿಷ್ಠರ ಹಿತವಚನಗಳನ್ನೂ ಬಹಳ ಸುಂದರವಾಗಿ ವಿದುಷಿ ಶ್ರೀಮತಿ ರಾಧಾ ಕೃಷ್ಣ ಸ್ವರೂಪ ವಾಚನ ಮಾಡಿದರು. ಅವರ ಇಂಪಾದ ಗಮಕ ವಾಚನದಲ್ಲಿ ಸಂದರ್ಭೋಚಿತವಾಗಿ ಅನೇಕ ರಾಗಗಳು – ಶಿವರಂಜಿನಿ, ಭೈರವಿ, ಸಿಂಧುಭೈರವಿ, ಅಮೃತವರ್ಷಿಣಿ, ಮೋಹನ ಇನ್ನೂ ಎಷ್ಟೆಷ್ಟೋ ರಾಗಗಳು ಬಂದುಹೋದವು. ಅವರು ಸುಶ್ರಾವ್ಯವಾಗಿ ಧ್ವನಿಯ ಏರಿಳಿತಗಳೊಂದಿಗೆ ಹಾಡುತ್ತಿದ್ದರೆ ರಾಮಾಯಣದ ಆ ಪ್ರಸಂಗಗಳು, ಆ ಪಾತ್ರಗಳು ನಮ್ಮ ಮುಂದೆ ನರ್ತಿಸುತ್ತಿದ್ದವು, ರೂಪು ತಳೆಯುತ್ತಿದ್ದವು.

ಇವರ ವಾಚನವನ್ನು ಸುಂದರವಾಗಿ ವ್ಯಾಖ್ಯಾನಿಸಿದ ಶ್ರೀಮತಿ ಶಾಂತಾ ನಾಗಮಂಗಲ ಅವರು ಕುವೆಂಪುರವರು ಟಂಕಿಸಿದ ವಿಶೇಷ ಶಬ್ದಗಳು, ಪದಪ್ರಯೋಗಗಳ ಬಗ್ಗೆ ಶಿಲಾತಪಸ್ವಿನಿಯನ್ನೂ ಒಳಗೊಂಡಂತೆ ಶ್ರೋತೃಗಳ ಗಮನ ಸೆಳೆದು ಅವುಗಳ ಸ್ವಾರಸ್ಯವನ್ನು ವಿವರಿಸಿದರು. ಅರಮನೆಯ ವಾತಾವರಣದಿಂದ ಬಂದ ರಾಮ ಲಕ್ಷ್ಮಣರು ಕಾನನದ ಪರಿಶುದ್ಧ, ಸ್ವಚ್ಛಂದ ವಾತಾವರಣದಲ್ಲಿ ಸಂತೋಷದಿಂದ ಮಿಂದೆದ್ದುದನ್ನು, ತಾಟಕಿಯ ವನದ ನೀರವತೆಯನ್ನು ಭೇದಿಸಿ ಬಂದ ಜೀರುಂಡೆಗಳ ಕರ್ಕಶ ಧ್ವನಿಯನ್ನು, ತಾಟಕಿಯ ಆಗಮನದ ವಿವರಗಳನ್ನು, ಅವಳ ರೂಪವನ್ನು ಕುವೆಂಪು ವರ್ಣಿಸಿದ ರೀತಿಯನ್ನು ಗಮಕಿ ಗಮಕದ ಮೂಲಕ ಚಿತ್ರಿಸಿದರೆ, ವ್ಯಾಖ್ಯಾನಕಾರ್ತಿ ಸುಂದರ ವಿವರಣೆಗಳೊಂದಿಗೆ ಕಟ್ಟಿಕೊಟ್ಟರು. ಕರಾಳತೆಯನ್ನು ಮನದಟ್ಟು ಮಾಡಲು ಕುವೆಂಪು ರೇಫವನ್ನು ಬಳಕೆಮಾಡಿದ್ದರತ್ತ ಗಮನ ಸೆಳೆದರು.

ಗೌತಮರ ಆಶ್ರಮಕ್ಕೆ ಬಂದಾಗ ಅಲ್ಲಿದ್ದ ಪೆರ್ಬಂಡೆಯನ್ನು ಗುರು ವಿಶ್ವಾಮಿತ್ರರ ಆಣತಿಯಂತೆ ರಾಮ ಹತ್ತುವಾಗ, ಅವನ ಪಾದ ಚುಂಬನದಿಂದ ಆ ಪೆರ್ಬಂಡೆ, ಶಿಲಾತಪಸ್ವಿನಿ ದ್ರವಿಸಿತು ಎಂಬುದನ್ನು ಸ್ವಾರಸ್ಯಕರವಾಗಿ ವಿವರಿಸಿದರು. ಮೂಲ ವಾಲ್ಮೀಕಿ ರಾಮಾಯಣದಲ್ಲಿ ಅಹಲ್ಯೆ ಶಿಲೆಯ ರೂಪದಲ್ಲಿದ್ದಳು ಎಂಬ ಉಲ್ಲೇಖವಿಲ್ಲದೆ ಇರುವುದನ್ನೂ ತಿಳಿಸಿದ ಶ್ರೀಮತಿ ಶಾಂತಾ ನಾಗಮಂಗಲ ಅವರು, ಮಿಥಿಲೆಗೆ ರಾಮ ಲಕ್ಷ್ಮಣರು ಗುರು ವಿಶ್ವಾಮಿತ್ರರೊಂದಿಗೆ ಬರುವಾಗ, ಅರಮನೆಯ ಉದ್ಯಾನವನದಲ್ಲಿ ಸೀತೆ ತನ್ನ ಸಹೋದರಿಯರೊಂದಿಗೆ ವಿಹಾರ ಮಾಡುತ್ತಿರುವಾಗ ರಾಮನ ದರ್ಶನವಾದುದನ್ನೂ, ಆಗ ಸೀತೆಯ ಮುಖ ಬೆಟ್ಟದ ತಾವರೆಯಂತೆ ಅರಳಿ, ಉಬ್ಬಿ, ಕೆಂಪಡರಿದುದನ್ನೂ ಸೊಗಸಾಗಿ ವಿವರಿಸಿದರು. ಈ ಭೇಟಿಯ ಪ್ರಸಂಗ ಸಂಸ್ಕೃತ ನಾಟಕ ಪ್ರಸನ್ನ ರಾಘವದಲ್ಲೂ, ತುಳಸೀ ರಾಮಾಯಣದಲ್ಲೂ, ಕಂಬ ರಾಮಾಯಣದಲ್ಲೂ ಉಲ್ಲೇಖವಿರುವುದನ್ನೂ ಅವರು ತಿಳಿಸಿದರು. ಕುವೆಂಪು ಬಳಸಿದ "ಮಹೋಪಮೆ"ಯನ್ನೂ ಐರಾವತದ ಉದಾಹರಣೆ ಯೊಂದಿಗೆ ಸುಂದರವಾಗಿ ವ್ಯಾಖ್ಯಾನಿಸಿದರು.

ಗಮಕ ಗಾಯನ, ಗಮಕ ವ್ಯಾಖ್ಯಾನಗಳಲ್ಲಿ ಸುಂದರತೆ, ಸೊಗಸು ಸುಮಧುರತೆಗಳನ್ನು ಮೂಡಿಸುವಲ್ಲಿ ಒಂದು ರೀತಿಯ ಪೈಪೋಟಿ ಏರ್ಪಟ್ಟಿತ್ತು. ಯಾರು ಹೆಚ್ಚು ಎಂದು ನಿರ್ಧರಿಸುವಲ್ಲಿ ಶ್ರೋತೃಗಳು ಸೋತರು ಎಂದರೆ ತಪ್ಪಾಗಲಾರದು.

– ಧೀರೇಂದ್ರ ಮತ್ತು ಪದ್ಮ

ಗ್ರಂಥದ ಗುಡಿಯಲ್ಲಿ ರಸ ಋಷಿಯ ಮಹಾಕಾವ್ಯಧಾರೆ

ಶ್ರೀ ಆನಂದ್ ಅವರನ್ನು ಭೇಟಿಯಾದಾಗಲೆಲ್ಲ ಅಲ್ಲಿನ ಸುಂದರ ಸಾಹಿತ್ಯಕ, ಸಾಂಸ್ಕೃತಿಕ ಪರಿಸರ ನನ್ನನ್ನು ಆಕರ್ಷಿಸಿತ್ತು.

ಒಮ್ಮೆ ಕೇಳಿಯೇಬಿಟ್ಟೆ, ನಿಮ್ಮ ಈ ಗ್ರಂಥದ ಗುಡಿಯಲ್ಲಿ ನಮ್ಮ ವೇದಿಕೆಯ ಕಾರ್ಯಕ್ರಮವೊಂದನ್ನು ಆಯೋಜಿಸಬಹುದೇ ಎಂದು. ಅದಕ್ಕೆ ಆ ಉತ್ಸಾಹಿ"ಓಹೋ ಅದಕ್ಕೇನು, ಯೋಜನೆ ನಿಮ್ಮದು. ವ್ಯವಸ್ಥೆ ನನ್ನದು" ಎಂದರು.

ಹಾಗೆ ಬರಿಯ ಕಾಗದದ ಯೋಜನೆಯಾಗಲು ಬಿಡುವರೇ ರವೀಂದ್ರರು? ಏಕಾಏಕಿ ಗಮಕ ವಾಚನ, ವ್ಯಾಖ್ಯಾನ ಕಾರ್ಯಕ್ರಮ ಒಂದನ್ನು ಸಿದ್ಧಪಡಿಸಿಯೇಬಿಟ್ಟರು, ಅದೂ ವಿದುಷಿಯರಾದ ಶಾಂತಾ ನಾಗಮಂಗಲ ಹಾಗೂ ರಾಧಾ ಕೃಷ್ಣ ಸ್ವರೂಪ ಅವರದ್ದು.

ಪ್ರಸಿದ್ಧ "ರಾಮಾಯಣ ದರ್ಶನಂ" ಆಯ್ದ ಭಾಗಗಳ ವಾಚನ, ವ್ಯಾಖ್ಯಾನವು ಕಾವ್ಯತಪಸ್ವಿಯ ಜನ್ಮ ಮಾಸದ ಸಂದರ್ಭದಲ್ಲೇ ನಡೆದದ್ದು ಮತ್ತಷ್ಟು ಮೆರುಗು ನೀಡಿತ್ತು.

ಗಾಯನ, ವ್ಯಾಖ್ಯಾನಗಳ ಸೊಬಗು, ಇಂಪು, ಉಪಯುಕ್ತತೆಗಳನ್ನು ರಾಧಿಕಾ, ಕಮಲಾಕ್ಷಿ, ಸರಸ್ವತಿ, ಧೀರೇಂದ್ರ, ಕೆ ಆರ್ ವೆಂಕಟೇಶ್ ಮೊದಲಾದವರು ವಿಷದವಾಗಿ ತಿಳಿಸಿದ್ದಾರೆ. ಅದನ್ನು ನಮ್ರವಾಗಿ ಅನುಮೋದಿಸುವವರಲ್ಲಿ ನಾನೂ ಒಬ್ಬ ಅಷ್ಟೆ.

ಆರಂಭದಲ್ಲಿ ನಡೆದ ಗ್ರಂಥದ ಗುಡಿಯ ಸರಣಿಯ ಕಾರ್ಯಕ್ರಮವಾದ ಸುಬ್ರಹ್ಮಣ್ಯಾಚಾರ್ ಅವರ ಕಥಾವಾಚನ ಅರ್ಥಪೂರ್ಣ. ನಿವೃತ್ತ ಶಿಕ್ಷಕರಾದ ಅವರ ಸಮಾಜಸೇವೆ ಅನುಕರಣೀಯ. ಎಂದಿನಂತೆ ಆನಂದರ ಸಾಹಿತ್ಯ, ಸಂಸ್ಕೃತಿಗಳ ಪ್ರೀತಿ ಕಾರ್ಯಕ್ರಮದುದ್ದಕ್ಕೂ ಎದ್ದು ಕಾಣುತ್ತಿತ್ತು. ತುಂಬಿದ ರಸಿಕರ ಸಭೆಯಲ್ಲಿ ಒಳಗೆ ನಡೆಯುತ್ತಿದ್ದ ಸಾಹಿತ್ಯ, ಸಂಗೀತದ ಸಮಾರಾಧನೆಯನ್ನು ಸವಿಯುತ್ತ ಹೊರಗಿನ ರುಚಿ ಭೋಜನವನ್ನೂ ಮರೆತಿದ್ದರಲ್ಲಿ ಅಚ್ಚರಿಯೇನಿರಲಿಲ್ಲ.

– ಮಹಾಬಲ

***

ಭಾವನಾಪೂರ್ವಕ ಮತ್ತು ವಿದ್ವತ್ಪೂರ್ಣ ಕಾರ್ಯಕ್ರಮ

ಗ್ರಂಥದ ಗುಡಿಯಲ್ಲಿ ನಡೆದ ಗಮಕ ವಾಚನ, ವ್ಯಾಖ್ಯಾನ ಕಾರ್ಯಕ್ರಮ ಇಂದಿನ ಸಂಜೆಗೆ ಬಹಳ ಸಾರ್ಥಕತೆ ನೀಡಿತು. ಬಹಳ ಸುಮಧುರವಾದ ಭಾವನಾಪೂರಕವಾದ ಗಾಯನ ಹಾಗೂ ವಿದ್ವತ್ಪೂರ್ಣವಾದ ಗಮಕ ವಾಚನ ಹಾಲು ಜೇನಿನಂತೆ ಸವಿಯಾಗಿತ್ತು. ತಮ್ಮದೇ ಆದ ಶೈಲಿಯಲ್ಲಿ ಸವಿಸ್ತಾರವಾಗಿ ಗಮಕ ವ್ಯಾಖ್ಯಾನ ಮಾಡಿದ ಶಾಂತಾರವರಿಗೂ ಸುಮಧುರವಾದ ಗಾಯನ ಮಾಡಿದ ರಾಧಾರವರಿಗೂ ಹೃತ್ಪೂರ್ವಕ ವಂದನೆಗಳು.

ಆದರೆ ಮೊದಲು ನಡೆದ ಭಾಷಣ ಲಂಬವಾಯಿತು. ಇದರಿಂದಾಗಿ ಗಮಕ ವಾಚನ ಸ್ವಲ್ಪ ಕಡಿತವಾಯಿತೇನೋ?

ಸ್ವಲ್ಪ ಹೆಚ್ಚಾಯಿತು ಭಾಷಣವೆಂಬ ಸ್ವಾಗತ ಪೇಯ
ಮೃಷ್ಟಾನ್ನ ಭೋಜನಕೆ ಕಡಿತವಾಯಿತು ಸಮಯ

– ವೆಂಕಟೇಶ್ ಕೆ ಆರ್

ದೀಪೋತ್ಸವ/ಗಮಕೋತ್ಸವ

ಇಲ್ಲಿ ನಮ್ಮ ಬಡಾವಣೆಯ ನಾಗರಕಟ್ಟೆಯಲ್ಲಿ ಕಾರ್ತೀಕ ದೀಪೋತ್ಸವ. ಅಲ್ಲಿ ಗಮಕ ವ್ಯಾಖ್ಯಾನೋತ್ಸವ. ಎರಡೂ ಕಡೆ ಒಮ್ಮೆಯೇ ಇರಲು ಸಾಧ್ಯವಿಲ್ಲ. ಇರಲಿ ನಾಳೆ ನಮ್ಮ ಬಡಾವಣೆಯಲ್ಲಿ ದೀಪೋತ್ಸವ ಸಂಭ್ರಮ ಎಂದು ನಾವು ನಾಲ್ಕೂ ಜನ ಗಮಕ ಸಪರ್ಯೆಗೆ ಹೋದೆವು. ಬರದಿದ್ದರೆ ಎಂಥಾ ನಷ್ಟವಾಗುತ್ತಿತ್ತು ಎಂದು ಪದೇಪದೇ ಹೇಳಿಕೊಳ್ಳುವಂತಾಯಿತು.

ಎಂಥಾ ಸುಮಧುರ ಗಾಯನ! ಎಂಥಾ ಭಾವವಿದ್ವತ್‌ಪೂರ್ಣ ವ್ಯಾಖ್ಯಾನ. ಇಬ್ಬರ ತಾಳಮೇಳಗಳ ಜೋಡಿ ಒಂದು ರಸಮಯ ಸಂಜೆಗೆ ಹೇಳಿ ಮಾಡಿಸಿದ ಹಾಗಿತ್ತು. ಇನ್ನಷ್ಟು ಬೇಗ ಶುರುವಾಗಿದ್ದರೆ ಚೆನ್ನಾಗಿತ್ತು.

ರಾಮಾಯಣ ದರ್ಶನಂ ಮಹಾಕಾವ್ಯದ ಒಂದು ಭಾಗದ ಶಿಲಾತಪಸ್ವಿನಿಯ ಆಯ್ದ ಭಾಗಗಳ ರಸಾಸ್ವಾದಕ್ಕೆ ತಕ್ಕ ರಾಗಗಳ ಆಯ್ಕೆ, ಅಲ್ಲಿಯ ಕವಿಸಮಯ, ಕುವೆಂಪುರವರ ರಸಋಷಿ ಎಂಬ ಅಭಿಧೇಯವನ್ನು ಸಮರ್ಥಿಸುವ ರಸಘಟ್ಟಗಳ, ಪದಪ್ರಯೋಗಗಳ ಕುರಿತು ಶಾಂತಾ ಮೇಡಂ ವಿವರಿಸಿದ ರೀತಿ ಅನನ್ಯ ಅನುಭವ ಕೊಟ್ಟಿತು.

ಒಂದು ಸಾರ್ವಜನಿಕ ಗ್ರಂಥಾಲಯವು ಈ ರೀತಿಯಾಗಿಯೂ ಇರಬಹುದು ಎಂಬ ಊಹೆಗೂ ನಿಲುಕದ ಸಾಹಿತ್ಯ ಶಾರದೆಯ ದೇಗುಲದಂತೆ ಇತ್ತು. ಆನಂದ್ ಅವರು ಅಭಿನಂದನಾರ್ಹರು. ಹಾಗೆಯೇ ಇಂಥದ್ದೊಂದು ಸ್ಥಳದಲ್ಲಿ ಈ ಕಾರ್ಯಕ್ರಮ ನಡೆಸಿದ ಸಸಕಸ ಕಾರ್ಯಕಾರಿ ಸಮಿತಿಯ ಅಧ್ಯಕ್ಷರು, ಮತ್ತು ಕಾರ್ಯಕರ್ತರಿಗೆ ಅಭಿನಂದನೆಗಳು.

– ಸರಸ್ವತಿ ನಟರಾಜ್

***

ಗ್ರಂಥದ ಗುಡಿಯಲ್ಲೊಂದು ಸಂಗೀತ ರಸಸಂಜೆ

ನಿನ್ನೆ ನಡೆದ ' ಗ್ರಂಥದ ಗುಡಿಯಲ್ಲಿ ಗಮಕ ಸಪರ್ಯೆ', ರಾಧಾ+ಕೃಷ್ಣ+ಸ್ವರೂಪ ಅವರ ಹೆಸರಿನಂತೆಯೇ ಬಹಳ ಬಹಳ ವಿಶೇಷವಾದ ಕಾರ್ಯಕ್ರಮ. ಗಾಯನ ವ್ಯಾಖ್ಯಾನದ ಬಗ್ಗೆ ತಿಳಿದವರು ಎಲ್ಲಾ ಚಂದದ ಪ್ರತಿಕ್ರಿಯೆ ಕೊಟ್ಟಿದ್ದಾರೆ. ಗಾಯನವೂ ಅದ್ಭುತವಾಗಿತ್ತು ಅದಕ್ಕೆ ಶಾಂತಾ ಅವರ ವ್ಯಾಖ್ಯಾನವೂ ಬಹಳ ಅದ್ಭುತವಾಗಿತ್ತು. ಶಾಂತಾ ಅವರ ವ್ಯಾಖ್ಯಾನವಂತೂ ಕೇಳುಗರನ್ನು ಮಂತ್ರಮುಗ್ಧರನ್ನಾಗಿಸುತ್ತದೆ. ಬಹಳ ಬಹಳ ಚಂದದ ವ್ಯಾಖ್ಯಾನ ಅವರದ್ದು. ರಾಮಾಯಣವೇ ಆಗಲಿ ಭಾಗವತವೇ ಆಗಲಿ ಸಮಯ ಆಗಿಹೋಯಿತೇ ಅನ್ನಿಸುತ್ತದೆ. ಒಟ್ಟಿನಲ್ಲಿ ಸಮನ್ವಯ ಸಮಿತಿ ಒಂದೊಳ್ಳೆಯ ಕಾರ್ಯಕ್ರಮ ಏರ್ಪಡಿಸಿದ್ದಕ್ಕಾಗಿ ಸಂಚಾಲಕ ಬಳಗದವರಿಗೆ ಅನಂತ ಧನ್ಯವಾದಗಳು.

ಸಂಗೀತ ರಸ ಸಂಜೆ ಕಾರ್ಯಕ್ರಮ ನಡೆಯಲು ಗ್ರಂಥದ ಗುಡಿಯಲ್ಲಿ ಅವಕಾಶ ಕೊಟ್ಟು ನಮ್ಮೆಲ್ಲರನ್ನೂ ಗ್ರಂಥದ ಗುಡಿಗೆ ಬರಲು ಅವಕಾಶ ಮಾಡಿಕೊಟ್ಟ ಶ್ರೀಯುತ ಆನಂದ್ ಅವರಿಗೂ ಹೃತ್ಪೂರ್ವಕ ಧನ್ಯವಾದಗಳು

– ಮಂಗಳಾ ನಾಡಿಗ್

***

'ಗಮಕದ ಚಮಕ್'

ಶನಿವಾರದ 'ಗಮಕದ ಚಮಕ್' ವರ್ಣಿಸಲು ಶಬ್ದಗಳಿಗೆ ಶಕ್ತಿ ಇಲ್ಲ. ನಮ್ಮ ಕಣ್ಣೆದುರು ದಶರಥ, ರಾಮ, ಲಕ್ಷ್ಮಣ, ವಿಶ್ವಾಮಿತ್ರ, ತಾಟಕಿ, ಅಹಲ್ಯ, ಇಂದ್ರ, ಗೌತಮ, ಕೊನೆಗೆ ಸೀತೆ ಇವರೆಲ್ಲರೂ ಬಂದಂತೆ, ನಾವುಗಳು, ತ್ರೇತಾಯುಗದಲ್ಲಿ ಇರುವ ಹಾಗೆ ಮೋಡಿ ಮಾಡಿದರು, ರಾಧಾ ಕೃಷ್ಣ ಸ್ವರೂಪ ಹಾಗೂ ಶಾಂತಾ ನಾಗಮಂಗಲ ಅವರು. ಈ ಅಪರೂಪದ ಗಮಕ ವಾಚನ ಹಾಗೂ ವಿದ್ವತ್ಪೂರ್ಣ ವ್ಯಾಖ್ಯಾನ ನನ್ನನ್ನು ಯಾವುದೋ ಲೋಕಕ್ಕೆ ಕರೆದುಕೊಂಡು ಹೋಗಿತ್ತು. ಇಬ್ಬರೂ ವಿದುಷಿಯರಿಗೆ ಹೃತ್ಪೂರ್ವಕ ಧನ್ಯವಾದಗಳು.

– ರವೀಂದ್ರ ಬಾಳಿಹಳ್ಳಿ

ಗಮಕ ರಸಗಂಗೆಯಲ್ಲಿ ತೇಲಿದ ಅನುಭವ

ನಿನ್ನೆ ಏರ್ಪಡಿಸಲಾಗಿದ್ದ 'ಗ್ರಂಥದ ಗುಡಿಯಲ್ಲಿ ಗಮಕ ಚಮತ್ಕಾರ'ಕ್ಕೆ ಸಾಕ್ಷಿಯಾಗಿದ್ದು ನನ್ನ ಬದುಕಿನ ಒಂದು ಪುಣ್ಯ ವಿಶೇಷ ಎಂದೇ ತಿಳಿಯುತ್ತೇನೆ. ಸಭಾಂಗಣ ಭರ್ತಿಯಾಗಿದ್ದಷ್ಟೇ ಅಲ್ಲ, ಗಮಕ ವಾಚನ, ವ್ಯಾಖ್ಯಾನಗಳ ಇಡೀ ಅವಧಿ ಮಂತ್ರಮುಗ್ಧವಾಗಿ 'ಶಿಲಾತಪಸ್ವಿ'ಯ 180 ಸಾಲುಗಳ ರಸಾಸ್ವಾದನೆ ಮಾಡಿತು. ಮಹಾಕಾವ್ಯಗಳ ಕಾಲ ಮುಗಿದು ಹೋಯಿತು ಎಂಬಂಥ ಕಾಲಘಟ್ಟದಲ್ಲಿ 'ಶ್ರೀರಾಮಾಯಣ ದರ್ಶನ' ದ ಮೂಲಕ ಮಹಾಕವಿ ಕುವೆಂಪು ಅವರು ಮೂಲ ವಾಲ್ಮೀಕಿ ರಾಮಾಯಣಕ್ಕೆ ಹೊಸ ದೃಷ್ಟಿಯನ್ನು ಸೃಜಿಸಿ, ಕನ್ನಡವಷ್ಟೇ ಅಲ್ಲ, ಭಾರತೀಯ ಸಾಹಿತ್ಯ ವಲಯದಲ್ಲಿ ವಿಸ್ಮಯ ಮೂಡಿಸಿದ್ದು ಇತಿಹಾಸ.

"ಇತಿಹಾಸಮಲ್ತು ; ಬರಿ ಕಥೆಯಲ್ತು; ಕಥೆ ತಾಂ
ನಿಮಿತ್ತ ಮಾತ್ರಂ,ಆತ್ಮಕೆ ಶರೀರದೋಲಂತೆ.
ಮೆಯ್ವೆತ್ತುದಿಲ್ಲಿ ರಾಮನ ಕಥೆಯ ಪಂಜರದಿ
ರಾಮರೂಪದ ಪರಾತ್ಪರನ
ಪುರುಷೋತ್ತಮನ ಲೋಕಲೀಲಾ ದರ್ಶನಂ"

ಹೌದು, ವಿದುಷಿ ಶ್ರೀಮತಿ ಶಾಂತಾ ನಾಗಮಂಗಲ ಅವರ ಮಾತಿನಂತೆ ರಾಮಚಂದ್ರನ ಕಥೆ ಎಲ್ಲರಿಗೂ ತಿಳಿದಿರುವುದೇ ಆದರೂ ಅದನ್ನೊಂದು ರಸಪಾಕವಾಗಿ, ಪದ ಚಮತ್ಕಾರ ರೂಪಕವಾಗಿ, ದರ್ಶನ ಕೃತಿಯಾಗಿಸಿದ ಕುವೆಂಪು ಕನ್ನಡ ಕಾವ್ಯಲೋಕಕ್ಕೆ ಅಜರಾಮರ ಕೃತಿಯನ್ನು ಅರ್ಪಿಸಿದ್ದಾರೆ. ವಿದುಷಿ ಶ್ರೀಮತಿ ರಾಧಾ ಕೃಷ್ಣ ಸ್ವರೂಪ ಅವರ ಗಮಕ ರಸ ಗಂಗೆಯಲ್ಲಿ ನಾವು ತನ್ಮಯರಾಗಿ ತೇಲಿಹೋದರೆ, ಶಾಂತಾ ನಾಗಮಂಗಲ ಅವರ ವಿಸ್ತೃತ ವ್ಯಾಖ್ಯಾನ ಹಾಲಿಗೆ ಸೇರಿದ ಜೇನಿನಂತಿತ್ತು. ಕುವೆಂಪು ಅವರ ಸನಾತನತೆ, ಭಾರತೀಯ ಸಂಸ್ಕೃತಿ, ಜೀವನ ಮೌಲ್ಯಗಳು, ಅಧ್ಯಾತ್ಮ ಎಲ್ಲದರ ಅನಾವರಣದಲ್ಲಿ ನಾವೆಲ್ಲ ಮಿಂದು ಪುನೀತರಾದೆವು.

ವಿಶ್ವಾಮಿತ್ರರ ಜೊತೆ ರಾಮ ಲಕ್ಷ್ಮಣರನ್ನು ಕಳಿಸಿಕೊಡುವ ಸಂದರ್ಭ, ಆ ಪ್ರೌಢ ರಾಜಪುತ್ರರು ಅರಣ್ಯದ ಅನುಭವದಿಂದ ಅರಮನೆಯ ವೈಭವವೇ ಬಡವಾಯಿತೆನಿಸುವ ಪರಿ, ತಾಟಕಿ ಹನನ, ಅಹಲ್ಯ ಶಾಪ ವಿಮೋಚನೆ, ಸೀತಾ ಪರಿಣಯ– ಈ ಪ್ರಸಂಗಗಳ ಒಂದು ರಸಘಟ್ಟಿ ನಿನ್ನೆಯ 'ಗಮಕ ಆರಾಧನೆ'ಯಾಗಿತ್ತು.

ಗಮಕ, ವ್ಯಾಖ್ಯಾನಗಳಷ್ಟೇ ರುಚಿಕಟ್ಟಾಗಿತ್ತು ಕೊಬ್ಬರಿ ಮಿಠಾಯಿ, ಬಿಸಿಬೇಳೆ ಭಾತ್, ಮೊಸರನ್ನ, ಆಂಬೊಡೆಯ ಬಫೆಯೂಟ. ಕಾರ್ಯಕ್ರಮವನ್ನು ನಿಗದಿತ ಸಮಯಕ್ಕೆ ಸರಿಯಾಗಿ ಆರಂಭಿಸಿದ್ದರೆ ದೂರದಿಂದ ಬಂದಿದ್ದವರಿಗೆ ಸಾರಿಗೆ ದೃಷ್ಟಿಯಿಂದ ಅನುಕೂಲ ಆಗಿರುತ್ತಿತ್ತು. ಗ್ರಂಥಾಲಯಕ್ಕೆ ಪುಸ್ತಕ ದಾನವನ್ನು ಕೂಡಾ ಮೊದಲೇ ಮಾಡಿಸಬಹುದಿತ್ತು.

ಗ್ರಂಥಪಾಲಕರಾದ ಶ್ರೀ ಆನಂದ್ ಹಾಗೂ ಅವರ ಸಿಬ್ಬಂದಿ, ಸಸಕಸ ವೇದಿಕೆಯ ಸಂಚಾಲಕರು ಅಭಿನಂದನಾರ್ಹರು.

– ಕೆ ಎನ್ ಭಗವಾನ್

***

ಅದ್ಭುತ ಕಾರ್ಯಕ್ರಮ

ಶನಿವಾರದ ಗಮಖ ಸಪರ್ಯೆ ಒಂದು ಅದ್ಭುತ ಕಾರ್ಯಕ್ರಮ. ನನ್ನ ನಾಲ್ಕೂವರೆ ದಶಕಗಳ ಕನ್ನಡ ಸಂಘ ಹಾಗೂ ಸಮನ್ವಯ ಸಮಿತಿಯ ಒಡನಾಟದಲ್ಲಿ ಮೊದಲ ಬಾರಿ ಇಂತಹ ಕಾರ್ಯಕ್ರಮ ನೋಡಿದ್ದು. ಇದನ್ನು ಆಯೋಜಿಸಿದ ಗ್ರಂಥಪಾಲಕರಾದ ಆನಂದ್, ನಮ್ಮವರೇ ಆದ ರವೀಂದ್ರ ಹಾಗೂ ಮಹಾಬಲ ಅವರುಗಳಿಗೆ ಅಭಿನಂದನೆಗಳು.

– ಕೆ ಎನ್ ಜಯರಾಮ

ಗ್ರಂಥದ ಗುಡಿಯಲ್ಲಿ ಗಮಕ ಸಪರ್ಯೆ

ಅತ್ಯಾಕರ್ಷಕ ಶಿರೋನಾಮೆಯಿಂದಲೇ ನಮ್ಮೆಲ್ಲರ ಕುತೂಹಲವನ್ನು ಕೆರಳಿಸಿದ್ದ ಕಾರ್ಯಕ್ರಮ ನಿನ್ನೆ ಕುಮಾರಸ್ವಾಮಿ ಬಡಾವಣೆಯ ಸಾರ್ವಜನಿಕ ಗ್ರಂಥಾಲಯದಲ್ಲಿ ಅನಾವರಣಗೊಂಡಿತು. ಈ ಗ್ರಂಥಾಲಯ 'ಗ್ರಂಥದ ಗುಡಿ'ಏಕೆ? 'ಗಮಕ ಸಪರ್ಯೆ' ಎಂದರೇನು? ಎನ್ನುವ ನಮ್ಮ ಮನದ ಪ್ರಶ್ನೆಗಳಿಗೆ ಸಿಕ್ಕ ಉತ್ತರವಂತೂ ಅತ್ಯದ್ಭುತವಾದದ್ದು. ಶ್ರೀ ಆನಂದ್ ಅವರು ನಿಜಕ್ಕೂ ಈ ಗ್ರಂಥಾಲಯವನ್ನು ಒಂದು ದೇಗುಲವನ್ನಾಗೇ ಮಾಡಿದ್ದಾರೆ. ಒಂದು ಮಾದರಿ ಗ್ರಂಥಾಲಯ ಹೇಗಿರಬೇಕು ಎನ್ನುವುದಕ್ಕೆ ನಿದರ್ಶನವಾಗಿದೆ ಈ ಸಾರ್ವಜನಿಕ ಗ್ರಂಥಾಲಯ. ಬಾಗಿಲಲ್ಲೇ ಕುರ್ಚಿಯಲ್ಲಿ ಕುಳಿತು ಎಲ್ಲರನ್ನೂ ಸ್ವಾಗತಿಸುತ್ತಿದ್ದ ಬೊಂಬೆ, ಗೋಡೆಯ ಮೇಲೆಲ್ಲಾ ದೇವಿ ಸರಸ್ವತಿಯ, ಭಾರತಮಾತೆಯ, ಇಸ್ರೋ ಉಡಾವಣಾ ಕೇಂದ್ರದ... ಹೀಗೆ ಮಕ್ಕಳೊಂದಿಗೆ ಹಿರಿಯರನ್ನೂ ಆಕರ್ಷಿಸುವ ಚೆಲುವಾದ ಚಿತ್ರಗಳು, ಎಲ್ಲಕಡೆಯೂ ಎದ್ದು ತೋರುತ್ತಿದ್ದ ಸೌಂದರ್ಯ ಪ್ರಜ್ಞೆ, ಅಚ್ಚುಕಟ್ಟುತನ, ಲಭ್ಯವಿದ್ದ ಸಾಕಷ್ಟು ಪುಸ್ತಕಗಳು, ಕತೆ ಹೇಳುತ್ತಿದ್ದ ಹಿರಿಯ ಮಾಸ್ತರು–ಮಕ್ಕಳು... ಈ ಗುಡಿಯ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳಲು ಎಷ್ಟೊಂದು ಕಾರಣಗಳಿವೆ! ಬರಿಯ ಮಕ್ಕಳಷ್ಟೇ ಅಲ್ಲ ಆ ಬಡಾವಣೆಯ ಸಾಕಷ್ಟು ಹಿರಿಯರನ್ನೂ ಆಕರ್ಷಿಸಿರುವುದು ಈ ಗ್ರಂಥಾಲಯದ ವಿಶೇಷವೇ ಸರಿ. ಇವರೆಲ್ಲರೊಂದಿಗೆ ಸಮನ್ವಯ ಸಮಿತಿಯ ನಾವೆಲ್ಲರೂ ಒಡಗೂಡಿ ಸಂಭ್ರಮಪಟ್ಟಿದ್ದು ನಮ್ಮ ಜೀವನದ ಮರೆಯಲಾಗದ, ಮರೆಯಬಾರದ ಘಟನೆಗಳಲ್ಲಿ ಒಂದಾಗಿ ಹೋಗಿದೆ ಎನ್ನುವುದು ಖಂಡಿತವಾಗಿಯೂ ಉತ್ಪ್ರೇಕ್ಷೆಯೇನಲ್ಲ.

ಇಂತಹ ಶಾರದೆಯ ದೇಗುಲದಲ್ಲಿ ನಿನ್ನೆ ನಡೆದ ಗಮಕ ಸಪರ್ಯೆ ಎಂದರೆ ಗಮಕದ ವಾಚನ, ವ್ಯಾಖ್ಯಾನದ ಪೂಜೆಯನ್ನು ಕಂಡು, ಕೇಳಿ, ಅನುಭವಿಸಿದ್ದಷ್ಟೇ ಗೊತ್ತು. ಕುಳಿತಿದ್ದವರನ್ನು ಎದ್ದೇಳದಂತೆ ಹಿಡಿದಿಟ್ಟಿದ್ದು ವಿದುಷಿ ರಾಧಾ ಕೃಷ್ಣ ಸ್ವರೂಪ ಅವರ ಅದ್ಭುತ ಗಾಯನ ಮತ್ತು ನಮ್ಮ ವೇದಿಕೆಯ ಹಿರಿಮೆ ವಿದುಷಿ ಶ್ರೀಮತಿ ಶಾಂತಾ ಗೋಪಾಲ್ ಅವರ ಅಸ್ಖಲಿತ ವ್ಯಾಖ್ಯಾನ. ಸುಮಾರು ಹತ್ತು ವರ್ಷಗಳಷ್ಟು ದೀರ್ಘ ಅವಧಿಯಲ್ಲಿ ಕುವೆಂಪು ಅವರು ರಚಿಸಿದ ರಾಮಯಣ ದರ್ಶನಂ ಕನ್ನಡ ಸಾಹಿತ್ಯದಲ್ಲಿ ಏಕೆ ಒಂದು ಮೈಲಿಗಲ್ಲಾಗಿ ನಿಂತಿದೆ ಎನ್ನುವುದು ನಿನ್ನೆ ಸಭಿಕರೆಲ್ಲರ ಅನುಭವಕ್ಕೂ ದಕ್ಕಿದ ವಿಷಯವಾಯಿತು. ಸನ್ನಿವೇಶಕ್ಕೆ ತಕ್ಕಂತಹ ರಾಗವನ್ನು ಸಂಯೋಜಿಸಿ, ಅದಕ್ಕೆ ತಕ್ಕಂತೆ ಧ್ವನಿಯನ್ನು, ಭಾವವನ್ನು ಸಂಯೋಜಿಸಿ, ಪದಗಳ ಸಾಲುಗಳ ಪುನರುಚ್ಚರಣೆ ಮಾಡಿ, ಪ್ರತಿಯೊಂದು ಸಲವೂ ಚಪ್ಪಾಳೆ ಗಿಟ್ಟಿಸಿಕೊಂಡ ರಾಧಾ ಕೃಷ್ಣ ಸ್ವರೂಪ ಅವರು ನಮಗರಿವಾಗದಂತೆಯೇ ನಮ್ಮನ್ನು ಅವರ ಗಾಯನದ ಮೋಡಿಗೆ ಸಿಲುಕಿಸಿಕೊಂಡುಬಿಟ್ಟಿದ್ದರು. ತಾಟಕಿಯ ಪ್ರವೇಶದ ಭಾಗವನ್ನು ಅವರು ಹಾಡುತ್ತಿದ್ದಂತೆಯೇ "ಬಂದಳು... ಬಂದಳು... ತಾಟಕಿ ಬಂದೇಬಿಟ್ಟಳು" ಎಂದು ಸಭಿಕರು ಉದ್ಗರಿಸಿದ್ದು ಇದಕ್ಕೊಂದು ಉದಾಹರಣೆ. ಇನ್ನು ರಾಮಾಯಣ ದರ್ಶನಂ ಕಾವ್ಯದ ವಿಶೇಷತೆ, ಅಲ್ಲಿನ ಛಂದಸ್ಸಿನ ಸೂಕ್ಷ್ಮಗಳು, ಕುವೆಂಪುರವರ ಸ್ವೋಪಜ್ಞತೆಯ ಉಪಮೆಗಳು, ಕಾವ್ಯದ ರಸಘಟ್ಟಗಳನ್ನು ಮನ ಮುಟ್ಟಿಸಿದವರು ಶಾಂತಾ ಗೋಪಾಲ್. ಇಬ್ಬರೂ ಸಮಶ್ರುತಿಯ ವೀಣೆಗಳಂತೆ ಒಬ್ಬರಿಗೊಬ್ಬರು ಮಿಡಿಯುತ್ತಿದ್ದದ್ದು ಇಡೀ ಕಾರ್ಯಕ್ರಮದ ವಿಶೇಷ. ಒಂದರ್ಥದಲ್ಲಿ ನಾವೆಲ್ಲರೂ ಶಾರದೆಯ ಸನ್ನಿಧಿಯಲ್ಲಿ ದಿವ್ಯಾನುಭವವನ್ನು ಪಡೆದು ಪುನೀತರಾಗಿದ್ದೆವು.

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಮುಖ್ಯ ಸಂಚಾಲಕ ಬೆಂ.ಶ್ರೀ.ರವೀಂದ್ರರ ಮನಸ್ಸಿನಲ್ಲಿ ಯಾವುದೇ ಕಾರ್ಯಕ್ರಮ ಬಂತೆಂದರೆ, ಅದರ ಪರಿಪೂರ್ಣತೆಯತ್ತ, ಅಚ್ಚುಕಟ್ಟುತನದತ್ತ ಸಂಪೂರ್ಣ ಗಮನಹರಿಸುವುದು ಅವರ ಜಾಯಮಾನ ಹಾಗೂ ಸಹಜ ಸ್ವಭಾವ. ಹಾಗಾಗಿ ಸಮಯಕ್ಕೆ ಸರಿಯಾಗಿ ಆರಂಭದಿಂದ ಮುಕ್ತಾಯದ ತನಕ ಎಲ್ಲವೂ ಚೊಕ್ಕವಾಗಿ ಪಾಲನೆಯಾಗಿತ್ತು. ನಂತರದ ಹಿತಮಿತದ ಭೋಜನ ಕೂಡಾ ಅಚ್ಚುಕಟ್ಟಾಗಿತ್ತು. .

ಇಂತಹ ಧನ್ಯತೆಯ ಕ್ಷಣಗಳನ್ನು ನಮ್ಮದಾಗಿಸಿದ ವಿದುಷಿ ರಾಧಾ ಕೃಷ್ಣ ಸ್ವರೂಪ ಮತ್ತು ವಿದುಷಿ ಶಾಂತಾ ನಾಗಮಂಗಲ ಅವರಿಗೆ, ಗ್ರಂಥಾಲಯ ಪಾಲಕ ಶ್ರೀ ಆನಂದ್ ಅವರಿಗೆ ಹಾಗೂ ಸಮನ್ವಯ ಸಮಿತಿಯ ಎಲ್ಲರಿಗೂ ಹೃತ್ಪೂರ್ವಕ ನಮನಗಳು.

– ಟಿ. ಎಸ್. ಶ್ರವಣ ಕುಮಾರಿ

ಬೆರಗುಗೊಳಿಸಿದ ವಿದ್ವತ್ ಪ್ರೌಢಿಮತೆ

ನಿನ್ನೆಯ ಸಂಜೆ ಗ್ರಂಥಾಲಯದಲ್ಲಿ ನಡೆದ ರಸಋಷಿ ಮಹಾಕವಿ ಕುವೆಂಪು ಅವರ ರಾಮಾಯಣ ದರ್ಶನದಿಂದ ಆಯ್ದ ಭಾಗ "ಶಿಲಾತಪಸ್ವಿನಿ" ಗಮಕ ಸಪರ್ಯೆ, ಇಬ್ಬರು ಮಹಾ ಕಲಾವಿದೆಯರ ಸುಮಧುರ ಕಂಠ ಮತ್ತು ವ್ಯಾಖ್ಯಾನದಿಂದ ಕೇಳುಗರ ಮನದಲ್ಲಿ ರಸಧಾರೆ ಹರಿಸಿತ್ತು. ವಿದುಷಿ ಶ್ರೀಮತಿ ರಾಧಾಕೃಷ್ಣ ಸ್ವರೂಪ ಅವರ ಕಂಚಿನ ಕಂಠದ ಮಾಧುರ್ಯ, ವಿದುಶಿ ಶಾಂತಾ ನಾಗಮಂಗಲ ಅವರ ವ್ಯಾಖ್ಯಾನ ಎಲ್ಲರನ್ನು ಹೊಸ ಲೋಕಕ್ಕೆ ಸೆಳೆದಿತ್ತು.

ತಾಟಕವನದ ದುಃಸ್ಥಿತಿ, ಅಹಲ್ಯೆ ಶಿಲೆಯಾಗಿದ್ದ ಗೌತಮ ಮುನಿಯ ಆಶ್ರಮದಲ್ಲಿನ ವಿಷಾದ, ಮಿಥಿಲೆಯಲ್ಲಿ ಸೀತೆ ಸಂಚರಿಸುತ್ತಿದ್ದ ಪುಷ್ಪವಾಟಿಕೆಯ ಸುಂದರತೆ, ಈ ವಿಭಿನ್ನ ಪರಿಸರಗಳ ವರ್ಣನೆಗಳನ್ನು ವಿದುಷಿ ಶಾಂತಾ ಅವರು ತಮ್ಮ ವ್ಯಾಖ್ಯಾನದಲ್ಲಿ ವಿಭಿನ್ನ ಸಾಹಿತ್ಯ ಕಾವ್ಯಗಳನ್ನು ಉದಾಹರಿಸಿ ತೆರೆದಿಟ್ಟ ರೀತಿ, ಅವರ ವಿದ್ವತ್ತಿನ ಪ್ರೌಢಿಮತೆ ನಮ್ಮೆಲ್ಲರನ್ನು ಬೆರಗುಗೊಳಿಸಿತ್ತು. ವಿದುಷಿ ರಾಧಾ ಕೃಷ್ಣ ಸ್ವರೂಪ ಅವರ ಸಂಧರ್ಭಕ್ಕೆ ತಕ್ಕ ರಾಗಗಳ ಜೋಡಣೆಯ ಗಾಯನ, ತಾಟಕವನದ ರೌದ್ರತೆ, ಗೌತಮನ ಆಶ್ರಮದಲ್ಲಿನ ನಿಶಬ್ದತೆಯ ವಿಶಾದ, ಮಿಥಿಲೆಯ ಹೂತೋಟದ ಆಹ್ಲಾದತೆ, ಅವರ ಕಂಠಸಿರಿಯಲ್ಲಿ ಕೇಳುಗರ ಮನಸ್ಸಿನಲ್ಲಿ ಇನ್ನಷ್ಟು ಕೇಳಬೇಕೆನಿಸುವ ಭಾವ ಮೂಡಿಸಿತ್ತು.

ಶನಿವಾರ ರಾಮನ ಸ್ಥಿತಿ ವಾರದಲ್ಲಿ ಇದು ಸಂದರ್ಭೋಚಿತ ಕಾರ್ಯಕ್ರಮ, ಬಂದು ಕೇಳದ್ದು ಧನ್ಯೋಸ್ಮಿ ಅನ್ನುವ ಭಾವ ನನ್ನ ಮನಕ್ಕೆ ಬಂದಿತ್ತು. ವಿದುಷಿ ಶಾಂತ ನಾಗಮಂಗಲ ಅವರಿಗೂ ಮತ್ತು ವಿದುಷಿ ಸ್ವರೂಪ ಅವರಿಗೂ ಹೃತ್ಪೂರ್ವಕ ಅಭಿನಂದನೆಗಳು, ವಿದುಷಿ ಶಾಂತ ನಾಗಮಂಗಲ ಅವರನ್ನು ಸನ್ಮಾನಿಸಿ ಗೌರವಿಸುವ ಅವಕಾಶ ಮಾಡಿಕೊಟ್ಟ ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಸಂಚಾಲಕರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

– ಮಾಲತಿ ಶ್ರೀನಿವಾಸನ್

ಗಮಕ ಸಪರ್ಯೆ

ಪದವಿಗಳ ಸರಮಾಲೆ ಕೊರಳಲಂಕರಿಸಿದರು
ಮದವಿನಿತು ಇಲ್ಲದಿಹ ವಿರಳತೆಯ ಶಾಂತ
ಸದಭಿರುಚಿ ವರ್ಧಿಸುವ ಮೋಹಕತೆ ರಾಧಾರ
ಮಧುರ ಗಮಕದ ಪೂಜೆ ನೇತ್ರತನಯೆ.

ಕಸವರದ ಹೊಳಪಿನಲಿ ವ್ಯಾಖ್ಯಾನ ವಾಚನವು
ಪಸರಿಸಿತು ತಂಬೆಲರ ಕೇಳುಗರ ಮನದಿ
ರಸ ಋಷಿಯ ಕಾವ್ಯ ಆಸ್ವಾದಿಸಿದ ಆನಂದ
ರಸಧಾರೆ ಔತಣವು ನೇತ್ರತನಯೆ.

ಲಂಬಿಸದೆ ಬಿಂಬಿಸಿಹ ಚುಂಬಕದ ಸೆಳೆತದಲಿ
ಅಂಬರವು ಧರೆಯೊಳಗೆ ಇಣುಕುತಲಿ ನಿಂದು
ಹಂಬಲಿಸಿ ರಾಮನನು ಸಂದರ್ಶಿಸಿದೆ ಮರಳಿ
ತುಂಬುರನ ಗಾನಸುಧೆ ನೇತ್ರತನಯೆ.

ಪದಪುಂಜ ಮಣಿಹಾರ ಅರ್ಪಿಸುತ ಸರಸತಿಗೆ
ಹದುಳದಲಿ ಅರ್ಥೈಸೊ ಗಮಕಿಯರ ಮೋಡಿ
ವಿದುಷಿಯರ ಒಂದಂಶ ನಮಗೆ ದೊರಕಲಿ ಎನುತ
ಕದವನ್ನು ತೆರೆದಿಡುವ ನೇತ್ರತನಯೆ.

– ಪೂರ್ಣಿಮ ಭಗವಾನ್.

***

ಕೇಳುಗರಿಗೆ ರಸದೌತಣ

ನೆನ್ನೆ ನಡೆದ ಗಮಕ ವಾಚನ ಮತ್ತು ವ್ಯಾಖ್ಯಾನ ಕಾರ್ಯಕ್ರಮ ಬಹಳ ವಿಶಿಷ್ಟವಾದುದು. ವಿದುಷಿ ಶ್ರೀಮತಿ ರಾಧಾ ಕೃಷ್ಣ ಸ್ವರೂಪರ ವಾಚನ, ಕಾವ್ಯದಲ್ಲಿ ಬರುವ ಸನ್ನಿವೇಶಕ್ಕೆ ತಕ್ಕ ಧ್ವನಿಯ ಏರಿಳಿತ ಹಾಗೂ ಸೂಕ್ತವಾದ ನವರಸಗಳಿಂದ ಕೇಳುಗರಿಗೆ ರಸದೌತಣವಾಗಿತ್ತು. ಶ್ರೀಮತಿ ಶಾಂತ ನಾಗಮಂಗಲರವರ ವ್ಯಾಖ್ಯಾನವಂತೂ ಅವರ ಅದ್ಭುತ ವಿದ್ವತ್ತಿಗೆ ಹಾಗೂ ಶಬ್ದ ಭಂಡಾರಕ್ಕೆ ಹಿಡಿದ ಕೈಗನ್ನಡಿಯಾಗಿ ಕೇಳುಗರಿಗೆ ಬೇರೆ ಲೋಕಕ್ಕೆ ಕೊಂಡೊಯ್ದಿತ್ತು ಎಂದರೆ ಆಶ್ಚರ್ಯವೇನಿಲ್ಲ. ಈ ಕಾರ್ಯಕ್ರಮ ಎಷ್ಟು ಬೇಗ ಮುಗಿದು ಹೋಯಿತು ಎಂದೆನಿಸಿತು. ಶ್ರೀ ಆನಂದ್ ಹಾಗೂ ಎಲ್ಲಾ ಪ್ರಾಯೋಜಕರಿಗೆ ನನ್ನ ವಂದನೆಗಳು ಮತ್ತು ಧನ್ಯವಾದಗಳು.

– ವೆಂಕಟಸುಬ್ಬು

‘ಗಮಕ ಸಪರ್ಯೆ’ – ಹೊಸ ಶಬ್ದ, ಹೊಸ ಅನುಭವ

‘ಗಮಕ ಸಪರ್ಯೆ – ಇದು ನನಗೆ ಹೊಸ ಶಬ್ದವಾಗಿತ್ತು. ಅದನ್ನು ಆಲಿಸುವುದೂ ಹೊಸ ಅನುಭವವಾಗಿತ್ತು. ರಾಮಾಯಣದ ಕತೆ ಎಲ್ಲರಿಗೂ ಗೊತ್ತು. ಆದರೆ ರಾಮಾಯಣದ ರುಚಿ ಬಹಳ ಜನರಿಗೆ ಗೊತ್ತಿಲ್ಲ. ಅದರಲ್ಲೂ ನಿನ್ನೆಯ ಗಮಕ ಮತ್ತು ವ್ಯಾಖ್ಯಾನ ಸಸಕಸದ ಅತ್ಯುತ್ತಮ ಕಾರ್ಯಕ್ರಮಗಳಲ್ಲೊಂದು. ಹಾಲು, ಜೇನು, ತುಪ್ಪ, ಬಾಳೆಹಣ್ಣು, ಪಚ್ಚ ಕರ್ಪೂರಗಳ ರಸಾಯನ. ಬರಿ ಸಿಹಿ ಅಲ್ಲ, ಹಿತವಾದ ಸಿಹಿ. ಕಲೆಯ ಬೆಲೆ ತಿಳಿಯಲು ಇಂತಹ ಕಾರ್ಯಕ್ರಮಗಳಿಗೆ ಸಾಕ್ಷಿಯಾಗಬೇಕು.

– ವಿಠಲ್ ಇಜೇರಿ

***

ಸಂಗೀತ ಸಾಹಿತ್ಯದ ರಸದೌತಣ

ನಿನ್ನೆ ಸಂಜೆ ಗ್ರಂಥಾಲಯದಲ್ಲಿ ನಡೆದ ಗಮಕ ವಾಚನ, ವ್ಯಾಖ್ಯಾನ ಸಸಕಸದ ಅತ್ಯುತ್ತಮ ಕಾರ್ಯಕ್ರಮಗಳಲ್ಲೊಂದು. ತಪ್ಪಿಸಿಕೊಂಡಿದ್ದರೆ ತುಂಬಾ ಲುಕ್ಸಾನೇ ಆಗುತ್ತಿತ್ತು. ಸಂಗೀತ, ಸಾಹಿತ್ಯದ ರಸದೌತಣ ಉಣಬಡಿಸಿದ ಆಯೋಜಕರಿಗೆ ಧನ್ಯವಾದಗಳು.

– ಜನಾರ್ಧನ ಭಟ್

***

ಗಮಕ ಸಪರ್ಯೆ – ರಸಋಷಿಗೆ ನಮನ

ಸುಮಾರು ಎರಡು ಗಂಟೆಗಳ ಕಾಲ ಶ್ರೋತೃಗಳನ್ನು ಸೆರೆ ಹಿಡಿದಿಟ್ಟುಕೊಂಡ ಅದ್ಭುತ ಕಾರ್ಯಕ್ರಮ. ಕಾವ್ಯವೆಂದರೆ ಇದು, ಅದನ್ನು ಆಸ್ವಾದಿಸುವ ಪರಿ ಹೀಗೆ ಎಂದು ತೋರಿಸಿಕೊಟ್ಟಂತಿತ್ತು. ಆಯ್ದ ಕೆಲವೇ ಪದ್ಯಗಳ ವಾಚನ ವ್ಯಾಖ್ಯಾನ ಕೃತಿಯ ಶ್ರೇಷ್ಠತೆಯನ್ನು ಪರಿಚಯಿಸಿತು. ಮನಸ್ಸು ರಸಋಷಿಗೆ ನಮಿಸಿತು. ಶ್ರೀಮತಿ ಶಾಂತಾ ನಾಗಮಂಗಲ ಹಾಗೂ ಶ್ರೀಮತಿ ರಾಧಾರವರಿಗೆ ಹಾಗೂ ಆಯೋಜಕರಿಗೆ ಅಭಿನಂದನೆಗಳು.

– ಶ್ರೀಪ್ರಕಾಶ್

***

ಮನದಾಳಕ್ಕಿಳಿದ ಕರ್ಣಾನಂದಕರ ಗಮಕ ವಾಚನ, ವ್ಯಾಖ್ಯಾನ

ಇಂದು ಸಸಕಸ ವೇದಿಕೆಯಿಂದ ಆಯೋಜಿಸಿದ್ದ ಗಮಕ ವಾಚನ ಮತ್ತು ವ್ಯಾಖ್ಯಾನ ಕಾರ್ಯಕ್ರಮ ಅದ್ಭುತವಾಗಿತ್ತು. ವಿದುಷಿಯರಾದ ಶ್ರೀಮತಿ ರಾಧಾ ಕೃಷ್ಣ ಸ್ವರೂಪ ಮತ್ತು ಶ್ರೀಮತಿ ಶಾಂತಾ ನಾಗಮಂಗಲ ಅವರು ಬಹಳ ಸೊಗಸಾಗಿ ಕರ್ಣಾನಂದಕರವಾಗಿ ನಡೆಸಿಕೊಟ್ಟಿದ್ದು ಸಭಿಕರ ಮನದಾಳಕ್ಕಿಳಿಯಿತು. ಕಾರ್ಯಕ್ರಮದ ಮಧ್ಯೆ ಮಧ್ಯೆ ಶಾಂತಾರಾಮ್ ಹಾಸ್ಯ ಚಟಾಕಿಗಳನ್ನು ಸಿಡಿಸುತ್ತಿದ್ದುದು ಖ್ಯಾತ ಹರಿಕಥಾ ವಿದ್ವಾನ್ ಗುರುರಾಜಲು ನಾಯ್ಡು ಅವರನ್ನು ನೆನೆಪಿಸಿತು. ಕುವೆಂಪುರವರ 'ಶ್ರೀ ರಾಮಾಯಣ ದರ್ಶನಂ' ಕೃತಿಯ ಹಲವು ಭಾಗಗಳನ್ನು ಕೇಳಿ ಕೃತಾರ್ಥರಾದೆವು ಎಂದು ಹೇಳಲು ಸಂತೋಷವೆನಿಸುತ್ತದೆ.

ನಾನು ಗಮಕವನ್ನು ಹಲವು ಬಾರಿ ಆಲಿಸಿದ್ದರೂ ಅದು ಇಪ್ಪತ್ತು ನಿಮಿಷಗಗಳಿಗೂ ಹೆಚ್ಚಿರಲಿಲ್ಲ. ಆದರೆ ಈ ಕಾರ್ಯಕ್ರಮವನ್ನು ಸುಮಾರು ಎರಡು ಗಂಟೆಗಳ ಕಾಲ ಮತ್ತು ಪೂರ್ವಭಾವಿ ಒಂದು ಗಂಟೆ ಅಂದರೆ ಒಟ್ಟು ಮೂರು ಗಂಟೆಗಳ ಕಾಲ ಒಂದೇ ಸಮ ಕೂತು ಆಸ್ವಾದಿಸಿದ್ದು ಇದೇ ಮೊದಲು. ಆ ಸಮಯ ಕಳೆದಿದ್ದು ಅರಿವಿಗೇ ಬಾರಲಿಲ್ಲ.

ಇಬ್ಬರೂ ವಿದುಷಿಯರಿಗೆ ಹಾಗೂ ಸಸಕಕಸ ವೇದಿಕೆಗೆ ಧನ್ಯವಾದಗಳು..

– ಪತ್ತಂಗಿ ಎಸ್. ಮುರಳಿ

‘ಗ್ರಂಥದ ಗುಡಿಯಲ್ಲಿ ಗಮಕದ ಸಪರ್ಯೆ’ – ಮೂಡಿದ್ದು ಹೀಗೆ

– ಬೆಂ.ಶ್ರೀ. ರವೀಂದ್ರ

ಸುಮಾರು ದಿನಗಳ ಹಿಂದೆ ಶಾಂತಾ ಅವರನ್ನು ಶ್ರೀ ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದ ಗಮಕ ಕಾರ್ಯಕ್ರಮವೊಂದನ್ನು ಆನ್‌ಲೈನ್‌ನಲ್ಲಿ ನಡೆಸಿಕೊಡಬೇಕೆಂದು ಕೇಳಿದ್ದೆ. ಶಾಂತಾ ಅವರು, "ಆನ್ ಲೈನ್ ಬೇಡ. ಮುಖತಃ ಕಾರ್ಯಕ್ರಮವಾದರೆ ಹೇಳಿ" ಎಂದರು. ನನಗೆ ಸ್ವಲ್ಪ ನಿರಾಶೆಯಾದಿದ್ದು ನಿಜ. ಆದರೆ ಸಸಕಸವು ಇತ್ತೀಚಿಗೆ ತೀವ್ರವಾದ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದರಿಂದ ಇದು ಸಾಧ್ಯವೆನಿಸಿ "ಆಗಲಿ" ಎಂದೆ.

ಈ ಮಧ್ಯೆ, ದಸರೆಗೆ ಮುನ್ನ ಗೆಳೆಯ ಪತ್ತಂಗಿಯವರು ಕರೆ ಮಾಡಿ "ನೀವು ಕುಮಾರಸ್ವಾಮಿ ಕೇಂದ್ರ ಗ್ರಂಥಾಲಯದ ಜ್ಞಾನದಸರಾ ಕಾರ್ಯಕ್ರಮಕ್ಕೆ ಬನ್ನಿ. ತಾರೀಖನ್ನು ನೀವೇ ನಿರ್ಧರಿಸಿ" ಎಂದರು. ಮಹಾಬಲರು ನನಗೆ ಆನೇಕ ಸಲ ಈ ಗ್ರಂಥಾಲಯಪಾಲಕರಾದ ಆನಂದ್ ಅವರ ಅಪಾರ ಕಾರ್ಯನಿಷ್ಠೆ, ತೊಡಗಿಕೊಳ್ಳುವಿಕೆಯ ಬಗ್ಗೆ ಹೇಳಿದ್ದರು. ನನ್ನ ಮನೆಗೆ ಸಮೀಪವೇ ಇದ್ದರೂ ನಾನು ಗ್ರಂಥಾಲಯಕ್ಕೆ ಹೋಗಿರಲಿಲ್ಲ. ಈಗ ಕಾಲ ಕೂಡಿಬಂದಿತ್ತು. "ಆಗಲಿ ಪತ್ತಂಗಿ. ಅಕ್ಟೋಬರ್ ಇಪ್ಪತ್ತನೆಯ ತಾರೀಖಿನಂದು ಬರುತ್ತೇನೆ" ಎಂದೆ.

ಅಂದಿನ ಜ್ಞಾನದಸರೆಯ ಕಾರ್ಯಕ್ರಮ ಬಹಳ ಚೆನ್ನಾಗಿ ಮೂಡಿಬಂತು. ಗ್ರಂಥಾಲಯವನ್ನು ನೋಡಿ ಸಂತಸಪಟ್ಟೆ. ಅದು ಕೇವಲ ಗ್ರಂಥಾಲಯ/ವಾಚನಾಲಯವಾಗಿರಲಿಲ್ಲ. ಅದೊಂದು ಸಕ್ರಿಯ ಸಾಂಸ್ಕೃತಿಕ ಕೇಂದ್ರವಾಗಿತ್ತು. ಪುಟ್ಟ ಮಗು ಕಥೆ ಕೇಳು, ಜ್ಞಾನದಸರಾ, ಹಲವು ಮುಖ್ಯ ವ್ಯಕ್ತಿಗಳ ಹುಟ್ಟಿದ ಹಬ್ಬಗಳು, ಮಕ್ಕಳಿಗೆ ಮತ್ತು ಹಿರಿಯರಿಗೆ ಸಾಂಸ್ಕೃತಿಕ, ಸಾಹಿತ್ಯಕ ಸ್ಪರ್ಧೆಗಳು... ಇತ್ಯಾದಿ ಕಾರ್ಯಕ್ರಮಗಳು, ಸಾರ್ವನಿಕರಿಂದ ಪುಸ್ತಕ ಕೊಡುಗೆ, ಕಾಣಿಕೆ ಮುಂತಾದ ಕಾರ್ಯಕ್ರಮ ಗಳನ್ನು ನಡೆಸುತ್ತಾ, ಪರಾಮರ್ಶನ ಗ್ರಂಥಗಳೂ ಸೇರಿದಂತೆ ಅಚ್ಚುಕಟ್ಟಾದ ಗ್ರಂಥಾಲಯ, ಜೊತೆಗೆ ಅಪಾರ ಓದುಗ ಬಳಗವನ್ನು ಕಟ್ಟಿರುವುದು ಸಂತೋಷ ತಂದಿತು. ನಮ್ಮ ವೇದಿಕೆಯ ಸದಸ್ಯರು ಈ ಗ್ರಂಥಾಲಯವನ್ನು ನೋಡಲಿ ಅನ್ನಿಸಿತು. "ನಿಮ್ಮ ಸಹಯೋಗದೊಂದಿಗೆ ಸಸಕಸ ವೇದಿಕೆಯು ಇಲ್ಲೊಂದು ಕಾರ್ಯಕ್ರಮ ಮಾಡಬಹುದೇ" ಎಂಬ ಪ್ರಶ್ನೆಗೆ, "ಧಾರಳವಾಗಿ" ಎಂದರು ಆನಂದ್.

ನನಗೆ ಹೊಳೆದಿದ್ದು, "ನಮ್ಮ ವೇದಿಕೆಯ ಪ್ರತಿಭಾವಂತ ಸದಸ್ಯೆ ಶ್ರೀಮತಿ ಶಾಂತಾ ಅವರ ಗಮಕ ಕಾರ್ಯಕ್ರಮ". ಬಹು ದಿನಗಳಿಂದ ಮನಸ್ಸಿನಲ್ಲಿ ಕುಳಿತಿತ್ತು. ಅಲ್ಲಿಂದಲೇ ಕರೆಮಾಡಿದೆ, "ಆಗಲಿ" ಎಂದುಬಿಟ್ಟರು. "ಯಾವುದನ್ನು ಮಾಡಬಹುದು" ಮರುಪ್ರಶ್ನೆಗೆ, "ನಿಮಗೆ ಸೂಕ್ತವಾಗಿ ಅನಿಸಿದ್ದು" ಎಂಬ ಉತ್ತರ ಬಂದಿತು. ತಾರೀಖು ಡಿಸೆಂಬರ್ ಒಂಭತ್ತು ಎಂದೂ ನಿಗದಿಯಾಯಿತು.

ವಾಟ್ಸಪ್ ಸಂದೇಶ ಬಂತು. "ನಾನೂ ಮತ್ತು ನನ್ನ ಮಗಳು ಡಾ ಅಮೃತವರ್ಷಿಣಿ, ಗಮಕ ನಡೆಸಿಕೊಡುತ್ತೇವೆ. ರಾಮಾಯಣ ದರ್ಶನಂ ಬಗ್ಗೆ ನೀವು ಕೇಳುತ್ತಿದ್ದಿರಿ. ಅದರ ಅಯೋಧ್ಯಾ ಕಾಂಡದ ’ಶಿಲಾ ತಪಸ್ವಿನಿ’ ಭಾಗ". ನನಗೆ ಬಹಳ ಸಂತೋಷವಾಯಿತು. "ಓಹ್! ಅಪರೂಪದ ಸಂದರ್ಭ. ಮಗಳು–ತಾಯಿ; ವಾಚನ–ವ್ಯಾಖ್ಯಾನ ".

ಹಿಂದೆಯೇ ಮತ್ತೊಂದು ಸಂದೇಶ. "ಕಾರಣಾಂತರದಿಂದ ಮಗಳಿಗೆ ಆ ದಿನ ಆಗುವುದಿಲ್ಲ. ಅದರ ಬದಲಿಗೆ ಅಷ್ಟೇ ಸಮರ್ಥರಾದ ಹಾಸನದ ಶ್ರೀಮತಿ ರಾಧಾ ಕೃಷ್ಣ ಸ್ವರೂಪ ಅವರು ವಾಚನ ಮಾಡುತ್ತಾರೆ’.

ಜೊತೆಗೆ ರಾಧಾ ಅವರ ಪರಿಚಯವೂ ಬಂತು. "ಮೈಸೂರು ವಿಶ್ವವಿದ್ಯಾಲಯದಿಂದ ಕರ್ನಾಟಕ ಶಾಸ್ತ್ರೀಯ ಸಂಗೀತದ ಪದವಿಯಲ್ಲಿ ನಾಲ್ಕು ಚಿನ್ನದ ಪದಕ ಮಾತ್ರವಲ್ಲ, ಸ್ನಾತಕೋತ್ತರ ಪದವಿಯಲ್ಲೂ ನಾಲ್ಕು ಚಿನ್ನದ ಪದಕ ಪಡೆದ ಹೆಗ್ಗಳಿಕೆ.

ಕರ್ನಾಟಕ ಗಮಕ ಕಲಾ ಪರಿಷತ್ ನಡೆಸುವ ಗಮಕ ಪಾರೀಣ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ. ಸಂಗೀತ ಕಲಿಕೆಯನ್ನು ಶೃಂಗೇರಿಯಲ್ಲಿ ವಿದ್ವಾನ್ ಸುಬ್ರಹ್ಮಣ್ಯ ಭಟ್ ಅವರಲ್ಲಿ ಆರಂಭಿಸಿ ನಂತರ ಮೈಸೂರಿನ ವಿದೂಷಿ ಶ್ರೀಮತಿ ಆರ್.ಎನ್. ಶ್ರೀಲತಾ ಅವರಲ್ಲೂ ಶಿಷ್ಯ ವೃತ್ತಿ ಮಾಡಿದ್ದಾರೆ, ಶ್ರೀಮತಿ ರಾಧಾ ಅವರ ಸಂಗೀತ ಗುರುಗಳು ಶ್ರೀಮತಿ ಶೈಲಜಾ, ಗಮಕ ಗುರುಗಳು ಶ್ರೀಮತಿ ಗಂಗಮ್ಮ ಕೇಶವಮೂರ್ತಿ. ಈಗ ಆನ್‌ಲೈನ್ ಸಂಗೀತ ಮತ್ತು ಗಮಕ ತರಗತಿಯನ್ನು ನಡೆಸುತ್ತಿದ್ದು. ಹಾಸನದಲ್ಲಿ ಸುನಾದ ಸಂಗೀತ ಮತ್ತು ಗಮಕ ಶಾಲೆ ಪ್ರಾರಂಭಿಸಿದ್ದಾರೆ".

ಆಹ್ವಾನ ಗೀತೆ

ಗ್ರಂಥದ ಗುಡಿಯ

ಗಮಕ ಸಪರ್ಯೆಗೆ ಬನ್ನಿ

ಕಾವ್ಯ ಕಿವಿಯಲಿ
ಭಾವ ಮನದಲಿ
ಅರ್ಥ ಚಿತ್ತದಿ
ಚಿತ್ರ ಕಣ್ಣಲಿ
ಗಮಕ ನಡೆವುದು
ಗ್ರಂಥ ಗುಡಿಯಲಿ

ನೀವು ಬನ್ನಿರಿ
ಅವರು ಬನ್ನಿರಿ
ಇವರು ಬನ್ನಿರಿ
ಜಗಕೆ ಹಿತವಾಗಲಿ

ರಾಧಾ ಶಾಂತರ
ವಾಚನ ವ್ಯಾಖ್ಯಾನವು
ರಸವ ಹಂಚಲಿ
ಜ್ಯೋತಿ ಬೆಳಗಲಿ
ಕುವೆಂಪು ಹರಸಲಿ

ಗ್ರಂಥದ ಗುಡಿಯ ತೇರನು
ಎಳೆವುದಾನಂದ ಸಂಭ್ರಮ
ಆನಂದಕೆ ಆನಂದ ಸೇರಿಸುವುದು
ನಿಮ್ಮ ಚಂದದಾಗಮನ

ಎಲ್ಲರಿಗೂ ಆದರದ ಸ್ವಾಗತ
ನಿಮ್ಮ ಹಾಜರಿಯೇ
ನಮ್ಮ ಚಟುವಟಿಕೆಗೆ ಆಧಾರ

– ಸಂಚಾಲಕ ಸಮಿತಿ

ಆಹ್ವಾನ ಸಂದೇಶದಲ್ಲಿ "ಗ್ರಂಥದ ಗುಡಿಯಲ್ಲಿ ಗಮಕದ ಚಮತ್ಕಾರ" ಎಂಬ ಶೀರ್ಷಿಕೆ ನೀಡಿದ್ದೆ. ಶಾಂತಾ ಅವರು "ಗ್ರಂಥದ ಗುಡಿಯಲ್ಲಿ ಗಮಕದ ಸಪರ್ಯೆ" ಅಂತ ತಿದ್ದಿದರು. 'ಸಪರ್ಯೆ'ಯ ಅರ್ಥವನ್ನೂ ಹೇಳಿದರು "ಪೂಜೆ". ಓಹ್, ಎಷ್ಟು ಅರ್ಥವತ್ತಾಗಿದೆ. ಹೊಸ ಪದವನ್ನೂ ಕಲಿತಂತಾಯ್ತು.

ಈಗಾಗಲೆ ಶಾಂತಾ ಅವರ ಪರಿಚಯ ವೇದಿಕೆಗೆ ಇದೆ. ಆದರೂ ನೆನಪಿಸಿಕೊಳ್ಳುವುದು ಅವಶ್ಯ.

"ವಿದ್ಯಾಭ್ಯಾಸ: ಬಿ.ಎಸ್ಸಿ. ಎಂ.ಎ. (ಕನ್ನಡ), ಎಂ.ಎ. (ಹಿಂದಿ), ಎಂ.ಫಿಲ್ (ಹಿಂದಿ), ಎಂ.ಎ (ಸಂಸ್ಕೃತ). ಕರ್ನಾಟಕ ಶಾಸ್ತ್ರೀಯ ಸಂಗೀತಾಸ್ವಾದನೆಯಲ್ಲಿ ರುಚಿ. ಕಥೆ, ಕವನ, ಲೇಖನಗಳನ್ನು ಬರೆಯುವ ಹವ್ಯಾಸ. ಮಲ್ಲಿಗೆ, ತುಷಾರ, ಮಯೂರ, ಉತ್ಥಾನ, ಮುಂತಾದ ಪತ್ರಿಕೆಗಳಲ್ಲಿ ಹಾಗೂ "ನಸುಕು", "ಸಂಗಾತಿ" ಅಂತರ್ಜಾಲ ಪತ್ರಿಕೆಗಳಲ್ಲೂ ಬೆಳಕು ಕಂಡಿವೆ. "ಕೀರ್ತನಕಲೆ ಮತ್ತು ಗಮಕಕಲೆ-ಒಂದು ತೌಲನಿಕ ಅಧ್ಯಯನ" ಎಂಬ ಫೆಲೋಶಿಪ್ ಪ್ರಬಂಧವು ಪುಸ್ತಕವಾಗಿ ಕರ್ನಾಟಕ ಸಂಗೀತ ನೃತ್ಯ ಅಕಾಡಮಿಯಿಂದ ಪ್ರಕಟಗೊಂಡಿದೆ. ಚೊಚ್ಚಿಲ ಕೃತಿ "ಮಹಾಭಾರತದ ರಸಘಟ್ಟಗಳು", 2022ರಲ್ಲಿ ಪುಷ್ಯ ಪ್ರಕಾಶನದಿಂದ ಪ್ರಕಟ. ಈಗ ಎರಡನೇ ಮುದ್ರಣ. ಬಿಹಾರೀ ದೋಹೆಗಳನ್ನು ಕನ್ನಡ ಚೌಪದಿಗಳ ರೂಪದಲ್ಲಿ ಅನುವಾದಿಸಿರುವ ಕೃತಿಯು ಕುವೆಂಪು ಭಾಷಾ ಭಾರತಿಯಿಂದ ಸದ್ಯದಲ್ಲೇ ಪ್ರಕಟವಾಗಲಿದೆ.

ಗಮಕವಾಚನಕ್ಕೆ ವ್ಯಾಖ್ಯಾನ ಶಾಂತಾ ಅವರ ಪ್ರಮುಖ ಪ್ರವೃತ್ತಿ. ಸುಮಾರು ಹತ್ತು ವರ್ಷಗಳಿಂದ ಗಮಕ ಕ್ಷೇತ್ರದಲ್ಲಿ ತೊಡಗಿಸಿ ಕೊಂಡಿದ್ದಾರೆ. ನಾಡಿನ ಎಲ್ಲಾ ಪ್ರಮುಖ ವೇದಿಕೆಗಳಲ್ಲಿ ಅನೇಕ ಹಿರಿಯ ಕಿರಿಯ ಗಮಕಿಗಳ, ಕನ್ನಡ ಮತ್ತು ಸಂಸ್ಕೃತ ಕಾವ್ಯಗಳ ಗಮಕವಾಚನಕ್ಕೆ ವ್ಯಾಖ್ಯಾನ ಮಾಡಿದ ಸಂತೋಷ ಅವರದು. ಗಮಕ ಕಲಾ ಪರಿಷತ್ತಿನ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದಾರೆ. ಪ್ರಸ್ತುತ ಅಖಿಲ ಭಾರತೀಯ ಸಾಹಿತ್ಯ ಪರಿಷತ್ತಿನ ಬೆಂಗಳೂರು ಮಹಾನಗರದ

ಮಹಿಳಾ ಪ್ರಕಾರದ ಅಧ್ಯಕ್ಷರಾಗಿದ್ದಾರೆ. ವ್ಯಾಖ್ಯಾನ ಕ್ಷೇತ್ರದಲ್ಲಿ ಇವರ ಕೆಲಸವನ್ನು ಗುರುತಿಸಿ ಕುಂದಾಪುರದ ಭಂಡಾರ್ಕರ್ಸ್ ಕಾಲೇಜು ವಾಚನ-ವ್ಯಾಖ್ಯಾನದ ಜೋಡಿಗೆ ನೀಡುವ 2016ರ 'ಶಾಂತಾರಾಮ್ ದತ್ತಿನಿಧಿ ಪ್ರಶಸ್ತಿ' ಯು ನಾಡಿನ ಪ್ರಸಿದ್ಧ ವಾಚನಕಾರರಾದ ದಿ.ಶ್ರೀ ಚಂದ್ರಶೇಖರ ಕೆದಿಲಾಯರರ ಜೊತೆಗೆ ದೊರೆತಿದೆ.

ಇದಲ್ಲದೆ "ಹಳೆಗನ್ನಡ ಶಾಲೆ"ಯ (ವಾಟ್ಸಪ್ ಸ್ಕೂಲು!) ಮೂಲಕ ಹಳೆಗನ್ನಡ ಕೃತಿಗಳ ಪಾಠ. ಸ್ಮೃತಿಗಳ ಅಧ್ಯಯನ, ಸಾರ್ವಜನಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲರು, ಮಿಗಿಲಾಗಿ ಸಹೃದಯರು.

ಗಮಕ ಸಪರ್ಯೆ ಕಾರ್ಯಕ್ರಮದಲ್ಲಿ ವಿದುಷಿ ಶಾಂತರವರು ಅಕ್ಷರ ಅಕ್ಷರವನ್ನೂ ಅನುಭವಿಸಿ ಹೇಳಿದರು. ನಾನು ಗಮನಿಸುತ್ತಿದ್ದೆ. ಸಭಿಕರು 'ಆಹಾ' ಎಂದು ತಲೆದೂಗುತ್ತಿದ್ದರು. ಅವರ ಕಣ್ಣುಗಳು ಮಿಂಚುತ್ತಿದ್ದವು. ವ್ಯಾಖ್ಯಾನದಲ್ಲಿ ಮನಸ್ಸಿಗೆ ತಟ್ಟಿದ ಅಂಶಗಳಿಗೆ ಚಪ್ಪಾಳೆಗಳ ಮೂಲಕ ಸ್ಪಂದಿಸಿದರು. ಶಾಂತಾ ಅವರ ಪ್ರಖರವಾದ ವಿದ್ವತ್ತು, ಅಧ್ಯಯನ, ಸಾಂಸ್ಕೃತಿಕ, ಸಾಹಿತ್ಯಕ ಪ್ರೀತಿ ಮತ್ತು ಸಂವಹನ ಶಕ್ತಿ ವಿದಿತವಾಗಿತ್ತು.

ರಾಧಾ ಅವರ ವಾಚನ, ಮನಸ್ಸಿಗೆ ನೇರವಾಗಿ ತಲುಪುತ್ತಿತ್ತು. ಆಶ್ಚರ್ಯ, ಆನಂದ, ಭೀಭತ್ಸ... ಇತ್ಯಾದಿ ರಸಗಳನ್ನು ಪ್ರತಿಯೊಬ್ಬರೂ ಅನುಭವಿಸುತ್ತಿದ್ದರು. ಗಾಯನದ ಹಂತದಲ್ಲಿಯೇ ರಾಮಾಯಣದ ಪಾತ್ರಗಳು ದಶರಥ, ರಾಮ ಲಕ್ಷ್ಮಣ, ವಿಶ್ವಾಮಿತ್ರ, ತಾಟಕಿ, ಅಹಲ್ಯೆಯರು ಪೂರ್ಣವಾಗಿ ಸಶಕ್ತರಾಗಿ ಹೊಮ್ಮಿದರು.

ವ್ಯಾಖ್ಯಾನದ ಮೂಲಕ ಶಾಂತಾ ಅವರು, "ರಾಮಾಯಣಂ ದರ್ಶನಂ ಮಾತ್ರವಲ್ಲ, ಶ್ರೀ ಕುವೆಂಪು ಎಂಬ ಕನ್ನಡ ನುಡಿಯ ಮಹಾಕವಿಯ ದರ್ಶನ ಮಾಡಿಸಿದರು. ರಾಮಾಯಣದ ಬಗ್ಗೆ ಹೊಸ ದೃಷ್ಟಿಯನ್ನು ಬಿಂಬಿಸುವ, ಸನಾತನದಲ್ಲಿ ಭದ್ರವಾಗಿ ತಳವೂರಿರುವ ಶ್ರೀ ಕುವೆಂಪು ಅವರ ಕಾವ್ಯದ ಸೊಬಗು ಮನಮುಟ್ಟಿತು. ಕುವೆಂಪು ಮತ್ತಷ್ಟು ಮೇಲೇರಿದರು ಎಂಬುದು ನಿಸ್ಸಂಶಯ.

ಬನ್ನಿ ಗಮಕದ ಸಪರ್ಯೆಗೆ

ಬನ್ನಿ ಗ್ರಂಥದ ಗುಡಿಗೆ
ಗಮಕದ ಸಪರ್ಯೆಗೆ
ಸುಶಾಂತ ವ್ಯಾಖ್ಯಾನಕೆ
ರಾಧಾ ಕೃಷ್ಣ ವಾಚನಕೆ

ಶ್ರೀ ಕುವೆಂಪು ದರ್ಶನಕೆ
ರಾಮಾಯಣ ವಿಸ್ತಾರಕೆ
ಪುಸ್ತಕದ ಗಮಕ ಪೂಜೆಗೆ
ಹೊಮ್ಮಿದ ಅರ್ಥನಾದಕೆ

ಗ್ರಂಥ ಗುಡಿಯ ಆನಂದಕೆ
ಚಿಣ್ಣರೊಡನೆ ಸಂತಸಕೆ
ಈ ಶನಿವಾರದ ಸಂಜೆಗೆ
ಬನ್ನಿರೆಲ್ಲ ಆರು ಗಂಟೆಗೆ

- ಬೆಂ.ಶ್ರೀ. ರವೀಂದ್ರ

05 ಡಿಸೆಂಬರ್ .2023

ವಾಚಕರು, ವ್ಯಾಖ್ಯಾನಕಾರರು ಮತ್ತು ಸಭಾಸದರ ಸಂಬಂಧ ಹೇಗಿತ್ತು ಎಂದರೆ ಅವರೆಲ್ಲಾ ಏಕೀಭವಿಸಿದ್ದರು ಮತ್ತು ಒಬ್ಬರಿನ್ನೊಬ್ಬರನ್ನು ಬೇರೆಯಾಗಿ ನೋಡಲು ಸಾಧ್ಯವಿರಲಿಲ್ಲ. ರಸಪ್ರವಾಹವು ಒಂದೇ ಸಮನೆ ಆನಂದವನ್ನು ಉಕ್ಕಿಸುತ್ತಾ ಪೂರ್ಣವಾಗಿ ಹರಿಯಿತು. ಇದಕ್ಕಿಂತ ಹೆಚ್ಚು ಹೇಳಲು ನಾನು ಶಕ್ತನಲ್ಲ. ಈಗಾಗಲೇ ಹಲವಾರು ಅಭಿಪ್ರಾಯಗಳು ವೇದಿಕೆಯಲ್ಲಿ ಬಂದಿವೆ.

"ಸಭೆ ತುಂಬಿ ತುಳುಕಿತು. ಬರಿಯ ಅಂಕಿ ಸಂಖ್ಯೆಗಳಿಂದ ಮಾತ್ರವಲ್ಲ, ರಸಪೋಷಣೆಯಿಂದಲೂ. ಭಾಗವಹಿದ್ದವರು ಸಂತೃಪ್ತರಾದರು. ಇಂತಹ ಕಾರ್ಯಕ್ರಮಗಳನ್ನು ಮತ್ತೆ ಮತ್ತೆ ಮಾಡಿರಿ" ಎಂಬ ಬೇಡಿಕೆ ಗ್ರಂಥಾಲಯ ಪಾಲಕ ಆನಂದರಿಗೆ ಬಂದಿದೆ.

ಸಸಕಸ ವೇದಿಕೆಯು ಗಮಕಿಗಳನ್ನೂ, ಗ್ರಂಥ ಪಾಲಕರನ್ನೂ ಸನ್ಮಾನಿಸಿತು. 'ಪುಟ್ಟ ಮಗು ಕಥೆ ಕೇಳು' ಕಾರ್ಯಕ್ರಮದಲ್ಲಿ ಪುಟ್ಟ ಮಕ್ಕಳಿಗೆ ಕಥೆ ಹೇಳಿದವರನ್ನೂ ಸನ್ಮಾನಿಸಿತು. ಊಟ ಭರ್ಜರಿಯಾಗಿತ್ತು ಎಂಬುದು ಸಾರ್ವತ್ರಿಕ ಅಭಿಪ್ರಾಯ. ಹೇರಳವಾದ ಪುಸ್ತಕ ಕಾಣಿಕೆಯನ್ನು ಗ್ರಂಥಾಲಯಕ್ಕೆ ಸದಸ್ಯರು ನೀಡಿದರು. ಸಂತೋಷದ ವಿಷಯ, ನಲವತ್ತಕ್ಕೂ ಹೆಚ್ಚು ಸಸಕಸ ಸದಸ್ಯರು ಗಮಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಾರ್ಯಕ್ರಮ ಪೂರ್ಣಗೊಂಡ ಒಂದು ಗಂಟೆಯ ಒಳಗೇ ಗುರುರಾಜರು ಕಾರ್ಯಕ್ರಮವನ್ನು ಯೂಟ್ಯೂಬ್‌ನಲ್ಲಿ ಬಿಡುಗಡೆ ಮಾಡಿದರು. ಅಲ್ಲಿಂದ ಕೇವಲ ಒಂದು ಗಂಟೆಯಲ್ಲಿ 200ಕ್ಕೂ ಹೆಚ್ಚು ಜನ ಯುಟ್ಯೂಬ್ ವೀಕ್ಷಿಸಿದ್ದಾರೆ. . ಈಗ 400 ರ ಸಮೀಪ ಬಂದಿದೆ.

ಈ ವರ್ಷ ಹಲವಾರು ಸಾರ್ಥಕ ಕಾರ್ಯಕ್ರಮಗಳನ್ನು ನಾವು ಮಾಡಿದ್ದೇವೆ. ಆ ಪಟ್ಟಿಯಲ್ಲಿ ಗಮಕ ಸಪರ್ಯೆಯು ಮುಖ್ಯವಾದುದು. ಶ್ರೀಮತಿ ಶಾಂತಾ ನಾಗಮಂಗಲ, ಶ್ರೀಮತಿ ರಾಧಾ ಕೃಷ್ಣ ಸ್ವರೂಪ, ಶ್ರೀ ಆನಂದ್, ಗ್ರಂಥಾಲಯದ ವಾಚಕರು, ಸಮನ್ವಯ ಸಮಿತಿಯ ಸದಸ್ಯರು, ಸಹಕರಿಸಿದ ಎಲ್ಲರಿಗೂ ನಮಸ್ಕಾರಗಳು.

ಗ್ರಂಥಾಲಯಕ್ಕೆ ಪುಸ್ತಕ ಕಾಣಿಕೆ ಕೊಡಲು ಶ್ರೀ ಆನಂದ್ ಅವರನ್ನು ಸಂಪರ್ಕಿಸಿ. ಮೊಬೈಲ್ 9738587614.

***

ಅನಂತ ಧನ್ಯವಾದಗಳು

ನೆನ್ನೆಯ ಗಮಕ ಕಾರ್ಯಕ್ರಮವನ್ನು ಕೇಳಿ ಮೆಚ್ಚುಗೆಯ ಮಹಾಪೂರವನ್ನೇ ಹರಿಸಿರುವ ಎಲ್ಲ ಪ್ರೀತಿಯ ಗೆಳೆಯರಿಗೆ ನಾನು ಏನೆಂದು ಹೇಳಿ ಕೃತಜ್ಞತೆ ಹೇಳಲಿ.

'ಮನದ ಭಾವ ಚಿಮ್ಮಿಸಲಿಕೆ ಭಾಷೆ ಒರಟು ಯಾನ..' ಎನ್ನುವ ಕವಿವಾಣಿ ಈ ಹೊತ್ತಿಗೆ ನನ್ನ ಮಟ್ಟಿಗೆ ನಿಜವೇ..

ಒಂದು ಜಾಜಿ ಹೂವಿನ ಪರಿಮಳವನ್ನೂ ಜಾಜಿ ದಂಡೆಯೋ ಎಂಬಂತೆ ಹಿರಿದಾಗಿ ಪರಿಭಾವಿಸುವ ರಸಿಕರು, ಸಹಜ ಸಂತೋಷಿಗಳು ನೀವು.. ನಿಮ್ಮ ಸಹೃದಯತೆಯೇ ದೊಡ್ಡದು.. ನಮ್ಮ ಪಾತ್ರ ಕವಿವಾಣಿಯನ್ನು ಕೇಳಿಸಿದ್ದಷ್ಟೆ.. ಎಲ್ಲರಿಗೂ ಅನಂತ ಧನ್ಯವಾದಗಳು

– ಶಾಂತಾ ನಾಗಮಂಗಲ

10 ಡಿಸೆಂಬರ್ 2023

ಗ್ರಂಥದ ಗುಡಿಯ ಸಂತ

– ಬೆಂ.ಶ್ರೀ.ರವೀಂದ್ರ



"ಹೊಸದನ್ನು ರೂಪಿಸಬೇಕು. ನಮ್ಮ ಬಗ್ಗೆ ಜನರಿಗಿರುವ ಅಭಿಪ್ರಾಯ ಬದಲಿಸಬೇಕು, ಸರ್ಕಾರದ ಸೇವೆಯು ಚೆನ್ನಾಗಿದೆ ಅನ್ನಿಸಬೇಕು. ಜನರ ನಾಡಿಮಿಡಿತವನ್ನು ಅರಿತು ಅದಕ್ಕೆ ತಕ್ಕಂತೆ ಕಾರ್ಯಕ್ರಮಗಳನ್ನು ಯೋಜಿಸಿ, ಜಾರಿಗೊಳಿಸಬೇಕು, ಅಂತ ನಮ್ಮ ಇಲಾಖೆಯ ಸಭೆಗಳಲ್ಲಿ ಹೇಳುತ್ತಿರುತ್ತೇನೆ" ಅಂದರು, ಕುಮಾರಸ್ವಾಮಿ ಲೇಔಟ್ ನಲ್ಲಿರುವ, ಬೆಂಗಳೂರು ನಗರ ದಕ್ಷಿಣ ವಲಯ ಕೇಂದ್ರ ಗ್ರಂಥಾಲಯದ ಗ್ರಂಥಪಾಲಕ ಶ್ರೀ ಎಸ್ ಆನಂದ್. ಕಳೆದ ಮೂವತ್ನಾಲ್ಕು ವರ್ಷಗಳ ಅವರ ಸಮಾಜಮುಖಿ, ಜನಸ್ನೇಹಿ ಕೆಲಸ ಕಾರ್ಯಗಳು ಅವರು ನುಡಿದಂತೆ ನಡೆದಿದ್ದಕ್ಕೆ ಸಾಕ್ಷಿಯಾಗಿದ್ದವು. ಮಿತಿಗಳನ್ನರಿತು ಮಿತಿಯಂಚುಗಳನ್ನು ವಿಸ್ತರಿಸಿ, ಸರ್ಕಾರದ ಸೇವಾ ಕಾರ್ಯಗಳು ಜನರಲ್ಲಿ ಸಕಾರಾತ್ಮಕ ತರಂಗಗಳನ್ನು ಸೃಷ್ಟಿಸಬಹುದು ಎಂಬುದನ್ನು ಸಾಬೀತು ಮಾಡಿದ ಮುಗುಳ್ನಗೆ ಕಾಣಿಸಿತು.

ನನ್ನ ಪ್ರಶ್ನೆ ಸರಳವಾಗಿತ್ತು. "ಇತರ ಗ್ರಂಥಾಲಯಗಳಿಗಿಂತ ನಿಮ್ಮದು ಹೇಗೆ ಭಿನ್ನ?

"ಭಿನ್ನವೆಂದು ನಾನು ಭಾವಿಸುವುದಿಲ್ಲ. ನಮ್ಮ ಇಲಾಖೆಯ ನಿರ್ದೇಶಕರಾಗಿರುವ ಶ್ರೀ ಸತೀಶ್ ಕುಮಾರ್ ಎಸ್ ಹೊಸಮನಿ ಹಾಗೂ ನಗರ ಕೇಂದ್ರ ಗ್ರಂಥಾಲಯ, ದಕ್ಷಿಣ ವಲಯದ ಉಪ ನಿರ್ದೇಶಕರಾಗಿರುವ ಶ್ರೀಮತಿ ಎನ್ ಸರಸ್ವತಿ ಅವರ ಪ್ರೋತ್ಸಾಹದಿಂದ ಪದ್ಮನಾಭನಗರ ವಿಧಾನಸಭಾ ಸದಸ್ಯರಾದ ಶ್ರೀ ಆರ್ ಅಶೋಕ್, ನಗರಪಾಲಿಕೆಯ ಮಾಜಿ ಸದಸ್ಯರಾದ ಶ್ರೀ ಎಚ್ ಸುರೇಶ್ ಮತ್ತು ಎಲ್ ಶ್ರೀನಿವಾಸ್ ಅವರುಗಳ ಬೆಂಬಲದಿಂದ, ಅದೆಲ್ಲಕ್ಕೂ ಮುಖ್ಯವಾಗಿ ಈ ವಲಯದ ಸಾರ್ವಜನಿಕರ ಸಂಪೂರ್ಣ ಒಳಗೊಳ್ಳುವಿಕೆ ಮತ್ತು ಸಹಕಾರದಿಂದ ನಾನು ಅಂದುಕೊಂಡಂತೆ ಸ್ವಲ್ಪ ಕೆಲಸ ಮಾಡಿದ್ದೇನೆ" ಎಂದರು ವಿನಯದಿಂದ.



ಕುಮಾರಸ್ವಾಮಿ ಲೇಔಟ್‌ನಲ್ಲಿರುವ ಅಟಲ್ ಬಿಹಾರಿ ವಾಜಪೇಯಿ ಉದ್ಯಾನವನಕ್ಕೆ ಅಂಟಿಕೊಂಡಂತೆ, 125'/80' ಚದರಡಿ ನಿವೇಶನದ ಮಧ್ಯೆ 37'/43' ಚದರಡಿ ವಿಸ್ತೀರ್ಣದಲ್ಲಿ, ಎರಡು ಅಂತಸ್ತಿನ ಸುಸಜ್ಜಿತ ಕಟ್ಟಡದಲ್ಲಿ ಈ ಗ್ರಂಥಾಲಯವಿದೆ. "ಇದೊಂದು ವಿಶೇಷವಾದ ಕೇಂದ್ರ. ಮೊದಲು 10'/15' ಚದರಡಿ ಯಲ್ಲಿದ್ದ ಈ ಗ್ರಂಥಾಲಯದ ವಿಶಿಷ್ಟತೆಗೆ, ಬೆಳವಣಿಗೆಗೆ ಕಾರಣ ಗ್ರಂಥಪಾಲಕರಾದ ಶ್ರೀ ಆನಂದ್" ಎಂದಿದ್ದರು ಗೆಳೆಯರು. ಹಾಗಾಗಿ ಗ್ರಂಥಾಲಯಕ್ಕೆ ನನ್ನ ಭೇಟಿ, ಆನಂದ್ ಅವರೊಡನೆ ಮಾತುಕತೆ.



ಎಲ್ಲಾ ಗ್ರಂಥಾಲಯದಂತೆ ಕನ್ನಡ, ಇಂಗ್ಲಿಷ್, ಹಿಂದಿ, ತಮಿಳು, ತೆಲಗು, ಮಲೆಯಾಳಂ ಹಾಗೂ ಉರ್ದು ಭಾಷೆಗಳ, 80 ಸಾವಿರಕ್ಕೂ ಹೆಚ್ಚು ಪುಸ್ತಕಳು, ಓದಲು, ಪರಾಮರ್ಶಿಸಲು, ಎರವಲು ಪಡೆಯಲು ಸಿಕ್ಕುತ್ತದೆ. ಎರಡನೆಯ ಮಹಡಿಯಲ್ಲಿ ವಿಷಯವಾರು ಅಂದವಾಗಿ ಜೋಡಿಸಲ್ಪಟ್ಟ ಖ್ಯಾತ ಲೇಖಕರ ಸಾಮಾಜಿಕ, ಪೌರಾಣಿಕ, ಐತಿಹಾಸಿಕ, ವೈಚಾರಿಕ, ಪತ್ತೇದಾರಿ ಕಥೆ, ಕಾದಂಬರಿಗಳು, ಕವನ ಸಂಗ್ರಹಗಳು, ನಾಟಕಗಳು, ವ್ಯಕ್ತಿತ್ವ ವಿಕಸನ, ಆಧ್ಯಾತ್ಮಿಕ ಗ್ರಂಥಗಳು. ಅಲ್ಲದೆ, ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಓದುವವರಿಗೆ ಆರಾಮವಾಗಿ, ಯಾವುದೇ ಅಡೆತಡೆಯಿಲ್ಲದಂತೆ ಸಂದರ್ಭ ಸೇವಾ ಪರಾಮರ್ಶನ ವಿಭಾಗವಿದೆ. ಐಎಎಸ್, ಐಪಿಎಸ್ ಮುಂತಾದ ಪುಸ್ತಕಗಳ ಜೊತೆಗೆ ತಾಂತ್ರಿಕ ಪಠ್ಯ ಪುಸ್ತಕಗಳೂ ಇಲ್ಲಿವೆ. ಗಾಳಿ ಬೆಳಕುಳ್ಳ ಸ್ವಚ್ಛ ನಿಶ್ಯಬ್ದ ಪರಿಸರ ಪುಸ್ತಕಪ್ರೇಮಿಗಳನ್ನು ಆಕರ್ಷಿಸುತ್ತದೆ.

ಹೆಚ್ಚಿನದೆಂದರೆ, ಆನಂದ್ ಹೆಮ್ಮೆಯಿಂದ ಹೇಳುತ್ತಾರೆ “ನಮ್ಮಲ್ಲಿ ಇವುಗಳ ಜೊತೆಗೆ 1 ರಿಂದ 12 ನೆಯ ತರಗತಿಯವರಿಗೆ ಪಠ್ಯಪುಸ್ತಕಗಳೂ ಪರಾಮರ್ಶಿಸಲು ದೊರೆಯುತ್ತದೆ. ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವವರು ತಮ್ಮ ಪುಸ್ತಕಗಳನ್ನು ಗ್ರಂಥಾಲಯಕ್ಕೆ ದಾನ ಮಾಡುತ್ತಾರೆ. ಅಂತಹ ಪುಸ್ತಕ ಪ್ರದರ್ಶನಗಳನ್ನು, ವರ್ಷದಲ್ಲಿ ಮೂರು ಬಾರಿ ಏರ್ಪಡಿಸಿ ಹೊಸ ವಿದ್ಯಾರ್ಥಿಗಳ ಆಯ್ಕೆಯಂತೆ ಒಂದು ಪುಸ್ತಕವನ್ನು ಉಚಿತವಾಗಿ ನೀಡುತ್ತೇವೆ. ಪ್ರತಿ ಪ್ರದರ್ಶನದಲ್ಲಿ 300ರಿಂದ 400 ಪರಾಮರ್ಶನ ಗ್ರಂಥಗಳನ್ನು ಕೊಡುತ್ತೇವೆ. ಹಂಚಿದ ಇತರ ಪುಸ್ತಕಗಳ ಲೆಕ್ಕವನ್ನು ಇಡಲು ಸಾಧ್ಯವಾಗಿಲ್ಲ. ಉಚಿತವಾಗಿ ಹಂಚುವ ಪುಸ್ತಕಗಳು ಸರ್ಕಾರದ್ದಲ್ಲ, ಪುಸ್ತಕದಾನಿಗಳದ್ದು”

ಮೊದಲ ಹಂತದಲ್ಲಿರುವ ವಾಚನಾಲಯದಲ್ಲಿ, ಸುಮಾರು 100 ತ್ರೈಮಾಸಿಕ/ ಪಾಕ್ಷಿಕ/ಮಾಸಿಕ/ವಾರ/ದೈನಿಕ ಪತ್ರಿಕೆಗಳು ಲಭ್ಯವಿವೆ. ಹಿರಿಯ ನಾಗರೀಕರಿಗೆ ಅನುಕೂಲವಾಗುವಂತೆ 30 ಆರಾಮ ಕುರ್ಚಿ, ಮೇಜುಗಳಿವೆ. ಜೊತೆಗೆ ಸುಸಜ್ಜಿತ ಮಕ್ಕಳ ಗ್ರಂಥಾಲಯ. ಪುಸ್ತಕಗಳು ಸುಲಭವಾಗಿ ಮಕ್ಕಳಿಗೆ ಕೈಗೆಟಕುತ್ತವೆ. ಮನಸೆಳೆವ ಚಿತ್ರಗಳು, ಅಂದವಾದ ಗೊಂಬೆಗಳು, ಬಣ್ಣಬಣ್ಣದ ಪುಟಾಣಿ ಮೇಜು ಕುರ್ಚಿಗಳು ಇಲ್ಲಿನ ಆಕರ್ಷಣೆ. ಮಿಗಿಲಾಗಿ ಮಕ್ಕಳ ವಿಭಾಗವು ಸದ್ದಿಲ್ಲದೆ ಓದುವ ಮಕ್ಕಳಿಂದ ತುಂಬಿರುತ್ತದೆ.

“ಕೊರೊನಾ ಸಮಯದಲ್ಲಿ ‘ಕರ್ನಾಟಕ ಅಂಕೀಯ ಸಾರ್ವಜನಿಕ ಗ್ರಂಥಾಲಯ’ವನ್ನು ನಮ್ಮ ಇಲಾಖೆಯು ಶ್ರೀ ಹೊಸಮನಿ ಅವರ ನೇತೃತ್ವದಲ್ಲಿ ಆರಂಭಿಸಿತು. ಈ ಸೌಲಭ್ಯವನ್ನು ಈಗ ಮೂರುವರೆ ಕೋಟಿ ಕನ್ನಡಿಗರು ಉಪಯೋಗಿಸುತ್ತಿದ್ದಾರೆ. ಡಿಜಿಟಲ್ ಲೈಬ್ರರಿಯ ಉಪಯೋಗದಲ್ಲಿ ಕರ್ನಾಟಕವೇ ವಿಶ್ವಕ್ಕೆ ಪ್ರಥಮ. ನಮ್ಮ ಗ್ರಂಥಾಲಯದಲ್ಲಿ ಗಣಕ ವಿಭಾಗವನ್ನು 2010ರಲ್ಲಿ ಸಾರ್ವಜನಿಕರ ಸಹಕಾರದಿಂದ ಸ್ಥಾಪಿಸಿದ್ದೆವು. ಈಗ ಹತ್ತು ಕಂಪ್ಯೂಟರುಗಳಿವೆ”, ಎಂದರು ಆನಂದ್.

ಈ ಗ್ರಂಥಾಲಯವನ್ನು ಸಾಮಾಜಿಕ, ಸಾಂಸ್ಕೃತಿಕ ಕೇಂದ್ರವನ್ನಾಗಿ ರೂಪಿಸಿರುವುದು ವಿಶಿಷ್ಟವಾದುದು. ಇಲಾಖೆಯು ಪ್ರತಿವರ್ಷ ವಿಶ್ವ ಪುಸ್ತಕ ದಿನಾಚರಣೆ, ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಮೊದಲಾದ ಕೆಲವು ನಿರ್ದಿಷ್ಟವಾದ ಕಾರ್ಯಕ್ರಮ

ಗಳನ್ನು ನಡೆಸಲು ಸೂಚಿಸುತ್ತದೆ. ಈ ಸಂದರ್ಭವನ್ನು ಉಪಯೋಗಿಸಿಕೊಂಡು, ಆನಂದ್ ಅವರು ಏಳು ದಿನವೂ ಪ್ರಬಂಧ, ಚಿತ್ರಕಲೆ, ನನೆಪು, ಭಕ್ತಿಗೀತೆ, ಭಾವಗೀತೆ, ಜನಪದ ಗೀತೆ, ಚಿತ್ರಗೀತೆ, ಕನ್ನಡ ಓದುವ ಸ್ಪರ್ಧೆಗಳನ್ನು ಮಕ್ಕಳು, ಯುವಕರಿಗಾಗಿ ನಡೆಸುತ್ತಾರೆ. ಕಟ್ಟಡದ ಮೊದಲ ಹಂತವು ಆಗ ಸಭಾಂಗಣವಾಗುತ್ತದೆ. ಜನರಿಂದ ತುಳುಕುತ್ತದೆ.



ಜಾನಪದ ದಸರಾ, ಮತ್ತೊಂದು ವಿಶಿಷ್ಟವಾದ ಚಟುವಟಿಕೆ. ಹತ್ತು ದಿನ, ಹತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು. ಸಾಹಿತಿಗಳು, ಸಂಗೀತಗಾರರು, ಸಾಧಕರು, ಸಾರ್ವಜನಿಕ ಸೇವಾಸಕ್ತರನ್ನು ಕರೆಸಿ, ಮಾತನಾಡಿಸಿ, ಸನ್ಮಾನ ಮಾಡುತ್ತಾರೆ. ಕಾರ್ಯಕ್ರಮದ ನಂತರ ಊಟವೂ ಉಂಟು. ಪ್ರತಿವರ್ಷ ಜುಲೈ ಅಂದರೆ ಓದುವ ತಿಂಗಳು. ತಿಂಗಳಿಡೀ ಗ್ರಂಥಾಲಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಸಮಾರಾಧನೆ. ಸ್ವಾತಂತ್ರ್ಯ, ಗಣತಂತ್ರ, ಮಹಿಳಾ, ಗಾಂಧಿ, ಅಂಬೇಡ್ಕರ್, ಬಸವಣ್ಣ, ಕನಕ, ಪರಿಸರ, ಹಿರಿಯ ನಾಗರಿಕರ ದಿನಾಚರಣೆಗಳನ್ನೂ ವೈಭವದಿಂದ ಸಾರ್ವಜನಿಕರ ಸಹಕಾರದೊಂದಿಗೆ ಆಚರಿಸಲಾಗುತ್ತಿದೆ.

ಆಶ್ಚರ್ಯವೆಂದರೆ ಗ್ರಂಥಾಲಯದ ಮೂಲಕ ಬಡ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. ಪ್ರತಿಭಾ ಪುರಸ್ಕಾರಗಳು ನಡೆಯುತ್ತವೆ. ಆದರೆ ಈ ಕಾರ್ಯ ಸರ್ಕಾರದ್ದಲ್ಲ. ಆನಂದ್ ಅವರು ದಾನಿಗಳನ್ನು ಗುರುತಿಸಿ ಪ್ರೋತ್ಸಾಹ ಧನವನ್ನು ನೇರವಾಗಿ ವಿದ್ಯಾರ್ಥಿಗಳಿಗೆ ಅವರ ಶಾಲೆಯ/ಕಾಲೇಜಿನ ಮೂಲಕ ಕೊಡಿಸುತ್ತಾರೆ. "ಗ್ರಂಥಾಲಯದ ಚಟುವಟಿಕೆಯನ್ನು ಗಮನಿಸಿದ ಹಲವು ಓದುಗರು, ಇಲ್ಲಿನ ನಾಗರೀಕರು ದೇಣಿಗೆಯನ್ನು ನೀಡಲು ಮುಂದೆ ಬರುತ್ತಾರೆ. ನಾವು ಯಾವುದೇ ನಗದು ಸ್ವೀಕರಿಸುವುದಿಲ್ಲ. ಚಟುವಟಿಕೆಗಳನ್ನು ನೇರವಾಗಿ ದಾನಿಗಳೇ ನಿರ್ವಹಿಸುತ್ತಾರೆ. ಇದೇ ರೀತಿ ಆರೋಗ್ಯ ಶಿಬಿರಗಳು, ನೇತ್ರ ಪರೀಕ್ಷೆ, ಚಿಕಿತ್ಸೆಗಳು ನಡೆಯುತ್ತವೆ".

ಗ್ರಂಥಾಲಯದಲ್ಲಿ ಗಮನ ಸೆಳೆದ ಇತರ ಚಟುವಟಿಕೆಗಳೆಂದರೆ, ತಿಂಗಳಲ್ಲಿ ಎರಡು ಬಾರಿ ನಡೆಯುವ, ಮಕ್ಕಳಲ್ಲಿ ಓದಿನ ಹವ್ಯಾಸವನ್ನು ಬೆಳೆಸುವ "ಪುಟ್ಟ ಮಗು ಕಥೆ ಕೇಳು" ಕಾರ್ಯಕ್ರಮ. ಹಿರಿಯರು, ಸಾಹಿತಿ, ಕವಿ, ಕಲಾವಿದರು ಆಗಮಿಸಿ, ಮಕ್ಕಳೊಂದಿಗೆ ಬೆರೆತು ಕಥೆ ಹೇಳುತ್ತಾರೆ. ಹಲವಾರು ಹೆಸರಾಂತರು ಈ ಕಾರ್ಯಕ್ರಮದ ಭಾಗ ವಾಗಿದ್ದಾರೆ. ಮಕ್ಕಳಿಗೆ ಕತೆ ಕೇಳುವ ಮತ್ತು ಹೇಳುವ ಅವಕಾಶ ಸಿಕ್ಕುತ್ತದೆ. 123 ಸಂಚಿಕೆಳಾಗಿರುವ ಅತ್ಯಂತ ಯಶಸ್ವಿ ವ್ಯಕ್ತಿತ್ವ ವಿಕಸನ ಕಾರ್ಯಕ್ರಮವಿದು.



ಹಲವು ಲೇಖಕರಿಗೆ ತಮ್ಮ ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನು ಏರ್ಪಡಿಸಲು ಹಲವಾರು ಕಾರಣಗಳಿಂದ ಸಾಧ್ಯವಾಗುವುದಿಲ್ಲ. ಆನಂದ್ ಅವರು ಸಂತೋಷದಿಂದ ಯಾವುದೇ ಖರ್ಚಿಲ್ಲದೆ ಪುಸ್ತಕವನ್ನು ಬಿಡುಗಡೆ ಮಾಡಿಸುವುದಲ್ಲದೆ, ಲೇಖಕರಿಗೆ ಸನ್ಮಾನವನ್ನೂ ಏರ್ಪಡಿಸುತ್ತಾರೆ. "ಹಲವು ಪ್ರಸಿದ್ಧ ಲೇಖಕರು ಕೂಡಾ ನಮ್ಮ ಗ್ರಂಥಾಲಯದಲ್ಲಿ ಪುಸ್ತಕ ಬಿಡುಗಡೆ ಮಾಡಿದ್ದಾರೆ" ಎನ್ನುತ್ತಾರೆ ಆನಂದ್.

ಗ್ರಂಥಾಲಯದಲ್ಲಿ ಓವರ್‌ಹೆಡ್ ಪ್ರೊಜೆಕ್ಟರ್, ಗೋಡೆಗಳ ಮೇಲೆ ಸುಂದರ ಚಿತ್ತಾಕರ್ಷಕಗಳು, ಬೊಂಬೆ ಪ್ರದರ್ಶನ, ಹೊರ ಆವರಣದಲ್ಲಿ ಕಾರ್ಯಕ್ರಮಗಳನ್ನು ನಡೆಸಲು ಬೇಕಾದ ಪೆಂಡಾಲ್ ಕೂಡಾ ಇದೆ. ಪ್ರತಿದಿನ ಸಂಜೆ 05.00 ಗಂಟೆಗೆ ಎಲ್ಲಾ ಓದುಗರಿಗೆ ಉಚಿತವಾಗಿ ಟೀ ಮತ್ತು ಬಿಸ್ಕತ್ತುಗಳನ್ನು ನೀಡುವ ಕಾರ್ಯಕ್ರಮವನ್ನು 2018 ಜೂನ್‌ನಲ್ಲಿ ಆನಂದ್ ಸಾರ್ವಜನಿಕರ ಸಹಕಾರದೊಂದಿಗೆ ಆರಂಭಿಸಿದರು. ಸತತವಾಗಿ ನಡೆಯುತ್ತಿರುವ "ಚಹಾದೊಂದಿಗೆ ಓದು" ವಿನ ಖರ್ಚು ಈಗ ಆನಂದರದ್ದೆ.

ಪದವೀಧರರಾದ ಆನಂದ್, 1989ರಿಂದ ಕುಮಾರಸ್ವಾಮಿ ಬಡಾವಣೆಯ ಗ್ರಂಥಾಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಸಖೇದಾಶ್ಚರ್ಯವೆಂದರೆ 1989ರಿಂದ 2011ರವರೆಗೆ ಕೇವಲ ಗೌರವಧನ ಪಡೆದು ಕೆಲಸ ಮಾಡಿದ್ದಾರೆ. ಖಾಯಂ ಆದಿದ್ದು 2011ರಲ್ಲಿ. ಗೌರವ ಧನವು 1989ರಲ್ಲಿ ರೂ 250/- ರಿಂದ ಆರಂಭವಾಗಿ 2011 ಕ್ಕೆ ರೂ 7500/- ಮುಟ್ಟಿತ್ತು. ನಾನು ಕೇಳಿದೆ " ಇಷ್ಟು ಕಡಿಮೆ ಗೌರವಧನದಲ್ಲಿ ಜೀವಿಸುವುದು ಕಷ್ಟವಲ್ಲವೆ? ಬೇರೆ ಕಡೆ ಕೆಲಸಕ್ಕೆ ಯಾಕೆ ಪ್ರಯತ್ನಿಸಲಿಲ್ಲ?"

"ನಾನು ಕೆಲಸಕ್ಕೆ ಸೇರಿದಾಗ ಶ್ರೀ ಪದ್ಮನಾಭರಾವ್ ಅವರು, ಮುಖ್ಯ ಗ್ರಂಥಪಾಲಕರಾಗಿದ್ದರು. ಸರಳ ಸಜ್ಜನ ವ್ಯಕ್ತಿ. ಅವರೇ ನನಗೆ ಪ್ರೇರಕರು. "ಚೆನ್ನಾಗಿ ಕೆಲಸ ಮಾಡು. ಇಂದಲ್ಲ ನಾಳೆಯಾದರೂ ಒಳ್ಳೆಯದಾಗುತ್ತದೆ. 100 ಪೈಸೆ ಸಂಬಳ ತೆಗೆದುಕೊಂಡರೆ 99 ಪೈಸೆಯಾದರೂ ಕೆಲಸ ಮಾಡಬೇಕು". ಎಂದಿದ್ದರು. "ಆಗಲಿ ಸರ್" ಅಂತ ಉತ್ತರಿಸಿದ್ದೆ. ಅಂದಿನಿಂದ ಇದನ್ನು ಮಾದರಿ ಗ್ರಂಥಾಲಯ ಮಾಡಲು ಪ್ರಯತ್ನಿಸುತ್ತಿರುವೆ". ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಉತ್ತೇಜಿಸುತ್ತಿದ್ದ ಶ್ರೀ ಎಸ್ ಬಿ. ಹೊಂಡದಕೇರಿಯವರನ್ನು ಆನಂದ್ ಮರೆಯುವುದಿಲ್ಲ.

ಕಳೆದ 34 ವರ್ಷಗಳಲ್ಲಿ, ಆನಂದ್ ಅವರು ಒಂದು ದಿನವೂ ರಜೆ ತೆಗೆದುಕೊಂಡಿಲ್ಲ. ತಂದೆ ತೀರಿಹೋದಾಗಲೂ, ಅಂತಿಮ ವಿಧಿಗಳನ್ನು ಪೂರೈಸಿ ಗ್ರಂಥಾಲಯಕ್ಕೆ ಹಿಂತಿರುಗಿದ್ದರು. ಮದುವೆಯನ್ನು ಮಾಡಿಕೊಂಡಿದ್ದೂ ರಜಾದಿನದಲ್ಲೆ. ಅಲ್ಲದೆ ರಜಾದಿನಗಳಲ್ಲೂ ಗ್ರಂಥಾಲಯದಲ್ಲಿ ಆನಂದ್ ಹಾಜರು.

ಇಂತಹ ವ್ಯಕ್ತಿ ಇರಲು ಸಾಧ್ಯವೇ ಅನ್ನಿಸಿತು. ಎದುರಿಗೆ ಕಂಡು ಸಂತೋಷವಾಯಿತು. ಆನಂದ್, ನನಗೆ ಗ್ರಂಥದ ಗುಡಿಯ ಸಂತರಂತೆ ಕಂಡರು.

(ಗ್ರಂಥಾಲಯದಲ್ಲಿ ಗಮಕ ವಾಚನ ಏಕೆ? ಎಂದು ಕೇಳಿದವರಿಗೆ ಗ್ರಂಥದ ಗುಡಿಯ ವಿಶೇಷವನ್ನು ತಿಳಿಸಿ ಕಾರ್ಯಕ್ರಮಕ್ಕೆ ಬರಲು ಪ್ರೇರೇಪಿಸುವುದಕ್ಕಾಗಿ ಈ ಲೇಖನ)

***

ನೆನಪಿನೋಕುಳಿ

– ಪೂರ್ಣಿಮ ಭಗವಾನ್

ನೆನಪಿನೋಕುಳಿಯಲಿ ಜೀವನ ಸಾಗಿಸುವ
ಸರಿ ತಪ್ಪುಗಳ ಒರೆಹಚ್ಚಿ ವಿಶ್ಲೇಷಿಸುವ

ಶಾಲಾದಿನದ ಬಾಲ್ಯದ ಸವಿ ನೆನಪಿನಲಿ
ಹಾಸ್ಯದ ಹೊನಲು ಹರಿಸೊ ಭಾವದಲಿ
ಗೆಳೆಯರು ಜೊತೆಯಾಗಿ ಸಂತಸಪಡುತಲಿ
ಚೈತನ್ಯ ಚಿಲುಮೆ ಚಿಮ್ಮಿಸಿ ನಗುನಗುತಲಿ

ನೆನಪಿನೋಕುಳಿಯಲಿ ಮಿಂದೇಳುತ
ಸರಿ ತಪ್ಪುಗಳನು ಒರೆ ಹಚ್ಚುತ
ಭಾವನೆಯ ವಿನಿಮಯದಿ ಸಂತೈಸುತ
ವಯದ ಹಂಗಿರದೆ ಹೊಂಗಿರಣ ಸೂಸುತ

ಶಾಲೆಯ ಆವರಣದಿ ಕುಳಿತು ಮಾತಾಡುತ
ಮೆಲುಕು ಹಾಕಿ ಅನುಭವ ಪಡೆಯುತ
ಬಂಗಾರದ ವಿದ್ಯಾರ್ಥಿ ಜೀವನ ಸ್ಮರಿಸುತ
ಮರಳಿ ಬಾರದ ಸಮಯ ಆನಂದಿಸುತ

ದೇಹದ ವಯಸು ಎಷ್ಟಾದರೇನು?
ಮನದ ಮಾತಿಗೆ ಮುಪ್ಪಿಹುದೇನು?
ಮರ ಮುಪ್ಪಾದರೆ ಹುಳಿ ಮುಪ್ಪೇನು?
ಜೀವನ ಸಂಭ್ರಮಕೆ ಕೊನೆ ಇಹುದೇನು?

***

ತನು ಮನ ಕನ್ನಡ

– ಎನ್. ಶಂಕರ ರಾವ್

ಮಲ್ಲಿಗೆ ಸಿರಿಕಂಡದ ಕಂಪಿನ ಗುಡಿಯಿದು
ಏಲಕ್ಕಿ ಬಾಳೆ ವೀಳ್ಯೆಯ ಸಿರಿಮುಡಿಯಿದು/
ಭೌಗೋಳಿಕ ಸೂಚಿಯ ಹೆಮ್ಮೆಯ ನಾಡಿದು
ವಾಣಿಜ್ಯ ಸಿರಿ ಸಂಪದ ಕನ್ನಡ ಬೀಡಿದು//

ಕಾವೇರಿ ಕೃಷ್ಣೆ ಗೋದಾವರಿಯರ ನಲುನಾಡು
ಕವಿ ಕಾವ್ಯ ಸಾಹಿತ್ಯ ಶಿಲ್ಪ ಕಲೆ ಪರಂಪರೆಯ ಬೀಡು/
ಕಸ್ತೂರಿ ಕನ್ನಡವಿರಲಿ ಎಲ್ಲರ ಮನ ಮನೆಯಲಿ
ಭುವನೇಶ್ವರಿಯರ್ಚನೆಯು ಶ್ರೀಗಂಧ ಸೌರಭದಲಿ//

ಕನ್ನಡ ಬರೀ ಭಾಷೆಯಲ್ಲವೋ
ಸಂಸ್ಕೃತಿಯ ಪ್ರತೀಕವದು ಕಾಣೋ/
ಭಾವುಕತೆಯ ಆತ್ಮೀಯ ಭಾಷೆಯದು
ನಮ್ಮಿಂದಾಗಲಿ ನಮ್ಮ ಭಾಷೆಗೆ ಆದ್ಯತೆಯು //

ಕಸ್ತೂರಿ ಕನ್ನಡ ಸಮೃದ್ಧತೆಯಲಿ
ಬೇರೂರಿದೆ ಮಣ್ಣಿನ ಕಣ ಕಣದಲಿ/
ಕನ್ನಡ ನೆಲಸಲಿ, ಅಲ್ಲಿ-ಇಲ್ಲಿ ಎಲ್ಲೆಲ್ಲೂ
ಪರಿಮಳವಾಗಲಿ ಮಲ್ಲಿಗೆಯ ಸೌರಭದಲಿ//

ಪರಿಪೂರ್ಣ ವರ್ಣಮಾಲೆಯಲಿ
ಮುತ್ತಿನಂತಹ ಅಕ್ಷರ ಲಿಪಿಯಲಿ/
ಶಾಸ್ತ್ರೀಯ ಭಾಷೆಯ ಗೌರವದಲಿ
ಮಾತೃಭಾಷೆ ಆತ್ಮಭಾಷೆಯ ರೂಪದಲಿ//

ಸಂಕುಚಿತ ಮನೋಭಾವವ ತೊರೆದು
ಆಡಳಿತ ವ್ಯವಹಾರಿಕ ಶೈಕ್ಷಣಿಕ ಭಾಷೆಯು/
ನಾಡು ನುಡಿ ಸ್ವಾಭಿಮಾನವ ಬಡಿದೆಬ್ಬಿಸಲಿ
ಕನ್ನಡದ ಕಹಳೆ ಜಯಭೇರಿಯ ಮೊಳಗಲಿ//

**

ಕವಿಸಮಯ

– ಗಣಪತಿ ಹೆಗಡೆ

'ಚಂದ್ರಮುಖಿ' ಅಂದರೆ 'ಚಂದ್ರನಂತಹ ಮುಖವುಳ್ಳವಳು' ಅಂತ ಪ್ರತ್ಯೇಕವಾಗಿ ವಿವರಣೆ ಕೊಡುವ ಅವಶ್ಯಕತೆ ಇಲ್ಲ. ಇದು ಮುಖದ ಸೌಂದರ್ಯವನ್ನು ಗುರುತಿಸಲು ಸಾಹಿತಿಗಳು ಬಳಸುವ ಶಬ್ದ. ಆದರೆ ಚಂದ್ರನಂತಹ ಮುಖವನ್ನು ಯಾವುದೇ ಪುರುಷನಾಗಲಿ, ಸ್ತ್ರೀಯಾಗಲೀ ಹೊಂದಲು ಸಾಧ್ಯವೆ?.

ಹಾಗಾದರೆ 'ಈ 'ಚಂದ್ರಮುಖಿ' ಎನ್ನುವ ಶಬ್ದವನ್ನು, 'ಚಂದ್ರನಂತಹ ಸುಂದರವಾದ ಮುಖವನ್ನು ಹೊಂದಿದವಳು' ಅಂತ ಹೋಲಿಸಿ ಮೊದಲು ಹೇಳಿದವನು ಯಾವ ಕವಿ, ಯಾವ ಕಾವ್ಯದಲ್ಲಿ, ಯಾವ ಸಂದರ್ಭದಲ್ಲಿ, ಯಾರನ್ನು ಕುರಿತು ಹೇಳಿದ್ದು ಅಥವಾ ಮೊದಲು ಈ ಶಬ್ದವನ್ನು 'ಸುಂದರವಾದ ಮುಖ' ಎನ್ನುವದರ ಬದಲಿಗೆ, ವಿಕಾರವಾದ ಮುಖವುಳ್ಳವಳು (ಮೊಲ ಅಥವಾ ಜಿಂಕೆಯ ರೂಪದ ಕಲೆಯನ್ನು ಹೊಂದಿದವಳು) ಅಂತ ಗುರುತಿಸಲು ಹೇಳಿದ್ದಿರಬಹುದೇ?

ಈ ಎಲ್ಲಾ ಸಂದೇಹಗಳಿಗೆ ಉತ್ತರಿಸಲು ಎಂತಹ ವಿದ್ವಾಂಸನಾದರೂ ಅವನಿಂದ ಸಾಧ್ಯವಿಲ್ಲ.

ಆದರೆ, 'ಮುಗಿಲ ಬೆನಕಗೆ ಲಡ್ಡುಗೆಗಳಾದವು ಸಮಸ್ತ ಗ್ರಹ ಸುತಾರೆಗಳು' ಎನ್ನುವಲ್ಲಿ, ಹೇಳಿದ್ದು ನಾರಣಪ್ಪ, ಕುಮಾರವ್ಯಾಸ ಭಾರತದಲ್ಲಿ ಮೋಡಗಳನ್ನು ಕುರಿತು ಹೇಳಿದ್ದು' ಅಂತ ಕುಮಾರವ್ಯಾಸ ಭಾರತವನ್ನು ಅಧ್ಯಯನ ಮಾಡಿದವರು ಹೇಳಬಹುದು.

ಹೀಗೆ ಕೆಲವು ಪ್ರತಿಮೆಗಳು ಅಥವಾ ಅಲಂಕಾರಗಳು ಬಹಳಷ್ಟು ಕಾವ್ಯಗಳಲ್ಲಿ ಕಂಡುಬರುತ್ತವೆ. ಆದರೆ ಇವು ಯಾವಾಗ ಬಳಕೆಗೆ ಬಂದವು ಎನ್ನುವದನ್ನು ಹೇಳಲು ಸಾಧ್ಯವಿಲ್ಲ. ಹಾಗೆಯೇ ಇದಕ್ಕೆ ಯಾವುದೇ ರೀತಿಯ ವೈಜ್ಞಾನಿಕವಾದ ಸಮರ್ಥನೆ ಸಿಗುವುದಿಲ್ಲ.

ಇಂತಹ ಪ್ರತಿಮೆ ಅಥವಾ ಅಲಂಕಾರಗಳನ್ನು 'ಕವಿಸಮಯ' ಎನ್ನುತ್ತಾರೆ.

'ಆವುದಶೇಷಲೋಕವಿಷಯಸ್ಥಿತಿಯಲ್ತಖಿಳಾಗಮಾರ್ಥಮುಂ।
ಭಾವಿಪೊಡಲ್ತು ಸತ್ಕವಿಪರಂಪರೆಯಿಂ ಪರಿಗೀತಮಾಗಿ ನಿ।
ಷ್ಕೇವಳಮಾದ ರೂಢಿವಶದಿಂ ಸಲೆ ಸಲ್ವುದಿದಲ್ತೆ ಶಿಷ್ಟ ಸಂ।
ಭಾವಿತಮಪ್ಪ ಕಾವ್ಯಸಮಯಂ ಭವನತ್ರಯವಸ್ತು ಗೋಚರಂ॥'

(ಲೋಕದಲ್ಲಿ ವಸ್ತುತಃ ಇಲ್ಲದೆಯೂ, ಶಾಸ್ತ್ರದಲ್ಲಿ ಪ್ರಸಿದ್ಧವಲ್ಲದೆಯೂ ಇರುವ ಅನೇಕ ಸಂಗತಿಗಳನ್ನು ಕವಿಗಳು, ಒಬ್ಬರಾದ ಮೇಲೆ ಮತ್ತೊಬ್ಬರು ಒಂದೇ ರೀತಿಯಿಂದ ಹೇಳುತ್ತಾ ಬಂದು ರೂಢಿಗೆ ತಂದಿರುತ್ತಾರೆ. ಈ ರೂಢಿಗೆ ಕವಿಸಮಯವೆಂದು ಹೆಸರು)

ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಮೊಟ್ಟಮೊದಲ ಬಾರಿಗೆ ರಾಜಶೇಖರನು ಕವಿಸಮಯ ಪರಿಕಲ್ಪನೆಯನ್ನು ರೂಪಿಸಿದನು. ಕವಿಗಳು ತಮ್ಮ ಕಲ್ಪನಾ ವಿಲಾಸವನ್ನು ಪ್ರದರ್ಶಿಸುವುದಕ್ಕಾಗಿ ಲೋಕಪ್ರಸಿದ್ಧವೂ ಶಾಸ್ತ್ರಸಂಗತವೂ ಅಲ್ಲದ ಕೆಲವು ವಿಷಯಗಳನ್ನು ಊಹಿಸಿಕೊಂಡು ಪಾರಂಪರ್ಯವಾಗಿ ಪ್ರಯೋಗಿಸುತ್ತ ಬಂದಿದ್ದಾರೆ. ಇದನ್ನೇ ಕವಿಸಮಯ, ಕವಿ ಸಂಪ್ರದಾಯ, ಕವಿಗಳ ಮಾಮೂಲು ಪದ್ಧತಿ ಎನ್ನುವರು.

ಎಲ್ಲ ಬಗೆಯ ಕವಿಸಮಯಗಳೂ ಕವಿಕಲ್ಪನೆಯ ಮೂಸೆಯಲ್ಲಿ ಪುಟಗೊಂಡು ನೂರಾರು ಅಲಂಕಾರಗಳಿಗೆ ಆಶ್ರಯವಾಗಿ ಕಾವ್ಯದಲ್ಲಿ ಸೌಂದರ್ಯದಾಯಕವಾಗುತ್ತವೆ. ಕವಿಯಾದವ ಪೂರ್ವಕವಿ ಪ್ರಯುಕ್ತವಾದ ಈ ಬಗೆಯ ಕವಿಸಮಯಗಳನ್ನು ಪರಿಚಯ ಮಾಡಿಕೊಳ್ಳಬೇಕೆಂಬುದೂ ಕವಿಶಿಕ್ಷಣದ ವಿಷಯಗಳಲ್ಲೊಂದು.

ಕವಿಸಮಯಗಳ ಸೂಚನೆ ವಾಮನನ ಗ್ರಂಥದಲ್ಲಿ ಬಂದರೂ ಇದನ್ನು ವಿವರವಾಗಿ ನಿರೂಪಿಸಿದ ಕೀರ್ತಿ ರಾಜಶೇಖರನದು. ಆತನ ಕಾವ್ಯಮೀಮಾಂಸೆಯನ್ನು ಅನುಸರಿಸಿಯೇ ಸಂಸ್ಕೃತದಲ್ಲಿ ಹೇಮಚಂದ್ರ, ಕನ್ನಡದಲ್ಲಿ ನಾಗವರ್ಮ ಮುಂತಾದವರು ತಂತಮ್ಮ ಗ್ರಂಥಗಳಲ್ಲಿ ಕವಿಸಮಯದ ಬಗ್ಗೆ ಬರೆದಿದ್ದಾರೆ. ಆದರೆ ವಾಲ್ಮೀಕಿಯಲ್ಲೇ ಎಷ್ಟೋ ಕವಿಸಮಯಗಳನ್ನು ಕಾಣಬಹುದಾಗಿದೆ.

ಅಮೂರ್ತ ಭಾವನೆಗಳಿಗೆ ಮೂರ್ತಸ್ವರೂಪ ಕೊಡುವುದು ಒಂದು ಬಗೆಯ ಕವಿಸಮಯ.

ಈ ಕವಿಸಮಯಗಳನ್ನು ನಾಲ್ಕು ಬಗೆಯಿಂದ ವಿಂಗಡಿಸಿದ್ದಾರೆ.

1. ಅಸದಾಖ್ಯಾತಿ, 2. ಸದಕೀರ್ತನ, 3. ನಿಯಮ, 4. ಐಕ್ಯ.

1. ಅಸದಾಖ್ಯಾತಿ (ಇಲ್ಲದಿರುವದನ್ನು ಇದೆಯೆಂದು ಹೇಳುವದು):

ಉದಾಹರಣೆ- ಚಕೋರವು ಬೆಳುದಿಂಗಳನ್ನು ಕುಡಿಯುವುದೆಂದೂ. ಕೀರ್ತಿ ಬೆಳ್ಳಗೂ, ಅಪಕೀರ್ತಿ ಕಪ್ಪಗೂ ಇರುವುದೆಂದೂ, ಚಾತಕ ಪಕ್ಷಿಗಳು ಮಳೆಯ ಹನಿಯನ್ನು ಕುಡಿಯುತ್ತವೆಂಬ ಕಲ್ಪನೆ, ನೀರಿದ್ದ ಕಡೆಯಲ್ಲೆಲ್ಲ ಹಂಸಗಳಿರುತ್ತವೆ, ಸೂಜಿಯಿಂದ ಚುಚ್ಚುಲಾಗದಷ್ಟು ಗೆಟ್ಟಿಯಾಗಿ ಮೋಡ ಹೆಪ್ಪುಗಟ್ಟಿದೆ ಎಂದು ಬಣ್ಣಿಸುವುದು. ಬೆಳದಿಂಗಳನ್ನು ಬೊಗಸೆಯಲ್ಲಿಟ್ಟುಕೊಳ್ಳಬಹದು, ಚಕ್ರವಾಕ ದಂಪತಿಗಳು ರಾತ್ರಿ ವಿರಹವನ್ನು ಅನುಭವಿಸವವೆನ್ನುವದು, ಯಶಸ್ಸಿನ ಬಣ್ಣ ಬಿಳಿ ಅಪಯಶಸ್ಸಿನ ಬಣ್ಣ ಕಪ್ಪು, ಕೋಪದ ಬಣ್ಣ ಕೆಂಪು. ಗಂಗಾನದಿಯಲ್ಲಿ ನೀರಾನೆಗಳಿವೆ ಎನ್ನುವದು.

2. ಸದಕೀರ್ತನ (ಇರುವುದನ್ನು ಇಲ್ಲದಂತೆ ಭಾವಿಸಿ ವರ್ಣಿಸುವದು):

ಉದಾಹರಣೆ- ಅಶೋಕ ವೃಕ್ಷದಲ್ಲಿ ಹಣ್ಣುಗಳಿಲ್ಲ ಎನ್ನುವುದು. ಗಂಧದ ಮರದಲ್ಲಿ ಹೂ ಹಣ್ಣುಗಳಿಲ್ಲವೆಂದು ಹೇಳುವುದು. ಶುಕ್ಲ ಪಕ್ಷದಲ್ಲಿ ಕತ್ತಲು ಇಲ್ಲವೇ ಇಲ್ಲವೆನ್ನುವುದು, ಕೃಷ್ಣ ಪಕ್ಷದಲ್ಲಿ ಬೆಳಕೇ ಇಲ್ಲ ಎನ್ನುವದು, ಬೇರೆ ಬಣ್ಣದ ಹೂಮೊಗ್ಗುಗಳಿಗೂ ಬಿಳಿಯ ಬಣ್ಣ ಮಾತ್ರ ಇರುತ್ತದೆಯೆಂದು ಹೇಳುವದು.

೩. ನಿಯಮ (ಅನೇಕ ಕಡೆ ದೊರಕುವದನ್ನು ಒಂದೇ ಕಡೆ ದೊರಕುವಂತೆ ಹೇಳುವದು):

ಉದಾಹರಣೆ- ಮುತ್ತುಗಳು ತಾಮ್ರಪರ್ಣಿಯಲ್ಲಿ ಮಾತ್ರ ದೊರೆಯುವುದೆಂದು. ಶಂಖ ತಿಮಿಂಗಲುಗಳು ಸಮುದ್ರದಲ್ಲಿ ಮಾತ್ರ ಇರುವವೆಂದು ಭಾವಿಸುವದು, ನದಿಗಳಲ್ಲಿ ಹಂಸಗಳು, ತಾವರೆ, ಕನ್ನೈದಿಲೆ ಹೂಗಳು ಮುಂತಾದವು ಇವೆಯೆಂದು ವರ್ಣಿಸುವುದು. ಬೆಟ್ಟಗಳಲ್ಲಿ ನಾನಾಬಗೆಯ ರತ್ನಗಳಿವೆ ಎಂಬ ಕಲ್ಪನೆ, ಸಮುದ್ರಗಳಲ್ಲಿ ಮುತ್ತು ರತ್ನಗಳಿವೆ ಎಂಬ ವರ್ಣನೆ ಮುಂತಾದುವು ಪ್ರಕೃತಿ ವರ್ಣನೆಗೆ ಅಲೌಕಿಕ ಸೌಂದರ್ಯವನ್ನು ಚೆಲುವನ್ನು ಕೊಡತಕ್ಕಂಥವು.

ಇದೇ ರೀತಿ ವರ್ಣನಾಸೌಕರ್ಯಕ್ಕಾಗಿ ಮಲಯ ಪರ್ವತದಲ್ಲಿ ಮಾತ್ರ ಶ್ರೀಗಂಧವಿರುವುದೆಂದೂ, ಕನ್ನೈದಿಲೆ ರಾತ್ರಿ ಮಾತ್ರ ಅರಳುವುದೆಂದೂ, ಕೋಗಿಲೆ ವಸಂತದಲ್ಲಿ, ನವಿಲು ಮಳೆಗಾಲದಲ್ಲಿ ಮಾತ್ರ ಕೂಗುತ್ತವೆನ್ನುವುದು.

4. ಐಕ್ಯ (ವಸ್ತುತಃ ಭೇದವಿರತಕ್ಕ ವಸ್ತುಗಳಲ್ಲಿ ಭೇದಮಾಡದಿರುವದು):

ಉದಾಹರಣೆ- ದೈತ್ಯರು-ದಾನವರು-ರಾಕ್ಷಸರು, ಸರ್ಪ-ನಾಗ ಒಂದೇ ಎಂಬುದು. ಚಂದ್ರನಲ್ಲಿರವ ಕಳಂಕ-ಮೊಲವೆಂದೂ, ಜಿಂಕೆಯೆಂದೂ ವರ್ಣಿಸುವದು. ಮನ್ಮಥನ ಧ್ವಜದಲ್ಲಿ ಮೀನ ಹಾಗೂ ಮಕರಗಳನ್ನು ಅಭೇದದಿಂದ ವರ್ಣಿಸುವದು.

ಇನ್ನೂ ಕೆಲವು ಉದಾಹರಣೆಗಳಿವೆ.

ಮಹಾಪುರುಷರ ಕೀರ್ತಿ ಧವಳವಾಗಿದೆ ಎನ್ನುವುದು. ಅದು ಅವರ ಸುತ್ತ ಪ್ರಭಾವಲಯವೊಂದನ್ನು ಸೃಷ್ಟಿಸಿ ಕೊಳ್ಳುತ್ತದೆಂದು ವರ್ಣಿಸುವುದು. ಕೋಪ ಕ್ರೋಧಾರುಣ ಜಲ ಮುಂತಾದವು. ಆನೆಯ ಕುಂಭಸ್ಥಳ, ಸರ್ಪಗಳ ಹೆಡೆಗಳು ಮತ್ತು ಸಮುದ್ರಗಳಲ್ಲಿ ಮುತ್ತು ರತ್ನಗಳಿವೆ ಎಂಬ ನಂಬುಗೆ.

ಕವಿಸಮಯವನ್ನು ಅಭ್ಯಾಸ ಮಾಡಿಕೊಂಡು ಅವುಗಳನ್ನು ತಮ್ಮ ತಮ್ಮ ಕೃತಿಗಳಲ್ಲಿ ಅನುಕೂಲವಾಗಿ ಬಳಸಿಕೊಂಡಲ್ಲಿ ಸುಂದರವಾದ ಕಾವ್ಯ ರಚನೆ ಸಾಧ್ಯ.

***

ಎರಡು ಕವನಗಳು

ಅಡುಗೆಮನೆ ಆಧ್ಯಾತ್ಮ

– ಶೀಲಾ ಅರಕಲಗೂಡು

ಕವನ–1

ಹದ

– ಶೀಲಾ ಅರಕಲಗೂಡು

ಅಧ್ಯಾತ್ಮ ಚಿಂತನೆಗೆ ಮತ್ತದರ ಮಂಥನಕೆ
ಅಡುಗೆ ಮನೆ ಬಲು ಸೊಗಸು ತಪಸಿನಾ ಗುಹೆಯು।
ದೇಹಕ್ಕೆ ವ್ಯಾಯಾಮ ಮನ ಬೇರೆ ಆಯಾಮ
ಧ್ಯಾನಸ್ಥ ಸ್ಥಿತಿಗಾಗಿ ಪಾಕ ಮನೆಯು ॥1॥

ಮೌನದಲಿ ಸಹಕರಿಸಿ ಹೇಳದುದ ಕೇಳುವುವು
ಸುತ್ತಲಿಹ ಪಾತ್ರೆಗಳು ನನಗೆ ಬಾಂಧವರು।
ಮುಟ್ಟದೆಯೆ ತಟ್ಟದೆಯೆ ಮೂಲೆಯೊಳಗಿಟ್ಟರೂ
ಮಾತನಾಡದೆ ನನ್ನ ಸಹಿಸುವವರು ॥2॥

ಹಲವು ಗೂಡುಗಳಹವು ಪಾತ್ರೆಗಳನಿಡಲಿಕ್ಕೆ
ಪ್ರತಿಯೊಂದು ಬಗೆಗುಂಟು ಜಾಗಗಳು ಬೇರೆ।
ದಿನಚರಿಯಲೀರೀತಿ ಯೋಜನೆಯ ಮಾಡಿದರೆ
ಘರ್ಷಣೆಯು ಅತಿ ಕಡಿಮೆ ಸಹನೆ ಸೇರೆ ॥3॥

ಅಕ್ಕಿ ಬೇಳೆಗಳುಂಟು ಜೊತೆಗೆ ಕಾಳುಗಳುಂಟು
ಘಮಘಮಿಪ ಸಾಂಬಾರು ಪದಾರ್ಥಗಳಹವು।
ತರಕಾರಿ ಜೊತೆಗೂಡಿ ಪಾಕಗೊಳ್ಳುವ ಪರಿಯು
ಅಚ್ಚರಿಯು ನಾಲಿಗೆಗೆ ರುಚಿಯು ಹಲವು ॥4॥

ಎಷ್ಟೆಲ್ಲ ಜನರುಂಟು ನಮ್ಮದೀ ಬಾಳಿನಲಿ
ಕಾಣಬೇಕವರಲ್ಲಿ ಸದ್ಭಾವಗಳನು।
ಮನೆಯಲ್ಲಿ ಲೋಕದಲಿ ಬಳಗದಲಿ ಮಕ್ಕಳಲಿ
ಪ್ರೀತಿಯಿಂದಲಿ ಬೆರೆಯೆ ಬದುಕು ಹಸನು ॥5॥

ತಿಂಡಿಗಳು ತೀರ್ಥಗಳು ಹಲವುಂಟು ದಿನದಿನಕು
ಸಿಹಿ ಖಾರದೂಟಗಳು ದಿನ ಮೂರು ಬಾರಿ।
ಎಷ್ಟೆಷ್ಟು ತಿಂದರೂ ಬೇಸರವೆ ಕಾಣದಲ
ಕುಣಿಯುವುವು ತನು ಮನವು ನೆನೆದು ಹಾರಿ ॥6॥

ವೈವಿಧ್ಯಮಯ ಬಾಳು ನೂರಾರು ಘಟನೆಗಳು
ನೋವುಂಟು ನಲಿವುಂಟು ಪಡೆಯಲನುಭವವ।
ಅನುಭಾವವಾಗಿಸುತ ಮತಿಯನ್ನು ಬೆಳೆಸುತ್ತ
ರುಚಿಯನಾಗಿಸಬೇಕು ಕಳೆದು ದಿನವ ॥7॥

ನಿತ್ಯ ಸಂಜೀವಿನಿಯು ಅಭಿಮಾನದಡುಗೆಮನೆ
ಹದ ತಪ್ಪಬಹುದೊಮ್ಮೆ ಮರುಯತ್ನವಿರಲಿ।
ಅಂತೆ ಜೀವನವಿಹುದು ಪಾಕಶಾಲೆಯ ರೀತಿ
ಹದಗೊಂಡು ನಲಿಯೋಣ ಈ ಬಾಳಲಿ ॥8॥

***

ಕವನ-2

ಚಮಚವಾಗುವ ಬಯಕೆ

- ಶೀಲಾ ಅರಕಲಗೂಡು

ಪಾತ್ರೆಗಳನುಜ್ಜುತ್ತ ಮತ್ತವನು ತೊಳೆಯುತ್ತ
ಜೋಡಿಸುವೆ ನಾ ನಿತ್ಯ ಬಿಟ್ಟು ಬಿಡದಂತೆ।
ಕಾಯಿಸುತ ನೋಯಿಸುತ ದಣಿಸುವೆನು ಬೆಂಬಿಡದೆ
ಆದರೂ ಉಣಿಸುವುವು ಅಮ್ಮನಂತೆ ॥1॥

ಸಾಕಷ್ಟು ಹಳೆಯವಿವು ಬಹುಕಾಲದಿಂದಿಹವು
ನಮ್ಮಮ್ಮನೂ ಬಳಸಿ ನಮ್ಮ ಬೆಳೆಸಿದ್ದು।
ಕೆಲವೊಮ್ಮೆ ಹಲವಾರು ಕಥೆಗಳನು ಹೇಳುವುವು
ಪ್ರೀತಿಯಿಂದಲಿ ನನ್ನ ಬಳಿಯೆ ಬಂದು ॥2॥

ಜೀವನದ ನಾಟಕಕೆ ಬದುಕುಳಿದು ಬೆಳೆಯಲಿಕೆ
ನಿತ್ಯ ಶಕ್ತಿಯ ಪಡೆಯೆ ಪಾತ್ರೆಗಳು ಬೇಕು।
ಪಾತ್ರೆಗಳ ಪಾತ್ರಗಳು ಅದಲು ಬದಲಾದರೂ
ನಿಷ್ಠೆ ತಪ್ಪವು ನೋಡಿ ಕಲಿಯಬೇಕು ॥3॥

ತಾವೆಷ್ಟು ದುಡಿದರೂ ಸ್ವಾರ್ಥವೊಂದಿಷ್ಟಿಲ್ಲ
ತಮಗಾಗಿ ಬಳಸದೆಯೆ ಕೊಟ್ಟು ತಣಿಯುವುವು।
ಕರ್ಮ ಯೋಗಿಗಳಾಗಿ ಸೇವೆಯನು ಮಾಡುತ್ತ
ಕೃಷ್ಣ ಬೋಧಿಸಿದಂತೆ ಬಾಳುತಿಹವು ॥4॥

ಪಾತ್ರೆಗಳು ಪಡಗಗಳು ಅವಕುಂಟು ಹೆಸರುಗಳು
ಪಾತ್ರಕ್ಕೆ ತಕ್ಕಂತೆ ನಾಮಕರಣಗಳು।
ರೂಪ ಗಾತ್ರವು ಬೇರೆ ಆಕಾರ ಬಲು ಭಿನ್ನ
ಸರ್ವವೂ ಬಲುಮುಖ್ಯ ಈ ಬಾಳೊಳು ॥5॥

ಬೆಳಗು ಕಾಫಿಗೆ ಫಿಲ್ಟರ್ ಚಹವ ಸೋಸಲು ಸ್ಟ್ರೇನರ್
ಕಾಫಿ ಪುಡಿ ಸಕ್ಕರೆಗೆ ವಿವಿಧ ಡಬ್ಬಿಗಳು।
ನೀರು ಕುದಿಸಲು ಕೆಟಲು ಹಿಡಿ ಪಾತ್ರೆ ಕೆಲವೊಮ್ಮೆ
ಕುಡಿಯಲಿಕೆ ಲೋಟಗಳು ಬಟ್ಟಲುಗಳು ॥6॥

ತಪ್ಪಲೆಯು ಅನ್ನಕ್ಕೆ ಸಾರು ಹುಳಿ ಡಬರಿಯಲಿ
ಗುಂಡಾಲು ಬೋಗುಣಿಯು ಗೊಜ್ಜು ಪಲ್ಯಕ್ಕೆ।
ಕರಿಯಲಿಕೆ ಬಾಣಲೆಯು ಲಟ್ಟಿಸಲು ಲಟ್ಟಣಿಗೆ
ತುರಿವ ಮಣೆ ಚಾಕುಗಳು ಹೆಚ್ಚಲಿಕ್ಕೆ ॥7॥

ಬೇಯಿಸಲು ಕುಕ್ಕರ್ರು ಪಾತ್ರೆ ಮುಚ್ಚಲು ತಟ್ಟೆ
ಬಿಸಿ ಪಾತ್ರೆ ಹಿಡಿಯಲಿಕೆ ಬೇಕು ಇಕ್ಕಳವು।
ಜನ ಜಾಸ್ತಿ ಇದ್ದಾಗ ಹಂಡೆ ಕೊಳದಪ್ಪಲೆಯು
ಈಗೆಲ್ಲ ಚಿಕ್ಕದೇ ಸಂಸಾರವು ॥8॥

ಅಡುಗೆ ಬಡಿಸಲು ಬೇಕು ಸೌಟು ಸಟ್ಟುಗ ಹಲವು
ಮೊಗಚುವಾ ಕೈ ಬೇಕು ರೊಟ್ಟಿ ಚಪಾತಿಗೆ।
ಊಟ ಮಾಡಲು ಬೇಕು ದೊಡ್ಡ ಹರಿವಾಣಗಳು
ಕಂಡು ಕಾಣದ ಚಮಚ ಘೃತಕೆ ಕೊನೆಗೆ ॥9॥

ಚಿಕ್ಕದಾದರು ಚಮಚ ಬೇಸರವು ಅದಕಿಲ್ಲ
ತನ್ನ ಪಾತ್ರದ ಅರಿವು ತಿಳಿದಿಹುದು ಅದಕೆ।
ನಾ ಕೂಡ ಹಲವಾರು ಚಮಚಗಳಲೊಂದಾಗಿ
ಸಾರ್ಥಕದ ಬದುಕನ್ನು ಬಾಳ್ವ ಬಯಕೆ ॥10॥

***

ಚಾವಣಿ ಏರಿದ ಮುದುಕ

– ವಿಠ್ಠಲ್ ಇಜೇರಿ

ನಾನು ಇತ್ತೀಚಿನ 4-5 ಚಲನಚಿತ್ರಗಳನ್ನು ನೋಡಿದೆ. ಒಂದೊಂದೂ ಸಾವಿರ ಕೋಟಿ ಕ್ಲಬ್ ಮತ್ತು ಪ್ಯಾನ್ ಇಂಡಿಯಾ ಚಿತ್ರಗಳು (ಕಾಂತಾರ ಹೊರತಾಗಿ). ಒಂದೊಂದು ಚಿತ್ರ ನೋಡಿದಾಗಲೂ ನನ್ನ ಅನುಭವ ಸುಮಾರು ಇನ್ನೂರು ರೂಪಾಯಿ ದಂಡ ಮತ್ತು ಮೂರು ಗಂಟೆ ಶಿಕ್ಷೆ ಅನಿಸಿತು. ಅಷ್ಟೇ ಆಗಿದ್ದರೆ ಪರವಾಗಿರಲಿಲ್ಲ, ನನಗೆ ತಪ್ಪು ಮಾಡಿದ ಮತ್ತು ಅದಕ್ಕಾಗಿ ಪರಿಹಾರ ರೂಪದಲ್ಲಿ ಒಂದು ಹಳೆಯ ನನ್ನ ಮೆಚ್ಚಿನ ಚಿತ್ರ ನೋಡಬೇಕು ಎಂಬ ಹಂಬಲ ಉಂಟಾಯಿತು. ಆಗ ನನ್ನ ನೆನಪಿಗೆ ಬಂದದ್ದು 1972 ರ ವೇಳೆಯಲ್ಲಿ ಅಡೋ ಥಿಯೇಟರನಲ್ಲಿ ನೋಡಿದ ಯಹೂದಿ ನಟ ಟೋಪಲ್ ನಟಿಸಿದ ಸಂಗೀತಮಯ ಚಿತ್ರ 'ಫಿಡಲರ್ ಆನ್ ದಿ ರೂಫ್'.

ಇಂದಿಗೂ ಸಂಗೀತಮಯ ಚಿತ್ರ ನಿರ್ಮಿಸುವವರಿಗೆ ಈ ಚಿತ್ರ ಒಂದೆರಡು ಸಲ ವೀಕ್ಷಿಸಲು ಚಿತ್ರಬ್ರಹ್ಮರು ಶಿಫಾರಸು ಮಾಡುತ್ತಾರೆ.

ಹಿಂದಿನ ಸಮಯದ (imperial) ರಶಿಯಾದ ಅನಾತೆವ್ಕಾ ಹಳ್ಳಿಯ ಗೌಳಿ ಟೆವಿ ಎಂಬ ಯಹೂದಿ. ಅವನು ತನ್ನ ಯಹೂದಿ ಸಂಸ್ಕೃತಿಯ ಧಾರ್ಮಿಕ ಮತ್ತು ಸಂಪ್ರದಾಯ ಉಳಿಸಿಕೊಳ್ಳುವ ಪ್ರಯತ್ನ ಈ ಚಿತ್ರದ ಕತೆಯಾಗಿದೆ. ಯಾಕೆಂದರೆ ಇತರೆ ಜನಾಂಗ ಯಹೂದಿಗಳನ್ನು ಮುಗಿಸಲು ಹೊಂಚು ಹಾಕುತ್ತಿದ್ದವು. ಇದು 1905ರ ಸಮಯದ ಚಿತ್ರವಾಗಿದ್ದರೂ ಇಂದಿಗೂ ಇಸ್ರೇಲ ಮೇಲೆ ಮುಗಿಬೀಳಲು ಅದನ್ನು ಸುತ್ತುವರಿದ ದೇಶಗಳು ಕಾಯುತ್ತಿವೆ. ಅವನ ಐದು ಜನ ಹೆಣ್ಣು ಮಕ್ಕಳಲ್ಲಿ, ಮೂರು ಹೆಣ್ಣು ಮಕ್ಕಳು ಮದುವೆಗಾಗಿ ಆರಿಸಿದ ಗಂಡುಗಳ ಬಗ್ಗೆ ಅವನಿಗೆ ಬೇಸರವಿದೆ. ಆಗಿನ ಸರಕಾರವು ಯಹೂದಿಗಳನ್ನು ಅವರ ಹಳ್ಳಿಯಿಂದ ಗಡಿಪಾರು ಮಾಡುತ್ತದೆ. 1964ರ ಬ್ರಾಡ್‌ವೇ ರಂಗ ಸಂಗೀತ ರೂಪಕ ಹತ್ತು ವರ್ಷಗಳವರೆಗೆ ಯಶಸ್ಸು ಕಂಡಿತು. 1971ರಲ್ಲಿ 'ಫಿಡಲರ್ ಆನ್ ದಿ ರೂಫ್' ಚಲನಚಿತ್ರವಾಯಿತು.

ಕತೆ ಜೋಸೆಫ್ ಸ್ಟೈನ್ ಮತ್ತು ನಿರ್ಮಾಣ ನಾರ್ಮನ್ ಜೇವಿಸ್. ಸಂಗೀತ ನಿರ್ದೇಶಕರು ಜಾನ್ ವಿಲಿಯಮ್ಸ್. ಇದು ಆ ವರ್ಷದ (1971) ಅತೀ ಹೆಚ್ಚು ಗಳಿಕೆಯ ಚಿತ್ರವಾಗಿತ್ತು. ಯಾವಾಗಲೂ ದೊಡ್ಡ ಮೀನು ಚಿಕ್ಕ ಮೀನನ್ನು ತಿಂದು ಬದುಕುವಂತೆ. 20ನೇ ಶತಮಾನದ ಆದಿಯಲ್ಲಿ ಯಹೂದಿ ಸಂಸ್ಕೃತಿಯ ಮೇಲೆ ಇತರ ಸಂಸ್ಕೃತಿಗಳು ದಬ್ಬಾಳಿಕೆ ನಡೆಸಿದ್ದು ಕತೆಯ ಕೇಂದ್ರವಾಗಿತ್ತು. ಮೇಲೆ ತಿಳಿಸಿದಂತೆ ತಮ್ಮ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಉಳಿಸಿಕೊಳ್ಳಲು ಹೋರಾಟ ಮಾಡುವ ಹಳ್ಳಿಯ ಗೌಳಿಯ ಕತೆ ಇದಾಗಿದೆ. ಆದರೂ ಅಂದಿನ ದಿನದಿನದ ಬದಲಾವಣೆಗೆ ಹೊಂದಿಕೊಳ್ಳುವ ಅವಶ್ಯಕತೆಯನ್ನೂ, ಒಪ್ಪಿಕೊಳ್ಳುವ ಅನಿವಾರ್ಯತೆ ಯಹೂದಿಗಳಿಗಿತ್ತು.

ಬಡ ಗೌಳಿ ತೇವೇಯು ಗೋಲ್ಡಿಯೊಡನೆ ಮದುವೆಯಾಗಿ 25 ವರ್ಷಗಳಾಗಿವೆ. ಅವರಿಗೆ ಐದು ಜನ ಹೆಣ್ಣು ಮಕ್ಕಳು. ಹಿರಿಯ ಮಗಳು ಟೇಜೆಟಿಲ್ (Tzeitel) ಮದುವೆಯನ್ನು ಅಲ್ಲಿಯ ಮದುವೆ ಎಜೆಂಟ್ ಎಂಟೆ ಎಂಬಾಕೆ ವಿದುರ ಲಾಜಾವುಲ್ಫ್ ಎಂಬ ಕಟುಕನೊಂದಿಗೆ ಗೊತ್ತುಮಾಡುತ್ತಾಳೆ. ಆದರೆ ಟೇವೆ ಮಗಳು ಟೇಝೆಟಿಲ್ ಬಡ ದರ್ಜಿ ಮೋಟಲ್ ಕಮಜೋಲ್‌ನನ್ನು ಪ್ರೀತಿಸಿರುತ್ತಾಳೆ. ಆಕೆ ತನ್ನ ಪ್ರಿಯಕರ ಮೋಟಲ್ ಕಮಜೋಲ್‌ನನ್ನು ವರಿಸಲು ತನ್ನ ತಂದೆ ಟೇವೆಯ ಅಪ್ಪಣೆ ಬೇಡುತ್ತಾಳೆ. ಮಗಳ ಆಶೆ ಪೂರೈಸಲು ಟೇವೆ ಒಪ್ಪಿಗೆ ನೀಡುತ್ತಾನೆ. ಟೇವೆಯ

ಎರಡನೇ ಮಗಳು ಹೊಡೆಲ್ ಕ್ರಾಂತಿಕಾರಿ ಯುವ ವಿದ್ಯಾರ್ಥಿ ಪೆರ್ಚಿಕ್ ಮದುವೆಯಾಗ ಬಯಸುತ್ತಾರೆ, ತಂದೆ ಆಕೆಯ ಮದುವೆಗೂ ಸಮ್ಮತಿಸುತ್ತಾನೆ. ಆದರೆ ಸರಕಾರ ಕ್ರಾಂತಿಕಾರಿ ಹುಡುಗ ಪೇರ್ಚಿಕ್‌ನನ್ನು ಸೈಬೇರಿಯಾಕ್ಕೆ ಗಡಿಪಾರು ಮಾಡುತ್ತದೆ. ಆಗ ಟೇವೆ ಮಗಳು ಹೊಡೆಲ್ ತನ್ನ ಗಂಡನಿರುವ ಸೈಬೇರಿಯಾಕ್ಕೆ ಹೊರಟುಬಿಡುತ್ತಾಳೆ. ತಾವೇಯ ಮೂರನೇ ಮಗಳು ಚಾವಾ ಕ್ರಿಶ್ಚಿಯನ್ ಫ್ಯೆಡೇಕ್ ಎಂಬ ಯುವಕನನ್ನು ಮದುವೆಯಾಗ ಬಯಸುತ್ತಾಳೆ. ಆದರೆ ಯಹೂದಿ ತೇವೆ ಈ ಸಂಬಂಧವನ್ನು ಒಪ್ಪುವುದಿಲ್ಲ ಮತ್ತು ಆಕೆ ಅವನನ್ನೇ ಮದುವೆಯಾದರೆ ತಮ್ಮ ಪಾಲಿಗೆ ಚಾವಾ ಸತ್ತು ಹೋದಂತೆ ಎಂದು ಉದ್ಘರಿಸುತ್ತಾನೆ. ಆ ವೇಳೆಗೆ ಇಂಪಿರಿಯಲ್ ರಶಿಯಾ ಸರಕಾರ ಯಹೂದಿಗಳನ್ನು (ಜ್ಯೂಯಿಶ್) ಅನತೇವ್ಕಾ ಗ್ರಾಮದಿಂದ ಮೂರು ದಿನಗಳಲ್ಲಿ ಹೊರಟುಬಿಡಬೇಕು ಎಂದು ಅಜ್ಞಾಪಿಸುತ್ತಾರೆ. ಪೋಲೀಸನೊಬ್ಬ ಮತ್ತು ರಶಿಯದ ಸೈನಿಕರು ತುಂಬ ನೋವಿನಿಂದ ಯಹೂದಿಗಳು ಅಷ್ಟು ವರ್ಷ ಬಾಳಿದ ಅನತೇವ್ಕಾ ಗ್ರಾಮ ಬಿಟ್ಟು ಹೋಗುವ ಸಂಕಟವನ್ನು, ಅವರು ಗಂಟು ಮೂಟೆ ಕಟ್ಟುವದನ್ನು ನೋಡುತ್ತಾರೆ. ಅವರೆಲ್ಲ ಪೋಲಂಡ, ಅಮೇರಿಕಾ, ಸೈಬೇರಿಯಾ ಮತ್ತು ಯುರೋಪಿನ ಬೇರೆ ಬೇರೆ ದೇಶಗಳಿಗೆ ಹೊರಡುತ್ತಾರೆ. ಗ್ರಾಮವನ್ನು ತೊರೆಯುವ ಮೊದಲು ಯಹೂದಿಗಳೆಲ್ಲ ವೃತ್ತಾಕಾರದಲ್ಲಿ ಸೇರಿ ನೃತ್ಯ ಮಾಡುತ್ತಾರೆ. ತೇವೆ ತನ್ನ ಮಗಳು ಚಾವಾ ಕೊನೆಯ ಭೇಟಿಗೆ ಬಂದಾಗ ಆಕೆ ತಮ್ಮ ಸಂಪ್ರದಾಯ ಮುರಿದು ಕ್ರಿಶ್ಚಿಯನನ್ನು ಮದುವೆಯಾದುದಕ್ಕೆ ಆಕೆಯೊಡನೆ ಮಾತು ಬಿಟ್ಟಿದ್ದರೂ, ಆಕೆಗೆ ಕ್ಷಮಿಸಿ "ದೇವರು ನಿಮ್ಮೊಂದಿಗೆ ಇರಲಿ" ಎಂದು ಆಶೀರ್ವಾದ ಮಾಡುತ್ತಾನೆ.

ಹೀಗೆ ಒಂದು ಜನಾಂಗ ಆಡಳಿತಗಾರರ ದಬ್ಬಾಳಿಕೆಯಿಂದಾಗಿ ದೇಶವನ್ನೇ ತೊರೆಯಬೇಕಾಯಿತು ಎಂಬ ಮಾನವೀಯ ಹಿನ್ನೆಲೆ ಕತೆಗಿದೆ.

ಟೇವೇ (ಟೋಪೋಲ್, ಒಬ್ಬ ಯಹೂದಿ ಈ ಪಾತ್ರ ನಿರ್ವಹಿಸಿದ್ದಾನೆ) ಯಹೂದಿಗಳ ಸಂಪ್ರದಾಯ ಮತ್ತು ಸಂಸ್ಕಾರಗಳ ಬಗ್ಗೆ ತಿಳಿಸಿ ರಶಿಯಾದ ಅನಟೇವ್ಕಾದಲ್ಲಿ ಯಹೂದಿಗಳಿಗಾದ ಅನ್ಯಾಯವನ್ನು ತಿಳಿಸುತ್ತಾನೆ. ಅದೇ ಈ ಚಿತ್ರದ ಸಾರ. ಆದರೆ ಈ ಚಿತ್ರವನ್ನು ಸಂಗೀತಮಯ ಮತ್ತು ಯಹೂದಿ ಸಂಪ್ರದಾಯದ ನೃತ್ಯಗಳಿಂದ ಸಿಂಗರಿಸಲಾಗಿದೆ. ಆದುದರಿಂದ ಸಿನಿಪ್ರಿಯರಿಗೆ ಉತ್ತಮ ಕತೆ, ಲೋಕಸಂಗೀತ, ಉತ್ತಮ ಚಿತ್ರಸಂಗೀತ, ಸಾಂಪ್ರದಾಯಿಕ ನೃತ್ಯಗಳು, ಉತ್ತಮ ಫೋಟೋಗ್ರಾಫಿ, ಅಲ್ಲಲ್ಲಿ ತಿಳಿ ಹಾಸ್ಯ ಮತ್ತು ಸುಂದರ ಪ್ರಾಕೃತಿಕ ದೃಶ್ಯಗಳೊಂದಿಗೆ ಇಷ್ಟವಾಗುತ್ತದೆ. ಇದು ಆಸ್ಕರ್ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ಬಾಚಿಕೊಂಡಿದೆ.

***

ಹೊಳೆಯುದೆಲ್ಲ ಹೊನ್ನಲ್ಲ!

(ಇಂಗ್ಲಿಷ್ ಮೂಲ: ಥಾಮಸ್ ಗ್ರೇ)

ಭಾವಾನುವಾದ: ಡಾ. ಸತ್ಯವತಿ ಮೂರ್ತಿ

ಚೀನ ದೇಶದ ನಗರದಲೊಂದು
ಅರಮನೆಯನ್ನು ಕಂಡೆನು ನಾನು
ಅಲ್ಲಿಯ ವೈಭವ ಬಣ್ಣಿಸಲೇನು?
ನನಗದು ಸಾಧ್ಯವೇ ಶೇಷನೆ ನಾನು?

ಚಿತ್ರಕಲೆಯದಾ ವೈಭವವೇನು?
ಜೀವಂತ ಕಲೆಯ ಸ್ಫೂರ್ತಿಯೆ ತಾನು
ಚಿತ್ತಾರವದುವೆ ಮನವನು ಸೆಳೆವುದು
ನವುರು ಕುಸುರಿನ ಕೆಲಸವು ತಾನದು

ಅಂತಹುದೊಂದು ಹೂಜಿಯಿತ್ತಲ್ಲಿ
ಅರಮನೆಯ ಒಳಹಜಾರದಲ್ಲಿ
ಚಿತ್ರಕಲೆಯ ಎರಕವೆ ತಾನು?
ಮಯನ ಕೃತಿಯನಣಗಿಪುದೇನು?

ಆಗಸ ನೀಲಿಯು ಮೂಡಿಹುದಲ್ಲಿ
ಸೂಕ್ಷ್ಮ ಸರಳನ ಪದರಗಳಲ್ಲಿ
ನೈಜತೆಯನು ಮೂಡಿಪ ಹೂಗಳು
ಬೆರಗನು ತೋರುತ ಅರಳುವ ಮುಗುಳು

ಮೂಡುತ ಸೆಳೆದಿಹವದರ ಮೇಲೆ
ನೋಡುವ ಕಣ್ಣಿಗೆ ಹಾಕುತ ತಾ ಬಲೆ
ಬೆಕ್ಕೊಂದು ನೋಡಿತು ಹೂಜಿಯಿದನ್ನು
ಕಾಲವು ಕೆಟ್ಟಿತು ಅದರದು ಇನ್ನು

ಅಪೂರ್ವ ರೂಪದ ಪ್ರತಿಕೃತಿಯತ್ತ
ದುರುದುರು ನೋಡಿತು ದಿಟ್ಟಿಸುತ್ತತ್ತ
ಬೆಳ್ಳನೆ ಗಡ್ಡ ದುಂಡು ಮೊಗವು
ನೇರಾದ ಕಿವಿಯು ಹೊಳೆವಾ ಕಣ್ಣು

ಮೃದುವಾದ ಪಾದದ ಸುಂದರ ಬೆಕ್ಕು
ನೋಡುತ ನೋಡುತ ಸೋತಿತು ನಿಜಕು
ಆಗಲೆ ಅದರ ಕಣ್ಣದು ಕಂಡಿತ್ತು
ನೀರನು ಸೀಳ ಫಳಫಳಸಿತ್ತು

ಜಾರುತಲಿರುವ ಮೀನುಗಳ
ವೇಷದಿ ಬಂದಿಹ ದೈವಗಳ
ನದಿಯ ದೇವರ ಕೃಪೆಯೆಂಬಂತೆ
ಚಿನ್ನದ ಕಾಂತಿಯನಣಗಿಸುವಂತೆ

ಹೊಳೆವಾ ನೀಲಿಯ ಕಾಂತಿಯಲವುಗಳು
ಸೆಳೆದವು ಬೆಕ್ಕುವ ತಮ್ಮೆಡೆಗಾಗಳು
ಅಚ್ಚರಿಯಲಿ ತಾ ಬೆಕ್ಕುವು ನೋಡಿತು
ಕಣ್ಣನು ಪಿಳುಕಿಸಿ ಕೈಯನು ಚಾಚಿತು

ಹೊಳೆವಾಮೀನನು ಪಡೆವಾಹವಣಿಕೆ
ಏತಕೆ ಬಂತೋ ಕಾಣೆನು ಅದಕೆ
ಕೈಗಳ ಚಾಚಿತು ಆಳಕೆ ಬೆಕ್ಕು
ಕಾಣುವ ಮೀನ್ಗಳ ಹಿಡಿಯುವ ಸೊಕ್ಕು

ಹೆಣ್ಣದು ಚಿನ್ನವ ಬಿಡುವಳೆ ಏನು?
ಮೀನನು ಕಂಡಿಹ ಮಾರ್ಜಾಲವೇನು?
ಆಸೆಯು ಪುಟಿಯಿತು ಬೆಕ್ಕಿಗೆ ಹೇಳಿತು
“ಚಾಚುತ ಕೈಯಾ ಬಾಗುತಲೆತ್ತು”

ಹೂಜಿಯ ಆಳವನರಿಯದ ಬೆಕ್ಕು
ಯಮನ ಬಾಯಿಗೆ ಬಿದ್ದಿತು ಸಿಕ್ಕು
ಬೆಕ್ಕಿನ ಬದಿಯಲಿ ನಿಂತಿತು ವಿಧಿಯು
ಅಣಕವ ಬೀರಿತು ಬೆಕ್ಕಿನ ಬಿದಿಯು

ಮೀನನು ಹಿಡಿಯಲು ಬೆಕ್ಕುವು ಬಾಗಿತು
ತಲೆಕೆಳಗಾಯಿತು ಕಾಲದು ಜಾರಿತು
ನೀರಲಿ ಮುಳುಗುತ ಮತ್ತೆ ಮೇಲೇರುತ
'ಮಿಂಯಾವ್ ಮಿಂಯಾವ್ ' ರಾಗವ ಹಾಡಿತು

ಜಲದ ದೇವರನೆಲ್ಲರ ಕರೆಯಿತು
ಹೇಗೋ ಉಳಿಸಿ ಎನ್ನುತ ಮೊರೆಯಿತು
ಜಲಚರ ಕುಲಕೆ ಮೊರೆಯನು ಇಟ್ಟಿತು
ಕಾಪಾಡಿ ಬೇಗ ಎನ್ನುತಲತ್ತಿತು

ಜಲಚರ ಕಾಣೆ ದೇವತೆ ಕಾಣೆ
ಮೂರ್ಖಗೆ ಮಿತ್ರರ ನಾ ಕಾಣೆ
ಬರಲಿಲ್ಲ ಬೆಕ್ಕುವನುಳಿಸಲು ಯಾರು
ಆಸೆಬುರುಕಗೆ ಮಿತ್ರರು ಯಾರು?

ಕೇಳಿರಿ ಮಕ್ಕಳೆ ಈ ನನ್ನ ನುಡಿಯಾ
ಮರಳಿ ಬಾರದ ಕಾಲದ ಪರಿಯಾ
ಮುಂದಿಟ್ಟ ಹೆಜ್ಜೆಯು ಹಿಂದಕ್ಕೆ ಬಾರದು
ಮಿಂಚಿದ ಕಾರ್ಯವು ಚಿಂತಿಸೆ ಹರಿಯದು

ಎಚ್ಚರವಿರಲಿ ಮಕ್ಕಳೆ ನಿಮಗೆ
ಚಿತ್ತವ ಸೆಳೆವಾ ಬೆರಗಿನ ಮೋಡಿಗೆ
ಬೆಳ್ಳಗಿಹುದೆಲ್ಲ ಹಾಲಲ್ಲ;
ಹೊಳೆಯುವುದೆಲ್ಲ ಹೊನ್ನಲ್ಲ!

***

ಕಿರು ನಾಟಕ

ಒಂದು ಸಾವಿನ ಸುತ್ತ

– ರೇಣುಕಾ ದೇಸಾಯಿ

ದೃಶ್ಯ: ಹಳ್ಳಿಯ ಮಧ್ಯದಲ್ಲಿರುವ ವಿಶಾಲವಾದ ಅರಳಿ ಮರ. ಭಾರತ ದೇಶದ ಅವಿಭಾಜ್ಯ ಅಂಗದಂತೆ ಅದಕ್ಕೊಂದು ಕಟ್ಟೆ. ಅರಳಿಕಟ್ಟೆಯ ಮೇಲೆ ಒಬ್ಬ ವಯಸ್ಸಾದ, ಕೃಶಕಾಯದ ವ್ಯಕ್ತಿ ಕುಳಿತಿದ್ದಾರೆ ತಮ್ಮ ಅಂಗಿಯನ್ನು ಬಿಚ್ಚಿ ಬಿಸಿಲಿನ ಬೇಗೆಯನ್ನು ನಿವಾರಿಸಿಕೊಳ್ಳಲು ತಮ್ಮ ಅಂಗಿಯಿಂದಲೇ ಗಾಳಿ ಹಾಕುತ್ತಾ, ವಿಶಾಲವಾಗಿ ಹರಡಿರುವ ಅರಳಿ ಮರವನ್ನು ವೀಕ್ಷಿಸುತ್ತಾ ತಮ್ಮಲ್ಲೇ ಗೊಣಗಿಕೊಳ್ಳುತ್ತಿದ್ದಾರೆ "ಈ ಎಲೆಗಳು ಯಾಕ ನಿಂತಗೊಂಡವಾ? ಒಂದಷ್ಟೂ ಗಾಳಿಯಿಲ್ಲ" ಎನ್ನುವ ಕಿರಿಕಿರಿ ಅವರಿಗೆ.

ಅದೇ ಸಮಯಕ್ಕೆ ಆ ಊರಿನ ಯುವಕ ನಾಗರಾಜ್ ಬೆಂಗಳೂರಿನಿಂದ ಹಳ್ಳಿಗೆ ಬಸ್ಸಿನಲ್ಲಿ ಬಂದು ಆ ಅರಳಿಕಟ್ಟೆಯ ಎದುರು ಬದಿಯಲ್ಲೇ ತನ್ನ ಮನೆಯತ್ತ ನಡೆದು ಹೋಗುತ್ತಿದ್ದಾನೆ.

"ಏನಪ್ಪಾ, ನಾಗರಾಜಾ ಬೆಂಗಳೂರಿಂದ ಬಂದ್ಯಾ? ಯಾಕೆ? ಮೋಟಾರ್‌ಬೈಕ್ ಮೇಲೆ ಬರ್ತಾಯಿದ್ದೆ, ಬಸ್ನಲ್ ಬಂದಿದಿಯಾ?."

"ಇಲ್ಲಾ, ಗಾಡಿ ಕೆಟ್ಟಿತ್ತು, ನನ್ತಾವ ಹಣ ಇಲ್ರಿ ಅದ್ನ ಸರಿ ಮಾಡ್ಲಾಕ. ಅದಕ್ಕ ಬಸ್ಸಿಗೆ ಬಂದೆ."

"ಊರ್ ಜಾತ್ರೆಗೆ ನಾಟಕ ತಾಲೀಮಿಗೆ ಬಂದ್ಯಾ?"

"ಹೌದು, ಎಲ್ಲಿದ್ದರೂ ಮನ ನಿಲ್ಲಾಕಿಲ .... ಆಡಲೇಬೇಕು"

"ಏನಪ್ಪಾ, ಬೆಂಗಳೂರು ಸುದ್ದಿ?"

"ಅದೇನ್ ದೊಡ್ಡ ಊರು, ಏನಾದ್ರೂ ನಡಿತಾ ಇರ್ತದೆ, ನಮ್ ಪಾಡು ನಮಗೆ"

"ಅದು ನಿಜಾಕಣಣ್ಣಾ, ಆದರೆ ನಮ್ಮ ಹಳ್ಳಿಯಲ್ನೋಡು, ಏನ್ ಒಂದ್ ವಿಷ್ಯಾನು ಎಲ್ಲರಿಗೂ ಸಂಬಂಧಪಟ್ಟಿದ್ದು."

"ಅದೇನಂತ ಆಯ್ತು, ಯಜಮಾನ್ರೆ?"

"ಹಂಗಾರ ನಿಂಗೊತ್ತಿಲ್ಲಾನ್ನು, ನಮ್ ಗೌಡ್ರು ಹೋದ್ರಪ್ಪಾ!!"

"ಅಯ್ಯೋ!! ಗೌಡ್ರು ಸತ್ರಾ?!!!"

"ಏನಾಗಿತ್ತು? ಸಾಯ ವಯಸ್ಸಾ? ಕೇವಲ 48 ವರ್ಷ!"

"ಅವರ ಮನೆಯಲ್ಲೇ ಸಾಕಿದ್ದ ನಾಯಿಯ ಪುಟ್ಟ ಮರಿ ಕಚ್ಚಿತ್ತಂತೆ, ಮೂರು ತಿಂಗಳ ಹಿಂದೆ"

"ಸಾಕು ನಾಯಿ ಅದು, ಪುಟ್ಟ ಮರಿ, ಅದರಿಂದ ಸಾವಾಗಿರಲಿಕ್ಕಿಲ್ಲ"

"ಮರಿ ಅಂತಾ ಅಲಕ್ಷ ಮಾಡಬಾರದು ಕಣಣ್ಣಾ, ನಾಯಿ ನಾಯಿನೇ, ಅದಕ್ಕೆ ಕ್ರಮಬದ್ಧವಾಗಿ ಸರಿಯಾದ ಇಂಜೆಕ್ಷನ್ ತೆಗೆದುಕೊಳ್ಳಬೇಕಾಗಿತ್ತು, ಇಲ್ಲಾಂದ್ರೆ ನಂಜಾಗುತ್ತೆ. ನೋಡು ಈಗ ಸತ್ತೇಹೋದ್ರು."

"ನಾಯಿ ಕಚ್ಚಿದಾಗ ಆಸ್ಪತ್ರೆಗೆ ಹೋಗಣಾ, ಸರಿಯಾದ ಮದ್ದು ತಗಳಾಣ ಅಂತಾ ಮನೆಯವರು, ಸಂಬಂಧಿಗಳು, ಗೆಳೆಯರು ಹೇಳಿದ್ರೆ ಕೇಳ್ಳೆ ಇಲ್ಲವಂತೆ."

"ನಾನು ಗಟ್ಟಿಮುಟ್ಟಿನ ಮನುಷ್ಯಾ, ನಂಗೇನ ಆಗಾಕಿಲ್ಲ ಅಂದ್ರಂತೆ."

"ಹೌದ್ ಬಿಡ್ರಪ್ಪಾ, ನಮ್ಮ ಗೌಡ್ರು 48 ವರ್ಷದ ತರುಣ, ಆರೋಗ್ಯವಂತ. ತಿಂಗಳಾನುಗಟ್ಟಲೇ ನೀರಾಗೆ ನೆನೆಯಿಟ್ರೂ ಏನೂ ಆಗದಂತ ಆರೋಗ್ಯ."

"ಹೇ! ನಿನಗೆ ಗೊತ್ತಿಲ್ವಾ? ಅವರಿಗೆ ಈಗ ಒಂದಾರ ತಿಂಗ್ಳಿಂದ ಮನದಾಗ ಒಂದ್ ಚಿಂತೆ ಇತ್ತಂತೆ ಕಣಣ್ಣಾ. ಚಿಂತೆ ಮನುಷ್ಯಾನ್ ಚಿತೆಗೆ ಏರಿಸಿಬಿಡ್ತು ನೋಡು."

"ನಾಯಿ ಕಡ್ದು ಸತ್ತರು ಅಂದ್ರೆ ನೀನು ಚಿಂತೆ ಚಿತೆಗೇರಿಸ್ತು ಅಂತಿಯಲ್ಲಾ?"

"ಇರ್ಲಿ ಬಿಡ್ರಪ್ಪಾ, ಆಯುಷ್ಯ ತುಂಬಿ ಬಂದ್ರ ಕಡ್ಡಿನೆ ಗುಡ್ಡಾಗಿ, ಸಾವಿಗೆ ನೆಪ ಆಗತ್ತೈತೆ, ಸುಳ್ಳಲ್ಲಾ."

"ಜೀವ್ನಾನೇ ಹಾಗೆ, ಇಂದು ನಡೆದ ಒಂದು ಸಣ್ಣ ವಿಷ್ಯಾ, ಮುಂದಿನ ದಿನ್ಗಳಲ್ಲಿ ಒಂದ್ ದೊಡ್ಡ ಕಾರಣ್ವಾಗಿ ಇನ್ನೇನೋ ಆಗತ್ತೈತೆ."

"ಅದಕ್ಕೆ ಕೃಷ್ಣ ಪರಮಾತ್ಮ ಗೀತೆಯಲ್ಲಿ ಹೇಳಿದ್ದು, ಎಲ್ಲದಕ್ಕೂ ಕಾರಣ ನಾನೇ, ನೀನು ನಿಮಿತ್ತ ಮಾತ್ರ. ಹೀಗಾಗಿ ಯಾವುದಕ್ಕೂ ತಲೆ ಕೆಡಿಸಿಕೊಳ್ಳದೇ ನಿನ್ನ ಕರ್ಮ ನೀನು ಮಾಡು ಅಂತಾ."

"ನಿನಗೆ ಗೊತ್ತಾ?, ಆರ್ ತಿಂಗ್ಳಿಂದಾ ಗೌಡ್ರು ಹೊರಕ್ಕೆ ಬಂದಿರ್ಲಿಲ್ಲವಂತೆ. ಮನೆಯಲ್ಲೇ ಮೂರು ಹೊತ್ತು ಕುಡಿದ್ಕೊಂಡು ಊಟಾನು ಮಾಡ್ದೆ ಮಲಗಿರುತ್ತಿದ್ದರಂತೆ."

"ಹೌದಪ್ಪಾ, ಆರು ತಿಂಗಳ ಹಿಂದೆ ಅವರ ಮಗಳು ಅದ್ಯಾರೋ ಬೇರೆ ಜಾತಿಯವ್ನನ್ನ ಪ್ರೀತಿಸಿ ಮದುವೆಯಾಗಿ ಹೋಗಿರುವ್ಳಂತೆ."

"ಏ! ಬಿಡೋ, ಬೇರೆ ಜಾತಿ ಆದ್ರೆನಾಯ್ತು? ನಮ್ಮ ಧರ್ಮದವನೆ, ಅನ್ಯ ಧರ್ಮದವನಲ್ಲವಲ್ಲ ಆತಂಕನೂ ಇಲ್ಲ"

"ಹುಡುಗ ಬೆಂಗಳೂರಿನಲ್ಲಿ ಒಳ್ಳೆ ನೌಕರಿಯಲ್ಲಿದ್ದಾನಂತೆ, ಕೈ ತುಂಬಾ ಸಂಬಳ. ಇಬ್ರು ಸುಖವಾಗಿದ್ದಾರಂತೆ"

"ಹಾಗಲ್ಲಪ್ಪಾ, ನಮ್ ಗೌಡ್ರಿಗೆ ತಮ್ಮದು ದೊಡ್ಡ ಮನೆತನ, ತಲೆತಲಾಂತರದಿಂದ ಈ ಊರ ಗೌಡಕಿ ಮಾಡಿಕೊಂಡು ಬಂದೌರು, ಯಾವಾಗ್ಲೂ ಊರ ಪಂಚಾಯಿತಿ ಚೇರ್ಮನ್ ಅವರ ಮನೆಯವರೇ"

"ಆದ್ರೆನಂತೆ?"

"ಬೇಕಾದಷ್ಟು ಸಂಪತ್ತು, ಹೊಲ, ಗದ್ದೆ, ತೋಟವೈತೆ. ಶ್ರೀಮಂತ ಮನೆತನ, ದುಡ್ಡು ಕೊಳತಾ ಬಿದ್ದಿದೆ ಅಂತಾರಲ್ಲ ಹಾಗೆ"

"ಅದಕೆ, ನಮ್ಮ ಗೌಡ್ರು ಧೂಂ, ಧಾಂ ಅಂತಾ ಅದ್ದೂರಿ ಮದುವೆ ಮಾಡ್ಬೇಕು, ತಮ್ಮ ಅಂತಸ್ತಿಗೆ ತಕ್ಕ ಕುಟುಂಬವನ್ನು ಹುಡುಕಿ ಮಗಳ ಮದುವೆ ಮಾಡ್ಬೇಕು ಅಂದುಕೊಂಡವರಿಗೆ ಈ ಮಕ್ಕಳು ಮಾಡುವ ಈ ತಪ್ಪುಗಳು ಆಘಾತ ಕೊಡೋದು ನಿಜಾನೇನೆ!!"

"ಅಂದ್ರೆ ಗೌಡ್ರ ಸಾವಿಗೆ ಅವರ ಮಗಳು ಮಾಡಿಕೊಂಡ ಮದುವೆನೇ ಕಾರಣ್ವಾ?"

"ಇಲ್ಲ... ... ಇಲ್ಲ... ..., ನಾಯಿ ಕಡದಿದ್ದಕ್ಕೆ, ನಂಜು ನಿವಾರಣೆ ಆರೈಕೆ ಮಾಡಿಕೊಳ್ಳಲಿಲ್ಲಾಂತ."

"ಗೌಡ್ರ ಸಾವಿನ ಸುದ್ದಿ ಕೇಳಿದ ತಕ್ಷಣ ಆ ಬೀದಿಯ ಕೊನೆಯ ಮನೆಯ ಶಂಕ್ರಜ್ಜಾ, ಹಾಂ! ಗೌಡ್ರು ಸತ್ರಾ!! ಅಂದು ಪ್ರಾಣಾನೇ ಬಿಟ್ನಂತೆ."

"ಹೌದಾ!!?"

"ಹೂಂ ಮತ್ತೆ!! ನೀವುಗಳು ಶಾಲೆ, ಕಾಲೇಜು ಅಂತಾ ಊರಬಿಟ್ಟು ಹೊರಗೆ ಇದ್ರೆ, ಊರ ವಿಷ್ಯಾ ಹೇಂಗ ಗೊತ್ತಾದೀತು ನಿಮ್ಮಂತ ಹೈಕುಳಗಳಗೆ."

"ಗೌಡ್ರು ಭಾಳಾ ಒಳ್ಳೆ ಮನುಷ್ಯ. ಊರಿಗೆ ಊರೇ ಹೊಗಳ್ತತ್ತು, ಯಾರಿಗೆ ಏನೇ ಸಹಾಯ ಬೇಕೂಂದ್ರೆ ಆ ಸಹಾಯ ಮಾಡುವ ಕುಬೇರ. ಊರಿನೊಟ್ಟಿನ ಕೆಲಸಕ್ಕೆ ತನು, ಮನ, ಧನ ಸಹಾಯ ಮಾಡುವ ದೊಡ್ಡ ಮನಸ್ಸು! ದೊಡ್ಡ ಮನುಷ್ಯ!"

"ಮಗಾ ಇನ್ನೂ ಚಿಕ್ಕೋನು, ಚಿಕ್ ವಯಸ್ಸಿನ ಹೆಂಡ್ತಿ. ಇನ್ಮುಂದೆ ಈ ಹಳ್ಳಿ ಗತಿ ಏನಪ್ಪಾ ಅಂತ ಚಿಂತೆ ಆಗೈತ್ ನೋಡು."

“ಯಾವಾರ ದೌಲತ್ನ ಮಂದಿ ಹತ್ರ ಹಳ್ಳ ಹಿರೇತನ ಸಿಕ್ರೆ ಹಳ್ಳಗೆ ಹಳ್ಳನೇ ಕುಲ್ಗೆಟ್ ಹೋಗ್ತದೆ.”

“ಈಗಿನ ಕಾಲ್ದಾಗ ಇಂತಹ ಧರ್ಮರಾಯನಂತ ಮನುಷ್ಯಾ ಸಿಗಂಗಿಲ್ಲ ಬಿಡು.”

“ಒಟ್ನಲ್ಲಿ ಮಗಳ ಮದುವೆ ಗೌಡ್ರಿಗೆ ಮೃತ್ಯು ತಂತು.”

“ನಾಯಿಮರಿ ಕಚ್ಚಿದ್ದು ಒಂದು ಕಾರಣ ಆಯ್ತು ಅನ್ಸೋದಿಲ್ವಾ??”

“ಸಾವಿಗೊಂದು ಕಾರಣ ಬೇಕ್ ನೋಡು. ಆಯುಷ್ಯ ತುಂಬಿದ ಮ್ಯಾಲ ಮನುಷ್ಯ ಒಂದು ಕ್ಷಣ ಇರಕಾಗಲ್ಲ. ಭೂಮಿ ಋಣ ತೀರಿದ್ರ ಯಾರಿಗೂ ಹಿಡಿದಿಟ್ಟುಕೊಳ್ಳಾಕಾಗಲ್ಲ.”

“ತಂದೆ ಮುಖ ಕೊನೆ ಬಾರಿಗೆ ನೋಡಾಕ ಬಂದ ಮಗಳನ್ನ ಜನ ತಡೆದರಂತೆ”

“ಮನುಷ್ಯ ಸಮಾಜದ ವಿಕೃತ ಮನಸುಗಳ ವಿಚಾರವೇ ಹೀಗೆ.”

“ಗೌಡ್ರ ಸಾವಿನಲ್ಲಿ ಮಗಳನ್ನ ಕಂಡ ಜನ, ನಾಯಿಯನ್ನು ಯಾಕೆ ಮರತ್ರು?”

“ಗೊಂಬೆ ಆಡ್ಸೋನು ಮೇಲೆ ಕುಂತವ್ನೆ, ನಮಗೆ ನಿಮಗೆ ಯಾಕೆ ಟೆಂಷನ್ನು ...,”

ನಾಟಕದ ಮನುಷ್ಯ ನಾಗರಾಜ್ ನಾಟ್ಕದ ಪದ ಹೇಳಕಂತ ಹೊಂಟೆ ಹೋದಾ.

***

ನಭೋಮಂಡಲದ ಧ್ರುವತಾರೆ–ಡಿವಿಜಿ

– ಸಿ.ಆರ್. ಕಮಲಾಕ್ಷಿ

ಕನ್ನಡ ನಾಡಿನ ಹಿರಿಮೆಯ ಪುತ್ರರು
ಹೊನ್ನಿನ ಗುಣವ ಪಡೆದವರು
ಕನ್ನಡ ಬರಹದಿ ಜನಮನ ಸೆಳೆಯುತ
ಮನ್ನಣೆ ಪಡೆದ ಗುಣದವರು

ದೇವನಹಳ್ಳಿಯ ತಾಣದಲ್ಲಿ
ಅಲಮೇಲಮ್ಮ ವೆಂಕಟರಮಣಯ್ಯನವರ
ಪುತ್ರರತ್ನವಾಗಿ ಜನಿಸಿದ ಗುಂಡಪ್ಪನವರು
ಡಿವಿ ಗುಂಡಪ್ಪ ಡಿವಿಜಿಯಾದರು

ನುಡಿದಂತೆ ನಡೆದು ಜೀವನ ಸಾಗಿಸಿ
ಕಲಿಕೆಯ ಲೆಕ್ಕ ತಪ್ಪಾದರೇನು
ಬದುಕಿನ ಲೆಕ್ಕವ ಕಗ್ಗದಿ ಬರೆದರು
ವಿದ್ಯೆಗೂ ಮೀರಿದ ವಿವೇಚನೆ ತೋರಿದರು

ನೋವುಂಡವಗೆ ಸಾಂತ್ವನ ನೀಡುವ
ನಲಿಯುತ ಮರೆವನ ಎಚ್ಚರಗೊಳಿಸುವ
ಅರಿವಿನ ಕಗ್ಗಗಳ ರಸಧಾರೆ ಹರಿಸಿದರು
ಭಗವದ್ಗೀತೆ ಸಮಾನ ಮುಕ್ತಕ ಸೃಜಿಸಿದರು

ಶಿಲ್ಪಕನ್ನಿಕೆಯರು ಕಲ್ಪಿತ ಜೀವತಳೆದು
ಕೇಶವನೊಡನೆ ಅಂತಃಪುರಗೀತೆ ಹಾಡಲು
ರಸಮಯ ಸಂಗೀತ ಕಾವ್ಯ ಮೊಳಗುತ
ರಾಗ ತಾಳ ಲಯ ಸಾಹಿತ್ಯದಿ ಝೇಂಕರಿಸಿತು

ಸನಿಹದಿ ನೋಡಿದ ಕರುನಾಡ ರತ್ನಗಳ
ಹೃದಯ ಸಂಪನ್ನರ ನಾಡಿಗೆ ಪರಿಚಯಿಸುತ
ಜ್ಞಾಪಕ ಚಿತ್ರಶಾಲೆಯ ಸಂಪುಟಗಳಲಿ
ಕನ್ನಡ ಕುಸುಮಗಳ ಪರಿಮಳ ಬೀರಿದರು

ಸಾಹಿತ್ಯ, ಪತ್ರಿಕೆ, ಸಮಾಜ ಸೇವೆಯಲಿ
ಸರಳ ಜೀವನ ಉನ್ನತ ಚಿಂತನೆಗೈಯುತ
ದಾರ್ಶನಿಕರಾದ ಆಧುನಿಕ ಸರ್ವಜ್ಞರು
ವನಸುಮದಂತೆ ಕೃತಕೃತ್ಯತೆ ಪಡೆದವರು

ಸರಳತೆ ಜೀವನ ಸದ್ಗುಣ ಸಿರಿತನ
ಪರಧನ ಪಾಷಾಣ ಎಂದು ನಡೆದವರು
ಗೌರವಧನವನು ದಾನ ಮಾಡುತ
ಶ್ರೇಷ್ಠ ಪರಂಪರೆಗೆ ನಾಂದಿ ಹಾಡಿದರು

ಅರಸದೆ ಪ್ರಶಸ್ತಿ ಗೌರವಗಳನು
ಬರೆದರು ಹಲವು ಮೇರು ಕೃತಿಗಳನು
ಗೌರವ ಡಾಕ್ಟರೇಟ್ ಸಾಹಿತ್ಯ ಅಕಾಡೆಮಿ
ಪದ್ಮಭೂಷಣ ಪ್ರಶಸ್ತಿಗಳಲಿ ಪುರಸ್ಕೃತರು

ಕನ್ನಡ ಸಾಹಿತ್ಯದ ಮುಕುಟ ಮಣಿ
ಅದ್ವಿತೀಯ ಅಸಮಾನ್ಯ ಪ್ರತಿಭೆಯ ಗಣಿ
ನಭೋ ಮಂಡಲದ ಧೃವತಾರೆ ಡಿವಿಜಿ
ಹಚ್ಚಿದ ಅರಿವಿನ ಬೆಳಕು ಬೆಳಗಲಿ ಅನವರತ

***

ನಾನೂ, ನನ್ನ ಸಹಪಾಠಿ ಮಿತ್ರನೂ – ಲೇಖನ ಮಾಲೆ––11

ಬಾಂಧವ್ಯ (ಭಾಗ–1)

– ಮಾಧುರಿ ಕೃಷ್ಣ

ಆ ಇಬ್ಬರೂ ಹೆಣ್ಣುಮಕ್ಕಳು ಫೋನಿನಲ್ಲೇ ಗೋಗರೆಯುತ್ತಿದ್ದರು. "ಆಂಟೀ, ಬನ್ನಿ ಆಂಟೀ, ಪ್ಲೀಸ್ ಪ್ಲೀಸ್. ನೀವು ಒಮ್ಮೆ ಬಂದು ಮಾತನಾಡಿದರಾದರೂ ಅವರು ಚೇತರಿಸಿಕೊಳ್ಳಬಹುದು" ಅವರಿಬ್ಬರೂ ಒಬ್ಬರ ಮೇಲೊಬ್ಬರು ಅತೀ ದೈನ್ಯವಾಗಿ ಮಾತಾಡುತಿದ್ದರು,

ಇಲ್ಲಿಂದಲ್ಲಿಗೆ ದೂರವೇನಾದರೂ ಕಮ್ಮಿನೇ? 380ರಿಂದ ಬರೋಬ್ಬರಿ 400 ಕಿಲೋಮೀಟರ್– ನಿಂತ ನಿಲುವಿನಲ್ಲಿ ಹೊರಡುವುದಾದರೂ ಹೇಗೇ? ವಾರ ಅದೀಗ ಆರಂಭವಾಗಿತ್ತಷ್ಟೇ! ಮಗನನ್ನು ಏನೆಂದು ಕೇಳುವುದು! ಅವರಿಬ್ಬರ ಪ್ರಲಾಪ ಮುಂದುವರಿದುಕೊಂಡೇ ಇತ್ತು. ಅದು ಪ್ರಲಾಪವೋ, ಆರ್ತನಾದವೋ!! ಮನಸ್ಸಂತೂ ಗಾಯ ಗೊಂಡಾಗಿತ್ತು. ಕೊನೆಗೂ ಮಗನಿಗೆ ಫೋನ್ ಮಾಡಿಯೇಬಿಟ್ಟೆ.

"ಓಹ್! ಹೌದೇನು?" ಕ್ಷಣಕಾಲ ಅವನು ಮೌನವಾದ. "ಪ್ರಯತ್ನಿಸುತ್ತೇನೆ. ವಾರದ ಮಧ್ಯದ ದಿನ, ರಜೆ ಸಿಗುವುದು ಕಷ್ಟವೇ! ಯಾವುದಕ್ಕೂ ಬ್ಯಾಗ್ ಪ್ಯಾಕ್ ಮಾಡಿಕೊಂಡಿರು. ಅರ್ಲಿ ಮಾರ್ನಿಂಗ್ ಎರಡು ಗಂಟೆಗೆ ಸರಿಯಾಗಿ ಹೊರಟರೆ ಹನ್ನೆರಡಕ್ಕೆಲ್ಲ ಅಲ್ಲಿರಬಹುದು. ಮತ್ತೆ ಮರುದಿನ ಎರಡು ಗಂಟೆಗೇ ತಿರುಗಿ ಹೊರಟು, ಇಲ್ಲಿಗೆ ಬರಲೇ ಬೇಕು. ನಿನ್ನದೇ ಚಿಂತೆ ನನಗೆ, ನಿನಗೂ ವಯಸ್ಸಾಗಿದೆ.. ಏನು ಅರ್ಥವಾಯಿತೇ?" ಎಂದ ಮಗ, ತನಗಾಗುವ ತೊಂದರೆಯ ಲೆಕ್ಕವೇ ಇಲ್ಲದವನಂತೆ.

ಅರ್ಥವಾಗದೇ ಏನು! ಚೆನ್ನಾಗೇ ತಿಳಿದಿತ್ತು. ಬದುಕಿಡೀ ಘಾಟಿ ಹತ್ತೀ ಇಳಿದು ಪ್ರಯಾಣ ಸಾಗಿಸಿಯೇ ಬಂದ ನಮ್ಮಂಥವರಿಗೆ ಇದನ್ನು ಯಾರೂ ಹೇಳಿಕೊಡಬೇಕಾಗೇ ಇರಲಿಲ್ಲ!

ಅಂತೂ ಹೋಗಿಯೇ ಬಿಟ್ಟೆ ಆ ದೊಡ್ಡ ಗಾಡಿಯಲ್ಲಿ, ಉರುಳುರುಳಿಕೊಂಡು! ಹೋದ ತಕ್ಷಣ ಫ್ರೆಶ್ ಅಪ್ ಆಗಿ 'ಪಾರಿಜಾತ'ದಲ್ಲಿ ಊಟ ಮುಗಿಸಿ ಸರೀ ನಾಲ್ಕು ಗಂಟೆಗೆ ಮಿತ್ರನ ಮನೆಯೆದುರು ಕೆಳಗಿಳಿದಿದ್ದೆ.

"ಅಮ್ಮ, ಮಾವಂದಿರ ಮನೆಗಳೆಲ್ಲ ಈ ಬಾರಿ ಇಲ್ಲ, ನಾಳೆ ಮುಂಜಾನೆ ಎರಡು ಗಂಟೆಗೆ ಹೊರಡುವುದು ಜ್ಞಾಪಕದಲ್ಲಿರಲಿ" ಎಂದು ಮಗ ಕಾರು ಚಲಾಯಿಸಿಬಿಟ್ಟ. ರಸ್ತೆಯಿಂದ ಕೆಳಗಿಳಿದು ಬಂದು ಮಿತ್ರನ ಮನೆಯ ಗೇಟು ತಲುಪಿದೆ. ಅದೆಲ್ಲಿದ್ದಳೋ, ಅವನ ಒಬ್ಬ ಮಗಳು ಓಡಿ ಬಂದು ಚಿಲುಕ ತೆಗೆದು "ಬನ್ನಿ ಆಂಟೀ" ಎಂದಳು. ನನ್ನನ್ನು ನೋಡಿ ಅವಳ ಮುಖ ಊರಗಲ ಅರಳಿತು.

ಮುಂಬಾಗಿಲಿನಲ್ಲಿ ಮಿತ್ರನ ಮೊಮ್ಮಗ ನಿಂತಿದ್ದ. ಒಳಹೋಗುತ್ತಿದ್ದಂತೆ ಮನಸ್ಸಿಗನಿಸಿತು, 'ನನ್ನಿಂದ ಇಷ್ಟಾದರೂ ಉಪಕಾರವಾಗುವಂತಿದ್ದರೆ ಈವೊಂದು ಬಾರಿಯಲ್ಲ, ಇನ್ನೂ ಹತ್ತು ಬಾರಿ ಬೇಕಾದರೂ ಬರಬಲ್ಲೆ!'

ಆದರೆ ಒಳಗೆ ಹೆಜ್ಜೆಯಿಡುವಾಗಲೇ ಅನಿಸಿತು– ಮನೆ ಎಂದಿನಂತಿಲ್ಲ! ಗಟ್ಟಿ ಮರದ ಕುರ್ಚಿಯಲ್ಲಿ ಬಿಳಿ ಬಣ್ಣದ ತುಂಬು ತೋಳಿನ ಶರ್ಟ್ ಧರಿಸಿದ ಆರಡಿ ಎತ್ತರದ ನನ್ನ ಸಹಪಾಠಿಯೂ ಯಾವಾಗಿನಂತೆ ಕುಳಿತಿರಲಿಲ್ಲ.. ಅವನ ಪಕ್ಕದ ದಿವಾನ್ ಕೂಡ ಖಾಲಿಯೇ.. .ಅರಸಿ ಹೊರಟ ಕಣ್ಣುಗಳಿಗೆ ತೆರೆದಿದ್ದ ಬಾಗಿಲೊಂದು ಕಾಣಿಸಿತು. ಸುಮಾರು ದೊಡ್ಡದೇ ಆದ ಕೋಣೆ... ಕೋಣೆಯ ಮಧ್ಯದಲ್ಲಿದೆ ಮಂಚ.. ಮಂಚದ ಮೇಲೊಬ್ಬ ಹೊದ್ದು ಮಲಗಿದ ವ್ಯಕ್ತಿ. ಪಕ್ಕದಲ್ಲೇ ಇದ್ದ ಮಿತ್ರನ ಇನ್ನೊಬ್ಬ ಮಗಳು "ಬನ್ನಿ ಆಂಟೀ.." ಎನ್ನುತ್ತ ಬಾಗಿ ಹೇಳಿದಳು, " ಅಪ್ಪ, ನಿಮ್ಮ ಕ್ಲಾಸ್ಮೇಟ್ ಆಂಟಿ ಬಂದಿದ್ದಾರೆ".

ಮಲಗಿದ್ದವನಿಂದ ಯಾವ ಚಲನೆಯೂ ಕಂಡುಬರಲಿಲ್ಲ ಎಂದು ಅದನ್ನೇ ಇನ್ನೊಮ್ಮೆ ತುಸು ಗಟ್ಟಿಯಾಗಿ ಇನ್ನೊಮ್ಮೆ ಹೇಳಿದಳು. ನನ್ನನ್ನು ಬಾಗಿಲಿಗೆ ಕರೆತಂದವಳ ಸೂಚನೆ ಮೇರೆಗೆ ಸೀದಾ ಒಳ ಹೋದೆ ನಾನು. ಅಲ್ಲೇ ಗೋಡೆಗೆ ಅಡ್ಡ ಹಾಕಿದ ಇನ್ನೊಂದು ಮಂಚದ ಮೇಲೆ ಮಿತ್ರನ ಮಡದಿ ಕುಳಿತಿದ್ದುದೂ ಕಣ್ಣಿಗೆ ಬಿತ್ತು. ಎರಡನೇ ಬಾರಿ ಮಗಳು ಹೇಳಿದ್ದನ್ನು ಕೇಳಿಸಿಕೊಂಡ ಮಿತ್ರನಲ್ಲಿ ಸ್ವಲ್ಪ ಚಲನೆ ಕಾಣಿಸಿದಂತಾಯ್ತು. ಮುಖವನ್ನು ಹೊರಳಿಸಲೆತ್ತಿಸುತ್ತ "ಯಾರು?" ಎಂದ ಕ್ಷೀಣವಾಗಿ.

ಮೊದಲಿನವಳು ಒಳಗೆ ಹೋಗಿ ಅಪ್ಪನ ಹೊದಿಕೆ ತೆಗೆದು "ಅಪ್ಪ, ಏಳಿ, ಕುಳಿತುಕೊಳ್ಳಿ, ಆಂಟೀನೇ ಬಂದಿರೋದು, ನೋಡಿ" ಎಂದು ಕಂಕುಳಿಗೆ ಕೈ ಹಾಕಿದಳು. ಇಬ್ಬರೂ ಸೇರಿ ಅಪ್ಪನನ್ನು ಪೇರಿಸಿಟ್ಟ ದಿಂಬುಗಳಿಗೆ ಒರಗಿಸುವ ಸಾಹಸಮಾಡಿದರು. ನಾನೂ ಮುಂದೆ ಸರಿದೆ.

"ಬಂದೆಯಾ .." ಮಿತ್ರ ಮಾತಾಡಿದ.

"ಇದೀಗಷ್ಟೇ ಬಂದೆ, ಇದ್ಯಾಕೆ ಹೀಗಿದ್ದೀ.... ಏನಾಯ್ತು ನಿಂಗೆ?" ಆಕ್ಷೇಪಿಸಿದೆ ನಾನು. ಮಿತ್ರನ ದೃಷ್ಟಿ ಎದುರಿನ ಗೋಡೆ ಕಡೆಗೆ ಹೋಯಿತು. ಅಲ್ಲಿತ್ತೊಂದು ಭಾವಚಿತ್ರ. ಓರಣವಾಗಿ ಕ್ರಾಪ್ ತೆಗೆದು ಕಿರುಮೀಸೆಯಡಿಯಲ್ಲಿ ಕಿರು ನಗು ಬೀರುತ್ತಿರುವ ಟೈ ಕಟ್ಟಿಕೊಂಡಿದ್ದ ಯುವಕನ ಭಾವಚಿತ್ರ! ನನ್ನ ದೃಷ್ಟಿಯೂ ಅದರೆಡೆ ಹೋಗಿದ್ದು ನೋಡಿ, ಮೆಲ್ಲನೆ ನಡುಗುವ ದನಿಯಲ್ಲಿ "ಅವನು ನನ್ನ ಭಾವ... ಅಕ್ಕ ನ ಗಂಡ.. ತೀರ್ಕೊಂಡ "

ನಾನೀಗ ಕಠಿಣಳಾದೆ. "ತೀರ್ಕೊಂಡ್ರೇ... ಎಲ್ಲರೂ ಒಂದಿನ ಹೋಗಲೇಬೇಕಲ್ಲ... .ಯಾರು ಶಾಶ್ವತ ಇಲ್ಲಿ..., ನಾನು.. ನೀನು.. ಎಲ್ಲಾರೂ... .ನಮಗೇನು ಚಿಕ್ಕ ವಯಸ್ಸೇ... ಎಪ್ಪತ್ತು ದಾಟಿದವರಲ್ಲವೇ.." ನನ್ನ ಧ್ವನಿ ನನಗೇ ಅರಿವಾಗದಷ್ಟು ಅಪರಿಚಿತವಾಗಿ ಹೋಗಿತ್ತು.

ಮಗಳ ಕೈಗಳ ಆಸರೆಯಲ್ಲಿ ಒರಗಿದ್ದ ಮಿತ್ರ ನನ್ನ ಮಾತಿಗೆ ತಬ್ಬಿಬ್ಬಾದ.

"ಅದೂ....ಅದು ಅವನು..."

"ಏನದು ಬ್ಬೆ ಬ್ಬೆ ಬ್ಬೆ..? ಕಳೆದ ಸಾರಿ ನಾನು ಬಂದಾಗ, ಎಷ್ಟು ಚೆನ್ನಾಗಿ ಹಾಲ್‌ನಲ್ಲಿ ಕುಳಿತಿದ್ದೆ ನೀನು! ಈಗೇನಾಯ್ತು ನಿನಗೆ? ನನಗಿಲ್ಲಿ.... ಈ ರೂಮಿನ ಇಕ್ಕಟ್ಟಿನಲ್ಲಿ ನಿಂತಿರಲು ಕಷ್ಟವಾಗುತ್ತಿದೆ. ಬಾ ಹೊರಗೆ.. ಕುಳಿತು ಮಾತಾಡೋಣ.

ಮತ್ತೆ ಕರೆದೊಯ್ಯಲು ಮಗ ಬಂದುಬಿಡ್ತಾನೆ. .ಅದೇನೇನು ಮಾತಾಡಲು ಇದೆಯೋ ಎಲ್ಲಾ ಅಲ್ಲೇ ಕುಳಿತು ಮಾತಾಡೋಣ. ಹೂಂ, ಬೇಗ " ಎಂದು ಕೋಣೆಯಿಂದ ಹೊರಗೆ ಕಾಲಿಡುವ ಅವಸರ ತೋರಿಸೇಬಿಟ್ಟೆ.

ಈ ಬಾರಿ ಮಿತ್ರ ಮಾತ್ರವಲ್ಲ, ಅವನ ಮಕ್ಕಳಿಗೂ ಗಾಬರಿಯಾಯಿತೇನೋ. "ಆಂಟೀ.. ಆಂಟೀ" ಎಂದರು.

"ಅದೇನಿಲ್ಲ... ಅದೆಷ್ಟು ದಿನಗಳಿಂದ ಆ ಮಂಚದ ಮೇಲೇ ಅವನಿದ್ದಾನೋ, ಬರಲಿ ಒಮ್ಮೆ ಹೊರಗೆ! ನಾನಂತೂ ಅಲ್ಲೇ ಕುಳಿತುಕೊಳ್ಳೋದು!" ಒರಟಾಗಿ ಹೇಳಿದ್ದೂ ಅಲ್ಲದೇ ಸೀದಾ ಹೊರಗೆ ಬಂದು, ಸಿಂಗಲ್ ಸೀಟರ್ ಸೋಫಾದಲ್ಲಿ ಕಾಲ ಮೇಲೆ ಕಾಲು ಹಾಕಿ ಕುಳಿತೇಬಿಟ್ಟೆ.

ಆ ದೊಡ್ಡ ಮನೆ ಥಟ್ಟೆಂದು ಸ್ತಬ್ಧವಾಯಿತು. ಉಸಿರಾಡುವ ಸದ್ದೂ ನಿಂತಿದೆಯೇನೋ ಅನ್ನುವಷ್ಟೂ ನಿಶ್ಚಲವಾಯಿತು. ಘಳಿಗೆಗಳು ಜಾರುತ್ತಿದ್ದವು. ನನ್ನೊಳಗಿನ ಹೃದಯವೂ ಒಂದೊಂದೇ ಬಡಿತವನ್ನು ಕಳೆದುಕೊಳ್ಳುತ್ತ, ಇನ್ನೇನು ನಿಂತೇ ಬಿಟ್ಟಿತೇನೋ ಎಂದುಕೊಳ್ಳುವಷ್ಟರಲ್ಲಿ ಕೋಣೆಯ ಬಾಗಿಲಿಂದ ಹೊರಗೆ ವ್ಹೀಲ್ ಛೇರ್ ಹೊರಗೆ ಬಂತು. ಬಿಳಿ ಅಡ್ಡ ಮುಂಡು, ಬಿಳಿ ತುಂಬು ತೋಳಿನ ಶರ್ಟ್..., ಬಾಡಿ ಬಸವಳಿದಿದ್ದ ಮುಖದಲ್ಲೂ ಗಡಿಬಿಡಿ ಕಾಣಿಸುತಿತ್ತು.

ಕಣ್ಣುಗಳಲ್ಲಿ ಬೆಳಕು ಸ್ಫುರಿಸುತ್ತ, "ಆವತ್ತು ಕಾಲೇಜಿನ ದಿನಗಳಲ್ಲಿ ಹೇಗಿದ್ದೆಯೋ, ಇವತ್ತಿಗೂ ನೀನು ಅದೇ ಹಠಮಾರಿಯೇ! ಒಂದು ಚೂರೂ ಬದಲಾವಣೆಯಿಲ್ಲ, ಅದು ಹೇಗೆ ಪೂರಾ ಐವತ್ತು ವರ್ಷಗಳನ್ನು ಕಳೆದೆಯೋ ನನಗಂತೂ ಅಂದಾಜಿಸಲು ಆಗುತಿಲ್ಲ!" ವಟ ವಟಗುಟ್ಟುತಿತ್ತು ಮಿತ್ರನ ಬಾಯಿ.

ಅರೆಗಣ್ಣು ಮುಚ್ಚಿ ದೀರ್ಘ ಉಸಿರು ಎಳೆದುಕೊಂಡೆ. ಆ ಮೂರು ಪದವಿ ಕಾಲದ ವರ್ಷಗಳಲ್ಲಿ ಒಂದು ದಿನ ಬಾಯ್ಬಿಟ್ಟು ನಾವು ವಿದ್ಯಾರ್ಥಿಗಳಾಗಲೀ, ವಿದ್ಯಾರ್ಥಿನಿಯರಾಗಲೀ ಮಾತಾಡಿದವರು ನಾವಲ್ಲ. ಇಂದು ಹುಟ್ಟಿನಿಂದಲೂ ಒಟ್ಟಿಗೇ ಬೆಳೆದು ಬಂದವರಂತೆ ಒಬ್ಬರನ್ನೊಬ್ಬರು ಆಕ್ಷೇಪಿಸಿಕೊಳ್ಳುತಿದ್ದೇವೆ! ಬದುಕಿನ ಈ ಬಾಂಧವ್ಯ ಅದೆಷ್ಟು ವಿಚಿತ್ರವಾದು ದಲ್ಲವೇ! ಆ ವೈಚಿತ್ರ್ಯತೆ ಅವನೆರಡು ಹೆಣ್ಣುಮಕ್ಕಳ ಕಣ್ಣೆನಲ್ಲಿ ಕಾಣಿಸಿಕೊಂಡದ್ದೂ ಅಲ್ಲದೆ ಅವನ ಹಿಂದಿನಿಂದಲೇ ಬಾಗಿಲಲ್ಲಿ ಬಂದು ನಿಂತಿದ್ದ ಅವನ ಪತ್ನಿಯ ಮುಖದಲ್ಲೂ ಮೆಚ್ಚುಗೆಯಾಗಿ ಮೂಡಿಬಂತು.

'ತಡೆದು ನಿಂತ ಕಥಾ ಕಾರಣ'– ಮುಂದಿನ ದಾಸೋಹದಲ್ಲಿ .

***

ನೀರು ದಡ

– ಮಾಲತಿ ಶ್ರೀನಿವಾಸನ್

ನೀರು ದಡದ ಆಟ ತನು ಮನದ
ಒಮ್ಮತಕೆ ಬಾಲ್ಯದಲಿ ಕಲಿತಾ ಪಾಠ
ತನುಮನದ ಗತಿ ಲಯ ತಪ್ಪಿದರೆ
ಮಸ್ತಿಷ್ಕದಲಿ ಬರಿ ಗೊಂದಲದ ಪರದಾಟ

ಬಾಳ ಹಾದಿಯಲಿ ಬೇಕು ಬೇಡದ
ಆಸೆ ನಿರಾಸೆ, ಲಾಭ ನಷ್ಟದ, ಸೋಲು
ಗೆಲುವಿನ ದ್ವಂದ್ವ ನಿರಂತರ ಸೆಣೆಸಾಟ
ಇದು ಬಾಳಪಥದ ನೀರು ದಡದಾ ಆಟ

ಅಲ್ಲೊಮ್ಮೆ ಇಲ್ಲೊಮ್ಮೆ ಜಿಗಿಯುವ
ಮರ್ಕಟ ಮನದ ಚಂಚಲ ಚಪಲತೆಯ ದೊಂಬರಾಟ
ಹುಚ್ಚು ಮನ ಸ್ಫುರಿಸುವುದು ನೂರಾರು
ಭಾವನೆಗಳ, ಹುರುಳಿಲ್ಲದ ಚಿಂತನೆಗಳ ಮಹಾಪೂರ

ತಡೆಯಿಲ್ಲದೆ ಭೋರ್ಗರೆಯುತ
ಧುಮ್ಮಿಕ್ಕಿ ಸುರಿಯುವ ಜಲರಾಶಿಯಂತೆ,
ನಿಯಂತ್ರಣಕೆ ಸಿಗದ ಕುದುರೆಯಂತೆ.
ಹಿಡಿದೆಳೆದು ಅದ ನಿಲ್ಲಿಸೆ ಸಾಧನಗಳು
ಉಂಟಲ್ಲ ನನ್ನಲ್ಲಿ, ನಿನ್ನಲ್ಲಿ, ಎಲ್ಲರಲು
ಗುಪ್ತಗಾಮಿನಿಯಾಗಿ ಸುಪ್ತಚೇತನವಾಗಿ

ಸಾಧಕನಾಗು ನೀ ಮೌನದಲಿ ನೇಮ
ನಿಷ್ಠೆಯ ಮಾರ್ಗದಲಿ, ಇದ್ದು ಇಲ್ಲದನಂತೆ
ಅರಿತು ಅರಿಯದವನಂತೆ, ಸಾಗು
ನಿಶ್ಚಲತೆಯಲಿ ಗಮ್ಯದೆಡೆಗೆ

ನೀರೇನು ದಡವೇನು ಸುಸೂತ್ರವಾಗಿ
ಎಲ್ಲೆಡೆ ಸಾಗುವ ದ್ವಂದ್ವ ರಹಿತ, ಸಂತೃಪ್ತ
ಜೀವಕೆ. ಚಿತ್ತಶುದ್ಧಿ ಶಾಂತಿ ಸಮನ್ವತೆಯ
ಭಾವ, ಆನಂದದಲಿ ಒಪ್ಪಿ ಅಪ್ಪಿಕೊಂಡ ಮನಕೆ

***

ವಿಕಸನ

– ಮಾಲತಿ ಶ್ರೀನಿವಾಸನ್

ಇದು ಜೀವಶಾಸ್ತ್ರದ ಕಲೆಯೋ
ಜೀವನದ ಕಲೆಯೋ, ಅಣುರೇಣು
ತೃಣಕಾಷ್ಟದಲಿ ಅವನ ಇರವ
ತೋರಿಸುವ ಬರಿ ಆಧ್ಯಾತ್ಮವೋ?

ಆದಿ ಅಂತ್ಯ ಕಾಣದ ಬ್ರಹ್ಮಾಂಡದ
ವ್ಯವಹಾರ, ಜೀವ ರಾಶಿಯ ಉಗಮಸಾರ,
ವಿಜ್ಞಾನಿಗಳ ಚಿಂತಕರ ಎಡಬಿಡದ
ಹುಡುಕಾಟ, ನೂರಾರು ತತ್ವಗಳ
ಸಿದ್ಧಾಂತಗಳ ಅನಾವರಣ ಹೊಸ ವಿಚಾರ

ಶೂನ್ಯತೆಯ ಧೂಳಿನಿಂದ ಸಾವಿರಾರು
ಬೃಹತ್ ಬ್ರಹ್ಮಾಂಡಗಳ ಉಗಮ.
ಅನೂಹ್ಯ, ಅನುಪಮ ಅಗೋಚರ
ಸೃಷ್ಟಿ ಏಕತೆಯ ವೈವಿಧ್ಯತೆಯಲಿ ಮೆರೆದಾ ಕ್ಷಣ

ಕಣಕಣಗಳ ನಿರ್ಜೀವ ಧಾತುಗಳ
ಕೈ ಕೈ ಮಿಲಾಯಿಸಿ ನರ್ತನ, ಸಜೀವ
ಜೀವಕಣಗಳ ಉದ್ದೀಪನ, ನಿರ್ಜೀವದಿಂದ
ಸಜೀವವೊ ಸಜೀವದಿಂ ನಿರ್ಜೀವವೊ
ಸದಾ ಚಿಂತಕರ ಮನದಲ್ಲಿ ಮಂಥನ.

ಈ ಜೀವಕಣಗಳ ಉದ್ದೀಪನ ಆದದ್ದೆಲ್ಲಿ?
ಭುವಿಯಲ್ಲೋ ಆಗಸದಲ್ಲೋ,
ಮರಳುಗಾಡಿನ ಪದರುಗಳಲ್ಲೋ,
ಬಡಬಾಗ್ನಿ ಬೆಂಕಿ ಉಗುಳುವ ಅಗ್ನಿ ಪರ್ವತಗಳ
ತೊಪ್ಪಲಲ್ಲೊ? ಸಮೀಕರಿಸಿ ಎಲ್ಲೆಡೆಯಲ್ಲೋ?

ಸಸ್ಯ ಶ್ಯಾಮಲ ಹಸಿರು ರಾಶಿ ಮೊದಲೋ
ವೈವಿಧ್ಯಮಯ ಪ್ರಾಣಿ ಸಂಕುಲನವೋ,
ಏನಿದಿ ಪರಸ್ಪರ ನಿರ್ಭರತೆ, ವಿಕಸನಕ್ರಿಯೆಯ
ನಿಗೂಢತೆ, ವಿಜ್ಞಾನಿ ತತ್ವಜ್ಞಾನಿಗಳ ಸಮ್ಮಿಲನ
ಸೃಷ್ಟಿ ಸ್ಥಿತಿ ಲಯ ಪ್ರಕ್ರಿಯೆಯ ಸುಂದರ ಚಿತ್ರಣ.

***

ನಿಜಮಪ್ಪ ಸೌಂದರ್ಯ ಆತ್ಮಕ್ಕೆ ಸೇರ್ದುದು

– ಎಲ್. ಗಿರಿಜಾ ರಾಜ್

ಕುವೆಂಪು ಅವರ "ರಾಮಾಯಣ ದರ್ಶನಂ" ಒಂದು ಅಭೂತಪೂರ್ವ ಮಹಾಕಾವ್ಯ. ಮೂಲ ರಾಮಾಯಣದ ಅನೇಕ ಪಾತ್ರಗಳು ಕವಿಯ ದರ್ಶನ ದೃಷ್ಟಿಯಿಂದ, ಅವರ ಅನನ್ಯ ಪ್ರತಿಭಾ ಸ್ವೋಪಜ್ಞತೆಯಿಂದ ಮರುಹುಟ್ಟು ಪಡೆದಿವೆ. ಅಂಥ ಪಾತ್ರಗಳಲ್ಲಿ ಮಂಥರೆ ಯಪಾತ್ರ ಅಗ್ರಗಣ್ಯವಾದುದು.

ಮಂಥರೆಯ ಪಾತ್ರ ಚಿತ್ರಣದಲ್ಲಿ ಸೌಂದರ್ಯದ ಸತ್ಯಸ್ಯ ಸತ್ಯ ದೃಷ್ಟಿಯನ್ನೂ, ಅದರ ಬಹುಮುಖ ಅರ್ಥಗಳ ವ್ಯಾಖ್ಯಾನವನ್ನೂ ಅದ್ಭುತವಾಗಿ ಕಡೆದಿರಿಸಿದ್ದಾನೆ ಕವಿ.

ಹುಟ್ಟು ಕುರೂಪಿಯಾಗಿ, ಕಾಡಿನಲ್ಲಿ ಇರುವೆಗಳು ಮುತ್ತಿಕೊಂಡು ಕೇಳುವವರಿಲ್ಲದೆ ಅನಾಥವಾಗಿ ಬಿದ್ದಿದ್ದ ಶಿಶುವಿನ ರೋದನಕ್ಕೆ ಮರುಗಿ ಬೇಟೆಗಾಗಿ ಬಂದಿದ್ದ ಕೈಕೆಯ ತಂದೆ ಊರಿಗೆ ಅರಮನೆಗೆ ತಂದುದು, "ದಾರಿಯ ನಡೆ, ಮಾರಿಯ ಮನೆಗೆ ತರುವಂತೆ "ಮುಂದಣ ಮಹಾ ದುಃಖ ದಾವಾನಳಕೆ ಕಿಡಿಯ ಮುನ್ನುಡಿ" ರಚಿಸಿದಂತಾಗುತ್ತದೆ. ಕುರೂಪಕ್ಕೆ ಮನ್ನಣೆ ನೀಡದೆ ಇಡೀ ಪ್ರಪಂಚವೇ ಅವಳನ್ನು ತಿರಸ್ಕರಿಸಿದರೂ, ಅವಳ ಪ್ರೀತಿಯ ಸುಧೆಯನ್ನು ಶೈಶವದಿಂದ ಸವಿದ ಕೈಕೆ ಭರತರು ಅವಳ ಹೃದಯದಲ್ಲಿದ್ದ ಪ್ರೇಮಭಾವವನ್ನು ಎಚ್ಚರಿಸುತ್ತಾರೆ.

ಅವಳ ಪ್ರೇಮ, ಮಮತೆಗಳನ್ನೇ ಉಂಡಿದ್ದ ಕೈಕೆ, ಭರತರಿಗೆ ಎಂದೂ ಅವಳ ಕುರೂಪತೆ ಅಡ್ಡಿಯಾಗಿರಲಿಲ್ಲ. ರಾಮಾಯಣದ ಕತೆಗೆ ಮಹಾ ತಿರುವು ದೊರೆಯುವುದು ಈ ಪಾತ್ರದಿಂದಲೇ...! ತನ್ನ ಹೃದಯಕ್ಕೆ ಪ್ರೀತಿಯ ಸವಿ ಉಣಿಸಿದ ಭರತನಿಗೇ ರಾಜ್ಯ ಸಿಗಬೇಕೆಂದು ಮಮತೆಯ ಸುಳಿಯಲ್ಲಿ ಸಿಲುಕಿದ ಮಂಥರೆ ಕೈಕೆಯ ತಲೆ ಕೆಡಿಸುತ್ತಾಳೆ. "ಸೌಂದರ್ಯದಿಂದ ಎಲ್ಲವನ್ನೂ ಗೆಲ್ಲಬಹುದು ಮರುಳೆ" ಎಂದು ಪ್ರಚೋದಿಸುತ್ತಾಳೆ. ಇಲ್ಲಿ ಬಾಹ್ಯ ಸೌಂದರ್ಯದ ಉಲ್ಲೇಖ ಬರುತ್ತದೆ. ಮಂಥರೆಯ ದೀರ್ಘವಾದ ದುರ್ಬೋಧನೆಗೆ ಮರುಳಾದ ಕೈಕೆಯ ಮಾತಿನಲ್ಲಿ ಸೌಂದರ್ಯ ವ್ಯಾಖ್ಯಾನದ ಇನ್ನೊಂದು ಮಗ್ಗುಲನ್ನು ಗಮನಿಸಬಹುದು. ಕೈಕೆ ಮುಳುಗುತ್ತಿದ್ದವನಿಗೆ ಹುಲ್ಲುಕಡ್ಡಿಯ ಆಸರೆ ದೊರೆತಂತಾಗಿ, ಗೂನಿಯ ವಕ್ರಗಾತ್ರವನ್ನು ತಬ್ಬಿಕೊಂಡು "ಕಂಗೆಟ್ಟೆನಗೆ ದಾರಿ ತೋರ್ದೆಯಾ? ಓ ನನ್ನ ಭಾಗ್ಯ ದೇವತೆ, ಇಂದೆನಿತು ಚಾರುರೂಪಿಣಿಯಾಗಿ ತೋರುತಿಹೆ ನೀನೆನಗೆ, ಲೋಕದೊಳ್ ಹೊರಮ್ಮೆಯನೀಕ್ಷಿಸುತೆ ಸೊಬಗನಾರೈವವರ್ ಬರಿಯ ಬೆಪ್ಪುಗಳಲ್ತೆ, ನಿಜಮಪ್ಪ ಸೌಂದರ್ಯ ಅತ್ಮಕ್ಕೆ ಸೇರ್ದುದು, ಚಂದನದ ಕೊರಡು ಮುರುಟಿರ್ದರೇನು? ಊನಾಯ್ತೆ ಗಂಧಕ್ಕೆ?" ಎನ್ನುತ್ತಾಳೆ.

ಮುಂದೆ ರಾಮ ವನವಾಸಕ್ಕೆ ಹೊರಟ ನಂತರ ಅಗಲಿಕೆ ತಡೆಯದೆ ದಶರಥ ಮೃತನಾಗುತ್ತಾನೆ. ಆ ಸಂದರ್ಭದಲ್ಲಿ ಕೈಕೆಯ ತಂದೆಯ ಮನೆಗೆ ಹೋಗಿದ್ದ ಭರತ ಶತ್ರುಘ್ನರು ಹಿಂದಿರುಗಿ, ಮಸಣದಂತಿದ್ದ ಅಯೋಧ್ಯೆಗೆ ಬರುತ್ತಾರೆ. ವಿಷಯವೆಲ್ಲವನ್ನೂ ಅರಿತು ನೊಂದು ಬರುತ್ತಿದ್ದ ಭರತನಿಗೆ ಎದುರಾಗಿ ಬರುವ ಪ್ರೇಮರಾಹು ಮಂಥರೆಯನ್ನು ಕಂಡಾಗ ಭರತ ಈ ಮಾತನ್ನು ಹೇಳುತ್ತಾನೆ– "ತೊಲಗಾಚೆ ಪಾಪಿ! ಬಳಿ ಸಾರದಿರ್, ನಿನ್ನೊಳಂದಿನವರೆಗೆ ವಿಕೃತಿಯಂ ಕಂಡೆನಿಲ್ಲ, ಇಂದೇಕೆ ಪಲ್ಗಿರಿದು ನಿಂದವೋಲಿದೆ ಕುರೂಪತೆಯ ಪೈಶಾಚಿಕತೆ ಕರ್ಕಶಮೆನಲ್". ಮಂಥರೆಯ ಕುರೂಪವನ್ನು ಯಾವತ್ತೂ ಕಾಣದೆ, ಅಂತರಂಗದ ಸೌಂದರ್ಯವನ್ನೇ ಕಂಡಿದ್ದ ಭರತನಿಗೆ ಮೊಟ್ಟಮೊದಲಿಗೆ ಮಂಥರೆ "ಕುರೂಪಿ"ಯಾಗಿ ಕಾಣುತ್ತಾಳೆ.

ಭರತ-ಶತ್ರುಘ್ನರಿಂದ ತಿರಸ್ಕೃತಳಾದ ಮಂಥರೆಗೆ ಇಡೀ ವಿಶ್ವವೇ ಶೂನ್ಯವೆನಿಸುತ್ತದೆ. ಭರತನ ಪ್ರೀತಿಯನ್ನು ಮತ್ತೆ ಪಡೆಯಬೇಕೆಂದು, ಭರತನಣ್ಣಯ್ಯನನ್ನು ಮತ್ತೆ ಕರೆತರಲೇಬೇಕೆಂದು ನಿಶ್ಚಯಿಸುತ್ತಾಳೆ. ಶತ್ರುಘ್ನನ ಏಟುಗಳಿಂದ, ಕಟುನುಡಿಗಳಿಂದ ನೊಂದು, ಸೋತಿದ್ದ ಮಂಥರೆ ರಾಮನನ್ನು ಹುಡುಕುತ್ತಾ ದಟ್ಟಡವಿಗೆ ಬರುತ್ತಾಳೆ. "ಓ ಭರತನಣ್ಣಯ್ಯ, ಓ ನನ್ನ ರಾಮಯ್ಯ.. ಬಾರಯ್ಯ ದಮ್ಮಯ್ಯಾ" ಎಂದು ಕರೆಯುತ್ತಾ, ಹಂಬಲಿಸುತ್ತಾ ಮುಂದೆ ಕಾಣುತ್ತಿದ್ದ ಕಾಳ್ಗಿಚ್ಚನ್ನೇ ರಾಮನೆಂದು ಭ್ರಮಿಸಿ ಅದಕ್ಕೆ ಆಹುತಿಯಾಗುತ್ತಾಳೆ. ಕವಿ ಅಲ್ಲೊಂದು ಭವ್ಯವಾದ ಉಪಮೆಯನ್ನು ತಂದು, ಅಂತರಂಗದ ಅನನ್ಯ ಸೌಂದರ್ಯವನ್ನು ಅಮರಗೊಳಿಸಿದ್ದಾನೆ. ಮಂಥರೆಯ ಮೂರ್ತಿ ಆ ಕಾಳ್ಗಿಚ್ಚಿನಲ್ಲಿ "ಚಿಟ್ಟೆ ಸೀದಂತೆ ಸೀದು ಹೋಗುತ್ತಾಳೆ". ವಿಕೃತಿಯ ಆ ಗುಬ್ಜು ಮೈ ಅಳಿದರೇನಾಯ್ತು? ಶ್ರೀಗಂಧದ ಕಾಷ್ಠಜ ವಕ್ರವಾಗಿದ್ದರೇನು? ಅಗ್ನಿಗೆ ಆಹುತಿಯಾದರೂ ಪರಿಮಳದ ಪುಣ್ಯ ಪವನವನ್ನು ಬೀಸುವುದಿಲ್ಲವೇ? ಲೋಕಲೋಕಂಗಳೊಳ್ ದೇವಿ ಮಂಥರೆಯಾತ್ಮದ ದಯಾಲಕ್ಷ್ಮಿ ತಾಂ ತನ್ನ ಕೀರ್ತಿಯ ಸಯ್ಪುಮೃತಮಯಿ ಸೌಂದರ್ಯಮಂ?" ಎಂಬ ಕೊನೆಯ ಸಾಲಿನೊಂದಿಗೆ ಮಂಥರೆಯ ಪಾತ್ರವನ್ನು ಮುಗಿಸುತ್ತಾನೆ.

ಮಂಥರೆಯ ಅಂತರಂಗದಲ್ಲಿ ದಯಾಲಕ್ಷ್ಮಿಯನ್ನು ಕಾಣುವ ಕವಿಯ ದರ್ಶನ ದೃಷ್ಟಿ ಮಹೋನ್ನತ!

***

ಗಜಲ್

ಭಾವನೆಗಳ ಮಳೆಯಲಿ ತೋಯುತ ವಾಸ್ತವ ಮರೆಯದಿರು ನೀನು

- **ಪೂರ್ಣಿಮ ಭಗವಾನ್**

ಯಾವ ಯೋಚನೆಗೂ ಮನದಿ ಜಾಗ ಕೊಡದಿರು ನೀನು
ಭಾವನೆಗಳ ಮಳೆಯಲಿ ತೋಯುತ ವಾಸ್ತವ ಮರೆಯದಿರು ಗೆಳತಿ

ಅವನಿಯಲಿ ಜನಿಸಿದ ಮೇಲೆ ಕಷ್ಟ ಸುಖಗಳು ಸಹಜವು
ಸಾವಧಾನದ ನಡೆನುಡಿ ಅಳವಡಿಸಿ ನಡೆಯುತಿರು ಗೆಳತಿ

ತಂದಿರುವ ಕರ್ಮಫಲ ಅನುಭವಿಸಲೇಬೇಕಿದೆ ನಾವು
ಬಂದಿದ್ದನ್ನು ಧೈರ್ಯವಾಗಿ ಎದುರಿಸಲು ಕಲಿಸುವರು ಗೆಳತಿ

ಸುಖದುಃಖಗಳು ಒಂದರ ಹಿಂದೊಂದು ಚಕ್ರ ತಿರುಗಿದ ಹಾಗೆ
ಚಿಂತನೆಯ ಆಯಾಮದಲಿ ಬೆಳಕು ತೋರುವರು ಗೆಳತಿ

ಸಾವಿರಾರು ಮಜಲುಗಳ ಅನುಭವದ ಪಾಠದಲಿ
ಅವಿರತ ಪ್ರಯತ್ನದಿ ಪೂರ್ಣ ಜಯಶಾಲಿ ಆಗುವರು ಗೆಳತಿ.

***

ಅನುಭವ ಕಥನ (ಭಾಗ–1)

ಜೇನುಗೂಡು, ಜೇನುನೊಣಗಳು ಹಾಗೂ ನಾನು

– ಕೆ.ಆರ್. ವೆಂಕಟೇಶ್

"ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ, ದುರ್ಜನರ ಸಹವಾಸ ಬಚ್ಚಲ ಕೊಚ್ಚೆಯಂತಿಹುದು ಸರ್ವಜ್ಞ " ಎಂಬುದು ಬಹಳ ಪ್ರಚಲಿತದಲ್ಲಿರುವ ಗಾದೆ. ಇದು ಖಂಡಿತಾ ಸತ್ಯವಾದ ಮಾತು. ಸರ್ವಜ್ಞ ಹೇಳಿದ ಮೇಲೆ ಕೇಳಬೇಕೇ? ಆದರೂ ನಾನು ಸ್ವಲ್ಪ ಧೈರ್ಯಮಾಡಿ ಈ ಗಾದೆ ಕೊಂಚ ಬದಲಾವಣೆ ಮಾಡಿದ್ದೇನೆ. ಅದೇನೆಂದರೆ 'ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ, ದುರ್ಜನರ ಸಹವಾಸ ಹೆಜ್ಜೇನು ಕಡಿದಂತೆ ಸರ್ವಜ್ಞ' ಎಂದು. ಇದೇನಪ್ಪಾ. ಇವನು ಯಾವ ಸೀಮೆ ದಾಸಯ್ಯ? ಈ ರೀತಿ ಸರ್ವಜ್ಞನ ಗಾದೆಯನ್ನೇ ಬದಲಾಯಿಸುತ್ತಿದ್ದಾನೆ. ಎಂಥ ಉದ್ಧಟತನ! ಎಂದುಕೊಂಡಿರಾ? ಆದರೆ ನಾನು ಸುಮ್ಮನೆ ಮನಸ್ಸಿಗೆ ಬಂದದ್ದನ್ನು ಹೇಳುತ್ತಿಲ್ಲ. ಸ್ವತಃ ಅನುಭವದಿಂದ ಈ ರೀತಿ ಬರೆಯುತ್ತಿದ್ದೇನೆ. ಇರಲಿ ಈಗ ವಿಷಯಕ್ಕೆ ಬರೋಣ.

ಜೇನಿನ ರುಚಿ ಯಾರು ನೋಡಿಲ್ಲ. ಆಹಾ ಅದೆಂಥಹ ಸಿಹಿ! ಬಹುಶಃ ಶೇಕಡಾ 99 ಜನ ಒಮ್ಮೆಯಾದರೂ ಇದರ ರುಚಿ ನೋಡೇ ಇರುತ್ತಾರೆ. ಆದರೆ ಜೇನುನೊಣ ಕಡಿತದ ರುಚಿ? ಕೇವಲ ಶೇಕಡಾ 0.1 ಇರಬಹುದು ಅಥವಾ ಇನ್ನೂ ಕಡಿಮೆ.

ನಾವು ಜೇನುನೊಣಗಳು ಜೇನುಗೂಡು ಕಟ್ಟುವ ಬಗ್ಗೆ, ಅದರಲ್ಲಿ ಅವುಗಳು ಜೇನು ಶೇಖರಿಸುವ ಬಗ್ಗೆ, ನಂತರ ಮನುಷ್ಯರು ಆ ಜೇನುನೊಣಗಳನ್ನು ಓಡಿಸಿ ಆ ಗೂಡಿನಿಂದ ಅವುಗಳು ಶೇಖರಿಸಿದ ಜೇನನ್ನು ತೆಗೆದು ಸಂಸ್ಕರಿಸಿ ಮಾರಾಟ ಮಾಡುವ, ಅದನ್ನು ಗ್ರಾಹಕರು ಕೊಂಡು ತಿನ್ನುವ ಪ್ರಕ್ರಿಯೆ ಕೇಳೇ ಇರುತ್ತೇವೆ ಅಥವಾ ಎಲ್ಲಾದರೂ ಓದಿ ತಿಳಿದುಕೊಂಡಿರುತ್ತೇವೆ. ಆದರೆ ಜೇನುಗೂಡು ಹತ್ತಿರದಿಂದ ನೋಡಲು ಬಹಳ ಜನರಿಗೆ ಅವಕಾಶವಿರುವುದಿಲ್ಲ. ಹಾಗೊಮ್ಮೆ ಇದ್ದರೂ ಭಯಕ್ಕೆ ಅದರ ಹತ್ತಿರ ಯಾರೂ ಸುಳಿಯುವುದಿಲ್ಲ.

ನಾನು ಮೊದಲ ಬಾರಿಗೆ ಜೇನುಗೂಡನ್ನು ಪ್ರತ್ಯಕ್ಷವಾಗಿ ಕಂಡದ್ದು ನಮ್ಮ ಮನೆಯ ಹಿತ್ತಲಲ್ಲಿರುವ ಮಾವಿನ ಮರದ ಮೇಲೆ. ಇದು ತಿಳಿದಿದ್ದು ಹಿಂದಗಡೆ ಮನೆಯವರಿಂದ. ಮರದ ಮೇಲಿರುವ ಕೊಂಬೆಯೊಂದು ಅವರ ಮನೆಯ ಕಡೆಗೆ ಮುಖ ಮಾಡಿರುವ ಹಿನ್ನೆಲೆಯಲ್ಲಿ ಆ ಜೇನುಗೂಡು ಅವರ ಮನೆಯ ಕಿಟಕಿಯಿಂದ ಅವರಿಗೆ ಕಾಣುತ್ತಿತ್ತು. ಅವರು ನಮ್ಮ ಮನೆಯ ಕೆಲಸದವಳನ್ನು ನೋಡಿ ನಮಗೆ ತಿಳಿಸುವಂತೆ ಹೇಳಿದಾಗ ಅವಳು ಅದನ್ನು ಗಮನಿಸಿ ನಮಗೆ ತಿಳಿಸಿದಳು. ತಿಳಿದ ಮೇಲೆ ಕೊಂಚ ಆತಂಕ ಶುರುವಾಯಿತು.

ಹಿಂದುಗಡೆ ಮನೆಯವರು ನಮ್ಮ ತಂದೆಗೆ ಈ ಜೇನುಗೂಡಿನಿಂದ ಜೇನುನೊಣಗಳು ಚದುರಿದರೆ ಕಿಟಕಿಯ ಮೂಲಕ ನಮ್ಮ ಮನೆಯೊಳಗೆ ನೇರವಾಗಿ ಬರುವ ಸಾಧ್ಯತೆ ಇದೆ. ಜೇನುಗೂಡು ತೆಗೆಯುವವರು ಇರುತ್ತಾರೆ. ವಿಚಾರಿಸಿ ಅವರನ್ನು ಕರೆದು ತೆಗೆಸಿಬಿಡಿ ಎಂದರು. ಆದರೆ ಆಗ ಇನ್ನೂ ಮೊಬೈಲ್ ಇರದ ಕಾಲ. ಬಹುಶಃ ನಾನು ಇಂಜಿನಿಯರಿಂಗ್ ಓದುತ್ತಿದ್ದ ಸಮಯವಿರಬಹುದು. ಬಹಳ ಮೇಲಿರುವ ಕೊಂಬೆ ಮೇಲೆ ಕಟ್ಟಿದುದರಿಂದ ಅದು ಅಷ್ಟು ಸುಲಭವಾಗಿ ಸಿಗುತ್ತಿರಲಿಲ್ಲ. ಹಾಗಾಗಿ ನಮ್ಮ ತಂದೆಯವರು ಹಾಗೆಯೇ ಸುಮ್ಮನಿದ್ದು ಬಿಡೋಣ ಎಂದರು. ದೇವರ ದಯೆಯಿಂದ ಹಿಂದುಗಡೆ ಮನೆಯವರು ಮತ್ತೆ ಅದನ್ನು ತೆಗೆಸುವ ಬಗ್ಗೆ ಮಾತನಾಡಿರಲಿಲ್ಲ.

ಒಂದಷ್ಟು ತಿಂಗಳಾದ ಮೇಲೆ ಒಮ್ಮೆ ಜೇನುಗೂಡು ಒಂದೆರಡು ಕಂತಿನಲ್ಲಿ ಕೆಳಗೆ ಬಿದ್ದಿತು. ಅವುಗಳಲ್ಲಿ ಜೇನು ಕನಿಷ್ಠ ಪ್ರಮಾಣದಲ್ಲಿ ಇತ್ತು. ಜೇನುನೊಣಗಳು ಮಾಯವಾಗಿದ್ದವು.

ಇದಾಗಿ ಸುಮಾರು ಒಂದು ವರ್ಷದ ನಂತರ ಒಮ್ಮೆ ನಾವು ತೆಂಗಿನಕಾಯಿ ಕೀಳಿಸಲು ಒಬ್ಬ ಕೆಲಸಗಾರನನ್ನು ಕರೆಸಿ ಅವನು ಅದರ ಮೇಲೆ ಹತ್ತಲಾರಂಭಿಸಿ ಗೊನೆಗಳ ಹತ್ತಿರ ಹೋದಾಗ ಅಲ್ಲಿಂದಲೇ ನಮ್ಮ ತಂದೆಗೆ "ಸಾರ್ ಒಂದು ಗರಿಯ ಮೇಲೆ ಜೇನುಗೂಡು ಕಟ್ಟಿದೆ. ಅದರ ಕಡೆಯಿರುವ ತೆಂಗಿನಕಾಯಿ ಗೊನೆ ಕೀಳಲಾಗುವುದಿಲ್ಲ. ಜೇನುನೊಣಗಳು ಏನಾದರೂ ಚದುರಿಬಿಟ್ಟರೆ ಅಷ್ಟೇ ನನ್ನ ಕಥೆ" ಎಂದು ಹೇಳಿದಾಗ ನಮಗೆಲ್ಲಾ ಹೆದರಿಕೆಯಾಯಿತು. ಏನೋ ಜೀವನೋಪಾಯಕ್ಕೆ ಈ ಕೆಲಸ ಮಾಡುವ ಅಂಥವರನ್ನು ಈ ರೀತಿಯ ಅಪಾಯಕ್ಕೆ ಒಡ್ಡುವುದು ನಮಗೂ ಇಷ್ಟವಿರಲಿಲ್ಲ. ಹಾಗಾಗಿ ಅವನಿಗೆ ಹುಷಾರಾಗಿ ಜೇನುನೊಣಗಳು ಚದರದಂತೆ ಯಾವ ಗೊನೆಗಳನ್ನು ಕತ್ತರಿಸಿ ಇಳಿಸಬಹುದೋ ಅಷ್ಟು ಮಾತ್ರ ಸಾಕು ಎಂದು ಸೂಚನೆ ಕೊಟ್ಟರು ನಮ್ಮ ತಂದೆಯವರು. ಅವನು ಹಾಗೆಯೇ ನಾಜೂಕಾಗಿ ಕೆಲಸ ಮಾಡಿ ಮುಗಿಸಿದ.

ಎರಡು ತಿಂಗಳ ನಂತರ ಒಂದು ಸಂಜೆ ನಮ್ಮ ತಾಯಿ ಹಿತ್ತಲಲ್ಲಿ ಇರಬೇಕಾದರೆ ಜೇನುಗೂಡು ಕಟ್ಟಿದ್ದ ಗರಿ ಒಣಗಿ ಜೇನುಗೂಡಿನ ಸಮೇತ ದೊಪ್ಪೆಂದು ಕೆಳಗೆ ಬಿದ್ದಿತು. ಅದು ಬಿದ್ದೊಡನೆಯೇ ಜೇನುಗೂಡು ಅರ್ಧ ಹೋಳಾಗಿ ಜೇನು ನೊಣಗಳು ಎಲ್ಲಾ ಚದುರಿದವು. ನಮ್ಮ ತಾಯಿ ಸಮಯಪ್ರಜ್ಞೆಯಿಂದ ತಕ್ಷಣ ಮನೆಯೊಳಗೆ ಧಾವಿಸಿ ಹಿತ್ತಲ ಬಾಗಿಲು ಹಾಕಿಕೊಂಡು ಒಳಗಿದ್ದ ನನ್ನ ಅಕ್ಕ ಹಾಗೂ ನನಗೆ ಕಿಟಕಿ ಬಾಗಿಲುಗಳನ್ನು ಹಾಕಲು ಹೇಳಿದರು.

ಅಡುಗೆಮನೆ ತೆಂಗಿನಮರಕ್ಕೆ ಬಹಳ ಹತ್ತಿರವಿದ್ದರೂ ಅಲ್ಲಿ ಕಿಟಕಿಗೆ ಮೆಶ್ ಇದ್ದುದರಿಂದ ಜೇನುನೊಣಗಳು ಒಳಬರಲು ಸಾಧ್ಯವಿರಲಿಲ್ಲ. ಸಮಯ ವ್ಯರ್ಥಮಾಡದೆ ನಾನು, ನನ್ನಕ್ಕ, ಹಾಲ್ ಮತ್ತು ರೂಮ್‌ಗಳ ಕಿಟಕಿ ಒಂದೊಂದಾಗಿ ಮುಚ್ಚುತ್ತಾ ಬಂದೆವು. ಅದೃಷ್ಟವಶಾತ್ ಯಾವುದೂ ಒಳಹೊಕ್ಕಿರಲಿಲ್ಲ. ಅಡುಗೆಮನೆ ಕಿಟಕಿಯಿಂದ ಹಿತ್ತಲ ಕಡೆ ನೋಡಿದರೆ ಸುಮಾರು ಮೂವತ್ತು ಜೇನುನೊಣಗಳು ಹಿತ್ತಲ ಬಾಗಿಲ ಮಗ್ಗುಲಲ್ಲೇ ಇವೆ. ಅಯ್ಯೋ ದೇವರೆ, ಈಗೇನೋ ರಾತ್ರಿ ಸಮೀಪಿಸುತ್ತಿದೆ. ಆದರೆ ಬೆಳಗ್ಗೆ ಹೇಗೆ ಹಿತ್ತಲ ಕಡೆ ಹೋಗುವುದು, ಹೋಗದೇ ಇರಲೂ ಆಗುವುದಿಲ್ಲ ಎಂದು ಅಮ್ಮ ಹೇಳಿದಾಗ ನಾವು ಮೂಕ ಪ್ರೇಕ್ಷಕರಾಗಿ ಕೇಳುತ್ತಿದ್ದೆವು. ಅಪ್ಪ ನಮಗೆ ಬೆಳಗ್ಗೆ ನೋಡಿದರಾಯಿತು, ಈಗ ಅದರ ಬಗ್ಗೆ ಯೋಚಿಸುವುದು ಬೇಡ ಎಂದರೂ ಮನಸ್ಸು ಅದನ್ನೇ ಯೋಚಿಸುವ ಹಾಗಾಯಿತು. ಮನಸ್ಸು ಎಷ್ಟಾದರೂ ಮರ್ಕಟವಲ್ಲವೇ?

ಬೆಳಗ್ಗೆ ಅಪ್ಪನಿಗೆ ಐದೂವರೆ ಗಂಟೆಗೆ ಎದ್ದು ಗಿಡಗಳಿಗೆ ನೀರು ಹಾಕುವ ಅಭ್ಯಾಸ. ಅವರು ಹಿತ್ತಲ ನಲ್ಲಿಯಿಂದ ನೀರು ತುಂಬಿಸಿಕೊಂಡು ಮನೆಯ ಹಿಂದೆ, ಪಕ್ಕ ಹಾಗೂ ಮುಂದೆ ಇರುವ ಗಿಡಗಳಿಗೆ ನೀರುಣಿಸುತ್ತಿದ್ದರು. ಇದೀಗ ಜೇನುನೊಣಗಳು ರಾತ್ರಿ ದಾಳಿ ಮಾಡಿದ ಹಿನ್ನೆಲೆಯಲ್ಲಿ ಅಮ್ಮ, ಕಟ್ಟುನಿಟ್ಟಾಗಿ ಇಂದು ನೀರು ಹಾಕುವುದು ಬೇಡ. ಅಲ್ಲಿ ಜೇನುನೊಣಗಳು ಇನ್ನೂ ಇರಬಹುದು ಎಂದರೂ ಶಿಸ್ತಿನ ಸಿಪಾಯಿಯಾದ ಅಪ್ಪ ಕೇಳಬೇಕಲ್ಲ. ಅವರು ಅಮ್ಮನಿಗೆ ಮುಂದಿನ ಬಾಗಿಲಿನಿಂದ ಹೊರಹೋಗಿ ಅಲ್ಲಿಂದ ಹಿತ್ತಲಿಗೆ ಹೋಗಿ ನೋಡುತ್ತೇನೆ. ಅವುಗಳು ಇನ್ನೂ ಅಲ್ಲೇ ಇದ್ದರೆ ನೀರು ಹಾಕುವುದಿಲ್ಲ ಎಂದು ಆಶ್ವಾಸನೆ ನೀಡಿ ಹೊರಹೋದರು. ಅವರು ತಲೆಗೆ ಟವೆಲ್ ಸುತ್ತಿಕೊಂಡು ಹಿತ್ತಲಲ್ಲಿ ಹೋಗಿ ನೋಡಿದರೆ ಆ ಗರಿ ಬಿದ್ದ ಸ್ಥಳದಲ್ಲಿ ಮುರಿದ ಜೇನುಗೂಡಿನ ಮೇಲೆ ಒಂದು 30-40 ಜೇನುನೊಣಗಳು ಅದರ ಸುತ್ತಲೇ ಓಡಾಡುತ್ತಿದ್ದವು. ಹಿತ್ತಲ ಬಾಗಿಲ ಬಳಿ ಒಂದಷ್ಟು ನೊಣಗಳು ಕೊನೆಯುಸಿರೆಳೆಯುವ ಸ್ಥಿತಿಯಲ್ಲಿ ಮತ್ತೆ ಕೆಲವು ಅವುಗಳ ರೋಷವೆಲ್ಲಾ ಉಡುಗಿ ಮೆತ್ತಗಾಗಿದ್ದವು. ಬಿಸಿರಕ್ತದ ಯುವಶಕ್ತಿ ಉಡುಗಿ ವೃದ್ಧಾಪ್ಯದ ಅಸಹಾಯಕತೆ ಕಾಡುವಂತೆ ಅವುಗಳು ಕಾಣಿಸುತ್ತಿದ್ದವು. ಅಪ್ಪ ಧೈರ್ಯಮಾಡಿ ಟವೆಲ್ ಮುಖಕ್ಕೆ ಸುತ್ತಿಕೊಂಡಿದ್ದರಿಂದ ಹಿತ್ತಲ ಬಾಗಿಲ ಪಕ್ಕದಲ್ಲಿದ್ದ ನಲ್ಲಿಯ ಬಳಿ ಹೋಗದೆ ಕೊಂಚ ದೂರದಲ್ಲಿರುವ ಇನ್ನೊಂದು ನಲ್ಲಿಯ ಬಳಿ ಹೋಗಿ ಬಕೆಟ್ ಅದರ ಕೆಳಗಿಟ್ಟು ನೀರು ಹಾಕಲಾರಂಭಿಸಿದರು. ಅಮ್ಮ ಬೇಡವೆಂದು ಕೂಗುವುದಕ್ಕೂ ಅಪ್ಪ ಏನೂ ಆಗುವುದಿಲ್ಲ ಎಂದು ಹಟ ಮಾಡುವುದಕ್ಕೂ, ಅದನ್ನು ನೋಡಿದರೆ ಏತಿಯೆಂದರೆ ಪ್ರೇತಿ ಎನ್ನುವ ಹಾಗಿತ್ತು. ನಾನು

ನನ್ನ ಅಕ್ಕ ಕುತೂಹಲದಿಂದ ಅಡುಗೆಮನೆ ಕಿಟಕಿಯ ಬಳಿ ಹೋಗಿ ಅಲ್ಲಿಂದಲೇ ಅಪ್ಪನ ಸಾಹಸಕ್ಕೆ ಸಾಕ್ಷಿಯಾಗಿ ನಿಂತೆವು. ಅಂತೂ ಅಪ್ಪ ತಮ್ಮ ಹಟ ಸಾಧಿಸಿ ಗಿಡಗಳಿಗೆ ನೀರು ಹಾಕಿ ಮುಗಿಸಿದರು.

ನಮ್ಮ ಮನೆಯ ಕೆಲಸದವಳು ಬೆಳಗ್ಗೆ ಎಂಟು ಗಂಟೆಗೆ ಬಂದು ಜೇನುನೊಣಗಳನ್ನು ಬಿಟ್ಟ ಕಣ್ಣು ಬಿಟ್ಟ ಹಾಗೆ ನೋಡುತ್ತಾ ಇದೇನು ಇದು ಎಂದು ಕೇಳಿದಳು. ಅಮ್ಮನಿಗೆ ಹಿತ್ತಲ ಬಾಗಿಲು ತೆಗೆಯುವುದಕ್ಕೆ ಭಯ. ಅಡುಗೆಮನೆ ಕಿಟಕಿಯಿಂದಲೇ ಉತ್ತರಿಸಿದರು. ಕೆಲಸದವಳು ಕೆಳಗೆ ಬಿದ್ದಿರುವ ಜೇನುನೊಣಗಳನ್ನು ಗುಡಿಸಿ ಹಾಕುತ್ತೇನೆ. ನಂತರ ಬಾಗಿಲು ತೆರೆಯಿರಿ. ನಿಮಗೆ ಭಯವಿದ್ದರೆ ಆಚೆ ಬರುವುದು ಬೇಡ ಎಂದು ತನ್ನ ಸೀರೆಯ ಸೆರಗನ್ನು ಹಾಗೂ ಹೀಗೂ ಮುಖಕ್ಕೆ ಮುಚ್ಚಿಕೊಂಡು ನಾನು ಅವುಗಳನ್ನು ಗುಡಿಸುತ್ತಿದ್ದೇನೆ ಎಂದಳು. ಎಷ್ಟಾದರೂ ಸ್ವಲ್ಪ ವಡ್ಡುವಡ್ಡಾಗಿರುವ ಜನ. ಈ ರೀತಿಯ ಕೆಲಸವನ್ನು ಮಾಡಲು ಧೈರ್ಯವಾಗಿ ಮುನ್ನುಗ್ಗುವ ಜನ. ಹಾಗೂ ಹೀಗೂ ಅವಳು ಜೇನು ನೊಣಗಳನ್ನು ಮನೆಯ ಹಿಂಬದಿಯ ಮೂಲೆಗೆ ತಳ್ಳಿದಳು. ನಂತರ ನಾವು ಆಚೆ ಹೋಗಿ ಜೇನುನೊಣಗಳನ್ನು ನೋಡಿದೆವು. ಮಧ್ಯಾಹ್ನ ಯಾರೋ ಹುಡುಗನ ಕೈಯಲ್ಲಿ ಅದನ್ನೆಲ್ಲಾ ಆಚೆ ಒಂದು ದೊಡ್ಡ ಪ್ಲಾಸ್ಟಿಕ್ ಕವರ್‌ನಲ್ಲಿ ಹಾಕಿಸಿ ಆಚೆ ಎಸೆಸಿದೆವು. ಆ ಹುಡುಗ ಆ ಗೂಡಿನಿಂದ ಜೇನನ್ನು ಎಲ್ಲಾ ಹಿಂಡಿ ನಮ್ಮ ಮನೆಯ ಆಚೆಯೇ ಅದನ್ನು ಯಾರಿಗಾದರೂ ಮಾರಲು ಕಾಯುತ್ತಿದ್ದನು. ರಸ್ತೆಯಲ್ಲಿ ಹೋಗುವ ಒಂದಿಬ್ಬರು ಅದನ್ನು ಒಂದಷ್ಟು ದುಡ್ಡು ಕೊಟ್ಟು ಕೊಂಡುಕೊಂಡಂತೆ ತೋರಿತು. ಆ ಹುಡುಗನದು ಎಂಥಾ ಚಾಣಾಕ್ಷತನ!.

ಇದಾಗಿ ಸುಮಾರು 10 ವರ್ಷಗಳಾದ ಮೇಲೆ ನಮ್ಮ ಮನೆಯ ಪಕ್ಕದ ಕಾರ್ನರ್ ಸೈಟ್‌ನಲ್ಲಿ ಒಂದು ವಾಣಿಜ್ಯ ಕಟ್ಟಡ ಬಂದು ಎರಡನೆಯ ಹಾಗೂ ಮೊದಲನೆಯ ಮಹಡಿಯ ಮೇಲೆ ಪಿಯುಸಿ ಟ್ಯೂಷನ್ ಆರಂಭವಾಯಿತು. ಒಂದಷ್ಟು ವರ್ಷಗಳ ನಂತರ ಎರಡನೆಯ ಮಹಡಿಯ ಗೋಡೆಯ ಮೇಲೆ ಜೇನುನೊಣಗಳು ಗೂಡು ಕಟ್ಟಲಾರಂಭಿಸಿ ಒಂದು ಹಂತಕ್ಕೆ ಬಂದ ಮೇಲೆ ವಿದ್ಯಾರ್ಥಿಗಳು ಅದನ್ನು ಗಮನಿಸಿ ಕೊಂಚ ಹೆದರಿಕೊಂಡಿದ್ದರು.

ಇದೇನಪ್ಪಾ ಹೋದ್ಯಾ ಪಿಶಾಚಿ ಎಂದ್ರೆ ಬಂದೆ ಗವಾಕ್ಷೀಲಿ ಎಂದ ಹಾಗೆ ಜೇನುಗೂಡು ಮತ್ತೆ ಪಕ್ಕದ ಕಟ್ಟಡದ ಎರಡನೇ ಅಂತಸ್ತಿನಲ್ಲಿ ಬಂದಿತ್ತು. ಜೇನುನೊಣಗಳು ಗೂಡಿನ ಸುತ್ತ ಓಡಾಡುತ್ತಿರುವುದು ಗಮನದಲ್ಲಿಟ್ಟುಕೊಂಡೇ ವಿದ್ಯಾರ್ಥಿಗಳು ಹುಷಾರಾಗಿ ತರಗತಿಯ ಒಳಗೆ ಹೋಗುತ್ತಿದ್ದರು. ತರಗತಿಯ ಬಾಗಿಲು ಮತ್ತೊಂದು ಕಡೆಯಲ್ಲಿ ಇದ್ದುದರಿಂದ ಅಷ್ಟೊಂದು ಸಮಸ್ಯೆಯಾಗದೆ ಹಾಗೂ ಹೀಗೂ ವಿದ್ಯಾರ್ಥಿಗಳು ಅದರ ಮುಂದೆ ಹಾದುಹೋಗುತ್ತಿದ್ದರು. ಆದರೂ ಟ್ಯೂಷನ್ ನಡೆಸುವವರು ಕಟ್ಟಡದ ಮಾಲೀಕರನ್ನು ಆಗಿಂದಾಗ್ಗೆ ಒತ್ತಾಯಿಸುತ್ತಿದ್ದುದರಿಂದ ಆ ಜೇನುಗೂಡು ತೆಗೆಸುವ ಮೂಹೂರ್ತ ಒಂದು ಸಂಜೆ ಒದಗಿಬಂದಿತ್ತು.

ಜೇನುಗೂಡು ತೆಗೆಯುವವನು ಅಕ್ಕಪಕ್ಕದವರಿಗೆ ಬಾಗಿಲು ಕಿಟಕಿಗಳನ್ನು ಮುಚ್ಚಿಕೊಳ್ಳುವಂತೆ ಮಾಲೀಕರ ಮೂಲಕ ಸೂಚನೆ ಕೊಟ್ಟನು. ಸಂಜೆ 6 ಗಂಟೆಗೆ ಮುಹೂರ್ತ ಸಿದ್ಧವಾಗಿತ್ತು. ನಾವು ಹಾಗೆಯೇ ಮಾಡಿದೆವು. ಆಗ ಎಂಟು ವರ್ಷದ ನಮ್ಮ ಅಕ್ಕನ ಮಗಳು ನಮ್ಮ ಮನೆಯಲ್ಲೇ ಇದ್ದಳು. ಅವಳು ಹಿಂದೆ ಆಡುತ್ತಿದ್ದುದನ್ನು ನಾವು ಗಮನಿಸದೆ ಬಾಗಿಲು ಹಾಕಿಕೊಂಡೆವು. ಅವಳು ಆಡುತ್ತಾ ಆಡುತ್ತಾ ಮಹಡಿಯ ಮೇಲೆ ಹೋಗುವುದಕ್ಕೂ ಜೇನುಗೂಡು ತೆಗೆಯು ವವನು ಅದೇನೋ ರಾಸಾಯನಿಕ ಹೊಗೆ ಹಾಕಿ ಅವುಗಳನ್ನು ಚದುರಿಸುವುದಕ್ಕೂ ಸಮಯ ತಾಳೆಯಾಯಿತು.

ತಾರಸಿಯಿಂದ ಶಬ್ದ ಬರಲು ಅಮ್ಮ ಹೆದರಿಕೆಯಿಂದ ಮಗು ಮಹಡಿ ಮೇಲೆ ಇರಬೇಕು. ಅಯ್ಯೋ ಅವಳಿಗೆ ಗೊತ್ತಿಲ್ಲ. ಅವುಗಳಿಗೆ ಜೇನುನೊಣಗಳು ಕಚ್ಚಿಬಿಟ್ಟರೆ ಎಂದು ದಿಗ್ಭ್ರಮೆಗೊಂಡರು. ಕಿಟಕಿಯಿಂದ ಅವಳನ್ನು ಜೋರಾಗಿ ಕರೆದೆವು ಕೂಡ. ಎಲ್ಲರಿಗೂ ಹೃದಯ ಬಾಯಿಗೆ ಬಂದಂತಾಗಿತ್ತು. ದೇವರನ್ನು ಬೇಡಿಕೊಳ್ಳದೆ ಬೇರೆ ದಾರಿಯಿರಲಿಲ್ಲ.

ಅದೇನು ದೈವ ಅನುಗ್ರಹವೋ, ಅವಳು ಐದೇ ನಿಮಿಷದಲ್ಲಿ ಕೆಳಗೆ ಬಂದು ಹಿತ್ತಲ ಬಾಗಿಲನ್ನು ಜೋರಾಗಿ ತಟ್ಟಲು ನಾನು ಹೋಗಿ ತೆಗೆದಾಗ ಅವಳು ಪಕ್ಕದ ಮನೆಯಲ್ಲಿ ಜೇನುನೊಣಗಳು ಹರಡಿವೆ. ಅದಕ್ಕೇ ಭಯವಾಗಿ ಓಡಿಬಂದೆ ಎಂದಾಗ ನಾವು ತಕ್ಷಣವೇ ದೇವರಿಗೆ ಕೈ ಮುಗಿಯುವಂತೆ ಮಾಡಿತ್ತು. ಅಂತೂ ಮುಕ್ಕಾಲು ಗಂಟೆ ನಂತರ ಜೇನು ಗೂಡು ಅಲ್ಲಿಂದ ತೆರವುಗೊಂಡಿತ್ತು. ಅರ್ಧಕರ್ಧ ಜೇನುನೊಣಗಳು ನಮ್ಮ ಮನೆಯ ಕಾಂಪೌಂಡ್ ಒಳಗೆ ಬಿದ್ದಿದ್ದವು. ಇದನ್ನು ನಾವು ಗಮನಿಸಿದ್ದು ಮಾರನೆಯ ದಿನ ಬೆಳಗ್ಗೆ. ಮತ್ತೆ ಕೆಲಸದವಳು ಅದನ್ನೆಲ್ಲಾ ಗುಡಿಸಿ ಹಾಕಿದಳು.

ಇದಾಗಿ ಮೂರು ತಿಂಗಳಿಗೆ ಪಕ್ಕದ ಕಟ್ಟಡದಲ್ಲಿ ಮತ್ತೆ ನಿಖರವಾಗಿ ಅದೇ ಜಾಗದಲ್ಲಿ ಜೇನುನೊಣಗಳು ಮತ್ತೆ ಜೇನುಗೂಡು ಕಟ್ಟಿದಾಗ ಟ್ಯೂಷನ್ ವಿದ್ಯಾರ್ಥಿಗಳು ಕಟ್ಟಡದ ಮಾಲೀಕರು ಮತ್ತೆ ಹೈರಾಣಾದರು. ಕಟ್ಟಡದ ಮಾಲೀಕರು ಈ ಬಾರಿ ಇದನ್ನು ಅಷ್ಟು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಅವರು ಅದು ಅದಾಗದೇ ಬೀಳಲಿ, ನಾವು ಹೋದಬಾರಿ ಸಾವಿರ ರೂಪಾಯಿಗಳನ್ನು ಕೊಟ್ಟು ತೆಗೆಸಿದ್ದೇವೆ ಪದೇಪದೇ ಅದಕ್ಕೋಸ್ಕರ ದುಡ್ಡು ಸುರಿಯ ಲಾಗುವುದಿಲ್ಲ ಎಂದು ಎರಡು ಮೂರು ತಿಂಗಳು ತಳ್ಳಿದರು. ಅದು ಅದಾಗದೇ ಬೀಳದೇ ಇರಲು ಮತ್ತೆ ತೆಗೆಸಲು ಬಹಳ ಒತ್ತಡ ಬಂದಾಗ ರಾತ್ರಿ 10 ಗಂಟೆಗೆ ಯಾರೂ ಇಲ್ಲದಿದ್ದಾಗ ತೆಗೆಸಲು ನಿರ್ಧಾರ ಮಾಡಿದರು.

ಆ ದಿನ ನಮ್ಮ ಮನೆಗೆ ಅತಿಥಿಗಳು ಬಂದಿದ್ದರು. ಅವರಲ್ಲಿ ಒಬ್ಬ ರಘು ಎಂಬ ಹದಿಹರೆಯದ ಹುಡುಗನೂ ಇದ್ದ. ಅವನು ನಮ್ಮ ಮನೆಯ ಗೇಟ್ ಹತ್ತಿರ ನಿಂತಿದ್ದಾಗ ಕಟ್ಟಡದ ಮಾಲೀಕರು ಅವನಿಗೆ ನಮ್ಮ ಮನೆ ಕಡೆಗೆ ಕೈ ತೋರಿಸಿ ಈ ಮನೆಯವರಿಗೆ ಕಿಟಕಿ ಬಾಗಿಲುಗಳೆಲ್ಲಾ ಹಾಕಿಕೊಳ್ಳಲು ಹೇಳಿ ಎಂದು ಹೇಳಿದರು. ಅವನು ಅಲ್ಲೇ ಕೊಂಚ ಸಮಯ ಮಾತಾಡುತ್ತಾ ಒಳಬಂದಾಗ ಹೇಳಲು ಮರೆತಿದ್ದ. ನಂತರ ಅವನೂ ಸೇರಿದಂತೆ ಅತಿಥಿಗಳೆಲ್ಲಾ ನಮ್ಮ ಮನೆಯಿಂದ ಹೊರಟರು.

ಪಕ್ಕದ ಕಟ್ಟಡದ ಎರಡನೆಯ ಮಹಡಿಯಲ್ಲಿ ರಾತ್ರಿ 10 ಗಂಟೆಗೆ ಜೇನುಗೂಡು ತೆಗೆಯುವ ಪ್ರಕ್ರಿಯೆ ಆರಂಭವಾದರೂ ನಮಗೆ ಅದರ ಬಗ್ಗೆ ತಿಳಿಯಲಿಲ್ಲ. ಸುಮಾರು 10.20ಕ್ಕೆ ನಾನು ಹಾಲ್‌ನಲ್ಲಿ ಟಿವಿ ವೀಕ್ಷಿಸುತ್ತಾ ಇದ್ದೆ. ಅಮ್ಮ ಮಲಗಿದ್ದರು. ನಮ್ಮ ತಂದೆ ಆಗ ಕಾಲವಾಗಿದ್ದರಿಂದ ನಾನು ಅಮ್ಮ ಇಬ್ಬರೇ ಮನೆಯಲ್ಲಿ ಇದ್ದೆವು.

ಆಗ ಸುಮಾರು ಏಳೆಂಟು ಜೇನುನೊಣಗಳು ಬಹಳ ರೋಷದಿಂದ ತೆರೆದ ಹಾಲ್ ಕಿಟಕಿಗಳಿಂದ ಒಳನುಗ್ಗಿದವು. ಜೇನುನೊಣಗಳ ಆ ಉಗ್ರರೂಪ ಅಂದೇ ನಾನು ನೋಡಿದ್ದು. ಅವು ಮಾಡುತ್ತಿದ್ದ ರೊಯ್ ಎಂಬ ಸದ್ದು ಬಹಳ ಭಯ ಹುಟ್ಟಿಸಿತು. ಆ ಭಯದಲ್ಲಿ ಏನಾಗುತ್ತಿದೆ ಎಂದು ತಿಳಿಯದೆ ಅಡುಗೆ ಮನೆಗೆ ಓಡಿ ಹೋದೆ.

(ಭಾಗ 2–ಕೊನೆಯ ಭಾಗ) ಮುಂದಿನ ದಾಸೋಹದಲ್ಲಿ ಮುಂದುವರೆಯುವುದು)

***

ಹಗಲುಗನಸು

– .ಭ.ರಾ.ವಿ.

ಸುತ್ತ ಸುತ್ತುತಿರುವ ಮನ
ಹಾಡಿಗಿಲ್ಲ ಏಕತಾನ
ಎಲ್ಲಿ ಏನೊ ಎತ್ತಲೋ? ಮಂಜು ಬೆಳಕು ಕತ್ತಲೋ?
ಹುಳಿಯ ದ್ರಾಕ್ಷಿಯಿರದ ತಾಣ
ಮುಟ್ಟಿತೆಲ್ಲ ಬಿಟ್ಟ ಬಾಣ
ಮಣಿವ ಜಗದ ದೃಷ್ಟಿಕೋನ
ಬದಲು ಮಾಡಿ ಎಲ್ಲನು, ನಾನೆ ಹೀರೋ ವಿಲ್ಲನು!

ಅಲ್ಲಿ ತಡೆವರಾರು ಇಲ್ಲ
ನನದೆ ನ್ಯಾಯ ತೀರ್ಪು ಎಲ್ಲ
ನಾನೆ ಮುಗಿಲು ಎತ್ತರ, ನನ್ನದೇ ಮಹತ್ತರ
ಎಂದೂ ಎಲ್ಲೊ ನೋಡಿದಂತ
ಎಲ್ಲೊ ಓದಿ ಕೇಳಿದಂತ
ಮನದ ಮತಿಯ ಸುಪ್ತ ಸ್ಥಿತಿಯ
ಬಯಕೆಯೆಲ್ಲ ಗೋಚರ, ಕನಸಿನಲ್ಲು ಕಾತರ!

ಎಲ್ಲೊ ಸುಳಿದ ಕಾಮುಕತೆ
ಚಲನಚಿತ್ರ ರೂಪಕತೆ
ಬೇಡ ಪಾತ್ರ ಪರಿಚಯ, ಪ್ರಶಸ್ತಿ ನನದೆ ನಿಶ್ಚಯ
ಸೂತ್ರಧಾರನಾದೆನಲ್ಲಿ
ಹಗಲುಗನಸು ಸ್ನಾನದಲ್ಲಿ
ಮನದ ಶಾಂತಿಯೆಲ್ಲ ಚೆಲ್ಲಿ
ಕೊನೆಗೆ ಶುಚಿಯ ಹೊಂದಿದೆ
ಮನಸು ಮನೆಯ ಮುಂದಿದೆ.

***

ಕರುನಾಡ ದಸರಾ

– ರಾಧಿಕಾ ವಿ. ಗುಜ್ಜರ್

ಕಸ ಸೋಸಿ ತಂದಿಹೆವು ತರಿ ಎರೇಮಣ್ಣು
ತುಂಬಿಸುವೆವು ಶ್ರದ್ಧೆಯಿಂದ ಗಂಗಾಳಕ್ಕಿನ್ನು
ಮಧ್ಯ ಕೂರುವುದು ನೀರು ತುಂಬಿದ ಘಟ
ಸುತ್ತ ನವಧಾನ್ಯ ಹರಡುವುದೇ ಪ್ರತಿಪದ

ದ್ವಿತೀಯ, ತೃತೀಯ, ಚೌತಿ, ಆರತಿ ನೈವೇದ್ಯವು
ಪಂಚಮಿ, ಷಷ್ಠಿ, ಫಲ ಕರಿಗಡುಬು ಚಪ್ಪರವು
ಸಪ್ತಮಿಯಂದು ಜರುಗುವುದು ಶಾರದಾ ಪೂಜೆ
ದುರ್ಗಾಷ್ಟಮಿಯಂದು ಕುಮಾರಿಕ ಭೋಜನವು

ಮೊಳಕೆಯೊಡೆದು ನಿಂತ ಗೇಣೆತ್ತರ ಸಸಿಯು
ಆಯುಧ ಪೂಜೆಯಂದು ಅದುರದೆ ನಗುವುದು
ಬಿತ್ತನೆಗೆ ಪಸೆಯೊಸರಿದ ಘಟ ಭಾಗೀರಥಿಯು
ದಶಮಿಯಂದು ಹರಸುವ ಹಸಿರು ಮುಕ್ತಕೇಶಿಯು

ಶಮೀವೃಕ್ಷದ ಪೂಜೆ, ದೀಪ, ದಸರಾ ಗೊಂಬೆಗಳು
ಹತ್ತು ಹಲವು ಆಚರಣೆ, ನೇಮ ನಿಷ್ಠೆಗಳು
ಶಕ್ತಿಯ ಆರಾಧನೆಗೆಂದೇ ನಿಗದಿತ ತೇದಿಗಳು
ಆಶ್ವಯುಜ ಮಾಸವ ಶ್ರೇಷ್ಠವಾಗಿಸಿಹವು

ಹಾರೈಸೆ, "ಬನ್ನಿ ತಗೊಂಡು ಬಂಗಾರದಂಗ ಇರೋಣ"
ಅವನಿಯೊಡಗೂಡಿ ಅರ್ಪಣ ಪರಿಪೂರ್ಣ
ಅಂಬಾರಿಯಲ್ಲಾಕೆ ಹೇಮ ಸಿಂಹಾಸನಾಧೀಶೆ
ಶ್ರೀಚಾಮುಂಡೇಶ್ವರಿ ಕರುನಾಡ ಅಧಿದೇವತೆ

***

ಉಪಮೆ – ನಿನದದೆಷ್ಟು ಸುಷಮೆ..

– ಶಾಂತಾ ನಾಗಮಂಗಲ

ಉಪಮಾ ಕಾಲಿದಾಸಸ್ಯ ಭಾರವೇರರ್ಥಗೌರವಮ್ ।
ದಂಡಿನಃ ಪದಲಾಲಿತ್ಯಂ ಮಾಘೇ ಸಂತಿ ತ್ರಯೋಗುಣಾ: ॥

ಕಾಲಿದಾಸ, ಭಾರವಿ, ದಂಡಿ_. ಈ ಸಂಸ್ಕೃತ ಕವಿಗಳ ವೈಶಿಷ್ಟ್ಯವೇನು ಎಂದು ಹೇಳುವ ಪದ್ಯವಿದು. ಯಾವ ಬಗೆಯ ಅಭಿವ್ಯಕ್ತಿಯಲ್ಲಿ ಅವರು ಸಿದ್ಧಹಸ್ತರು ಎಂಬುದನ್ನು ಸೂತ್ರದಂತೆ ಕಟ್ಟಿಕೊಟ್ಟಿದೆ. ಕಾಲಿದಾಸನ ಉಪಮೆಗಳು ಸರ್ವಾಂಗ ಸುಂದರವಾಗಿ ಸಾಹಿತ್ಯ ರಸಿಕರೆಲ್ಲರ ಮನವನ್ನು ಗೆದ್ದು ಲೋಕಪ್ರಸಿದ್ಧವಾಗಿವೆಯಾದರೆ, ಕವಿ ಭಾರವಿಯ ಭಣಿತಿಯು ಅರ್ಥಭಾರದಿಂದ ಜಗ್ಗುತ್ತದೆ. ಲಲಿತಮನೋಹರವಾದ ಪದಗಳ ಬಳಕೆ ದಂಡಿಯ ಮಾರ್ಗವಾದರೆ, ಮಾಘನಲ್ಲಿ ಮೇಲಿನ ಮೂರೂ ಗುಣಗಳಿವೆ ಎಂಬುದು ಮೇಲಿನ ಪದ್ಯದ ಸಾರಾಂಶವಾಗಿದೆ. ಇದು ಇಲ್ಲಿ ಹೆಸರಿಸಿರುವ ಕವಿಗಳೆಲ್ಲರನ್ನು ಓದಿ ಅರೆದು ಕುಡಿದ ನಮ್ಮ ಪರಂಪರೆಯ ಮಾತು. ಹಾಗಾಗಿ ಒಪ್ಪಿಕೊಳ್ಳಬೇಕು. ಇಲ್ಲ ಎಂದು ಹೇಳಲು ನಮ್ಮ ಬಳಿ ನಮ್ಮದೇ ಒರೆಗಲ್ಲಿಲ್ಲ. ಏಕೆಂದರೆ ನಾವು ಈ ಎಲ್ಲರ ಸಾಹಿತ್ಯವನ್ನು ತಲಮಟ್ಟ ಓದಿಲ್ಲ. ಆದರೆ ಕಾಳಿದಾಸನ ಕಾವ್ಯವನ್ನು ಅಷ್ಟಿಷ್ಟು ಓದಿರುವುದರ ಆಧಾರದ ಮೇಲೆ ಹೇಳುವುದಾದರೆ ಕಾಲಿದಾಸನ ಉಪಮೆಗಳ ರೀತಿ, ಅವುಗಳು ಹೇಳುವ ಅವನ ಲೋಕಜ್ಞಾನದ ವಿಸ್ತಾರ, ದರ್ಶನದ ಮಟ್ಟಕ್ಕೇರಿಸಬಲ್ಲ ತೂಕವೇ ಬೇರೆಯಾದದ್ದು. ನಾನೀಗ ಹೇಳಹೊರಟಿರುವುದು ಕಾಳಿದಾಸನ ಉಪಮೆಗಳ ವೈಭವವನ್ನಲ್ಲ. ಉಪಮೆ ಎಂದರೆ ಸಾಮಾನ್ಯಾರ್ಥದಲ್ಲಿ ಹೋಲಿಕೆ ಎಂದಾದರು, ಈ ಲೇಖನವು ಕಾವ್ಯಗಳನ್ನು ಅಲಂಕರಿಸುವ ಉಪಮಾಲಂಕಾರದ ವಿಷಯವನ್ನು ಹೇಳಲು ಹೊರಟಿದೆ.

ಅಲಂಕಾರಗಳನ್ನು “ಕಾವ್ಯಶೋಭಾಕರ ಧರ್ಮ“ ಎಂದು ಆಚಾರ್ಯ ದಂಡಿ ಕರೆದಿದ್ದಾನೆ. ಕಾವ್ಯಕ್ಕೆ ಶೋಭೆ ನೀಡುವ ಅಥವಾ ಶೋಭೆಯನ್ನು ಹೆಚ್ಚಿಸುವ ಒಂದು ವಿಶೇಷ ಗುಣವನ್ನು ಅಲಂಕಾರ ಎಂದು ಕರೆದಿದ್ದಾನೆ. ಕನ್ಯೆಯರ ಸಹಜವಾದ ರೂಪನ್ನು ವಿಶೇಷವಾಗಿ ಹೊಳೆಸುವಂತೆ ಹೇಗೆ ಬಂಗಾರದ ತೊಡವುಗಳ, ಉಡುಗೆಗಳ, ಕೇಶವಿನ್ಯಾಸದ ಅಲಂಕಾರಗಳು ಮಾಡುತ್ತವೆಯೋ ಹಾಗೆ ಕಾವ್ಯ–ಕನ್ಯೆಯನ್ನು ಅಲಂಕಾರಗಳು ಬಗೆಬಗೆಯಾಗಿ ಸಿಂಗರಿಸಿ ಅವಳ ಚೆಲುವನ್ನು ಕಾಂತಿಯನ್ನು ಮಿಗಿಲೆನಿಸುವಂತೆ ಮಾಡುತ್ತವೆ. “ಇಟ್ರೆ–ತೊಟ್ರೆ ಮುಟ್ಟಕ್ಕ ಚಂದ” ಎಂಬ ನಾಣ್ನುಡಿಯಂತೆ ಸಾಮಾನ್ಯ ರೂಪಿನವರನ್ನೂ ರೂಪವತಿಯರೆನಿಸುವಂತೆ ಮಾಡುವಲ್ಲಿ ಅಲಂಕಾರದ ಪಾತ್ರವಿದೆ. ಕಾವ್ಯಕ್ಕೂ ಇದೇ ಮಾತು ಅನ್ವಯಿಸುತ್ತದೆ. ಅಲಂಕಾರಗಳ ಬಳಕೆಯಿಂದ ಒಮ್ಮೊಮ್ಮೆ ಸಾಮಾನ್ಯ ದರ್ಜೆಯ ಕಾವ್ಯವೂ ಅಸಾಮಾನ್ಯ ಎಂದೆನಿಸುವಂತಾಗುತ್ತದೆ.

ಅಲಂಕಾರಗಳಲ್ಲಿ ಶಬ್ದಾಲಂಕಾರ ಮತ್ತು ಅರ್ಥಾಲಂಕಾರ ಎಂಬೆರಡು ಪ್ರಕಾರಗಳುಂಟು. ಶಬ್ದಗಳ ಜೊತೆ ಆಟವಾಡುತ್ತಾ ಚಮತ್ಕಾರದಿಂದ ಮಾಡುವ ಅಲಂಕಾರ ಶಬ್ದಾಲಂಕಾರವಾದರೆ, ಶಬ್ದಾರ್ಥದ ಚಮತ್ಕಾರವನ್ನೂ ಸೇರಿಸಿಕೊಂಡು ಕಾವ್ಯದ ಸತ್ವವನ್ನು ಬೆಳೆಸಿ ಹೊಳೆಸುವಂತೆ ಮಾಡುವುದು ಅರ್ಥಾಲಂಕಾರ. ಉಪಮಾಲಂಕಾರವು ಅರ್ಥಾಲಂಕಾರದ ಗುಂಪಿನಲ್ಲಿ ಬರುತ್ತದೆ. ಉಪಮಾಲಂಕಾರಕ್ಕೆ ಕವಿಗಳು ಮೊದಲ ಮಣೆ ಹಾಕಿದ್ದಾರೆ ಎನ್ನಬಹುದೇನೋ. ಉಪಮಾಲಂಕಾರವನ್ನು ಬಹಳ ಸಮರ್ಥವಾಗಿ, ಪರಿಣಾಮಕಾರಿಯಾಗಿ, ಹೃದಯಂಗಮವೆನಿಸುವಂತೆ ನಿರ್ವಹಿಸಲು ಕವಿಗೆ ಬಹಳ ಶಕ್ತಿ ಸಾಮರ್ಥ್ಯಗಳು ಬೇಕು. ತನ್ನ ಸುತ್ತಮುತ್ತಿನ ಪರಿಸರವನ್ನು, ಜನರ ಸ್ವಭಾವವನ್ನು ಬಹಳ ಗಮನವಿಟ್ಟು, ತೆರೆದ ಮನಸ್ಸಿನಿಂದ, ಸಾಕ್ಷಿಭಾವದಿಂದ ನೋಡಿ, ತನ್ನ ಮನಸ್ಸು ಮತ್ತು ಮಸ್ತಿಷ್ಕದೊಳಕ್ಕೆ

ಇಳಿಸಿಕೊಳ್ಳುವ ಸಹೃದಯತೆಯೂ ಇರಬೇಕಾಗುತ್ತದೆ. ಬಹುಶಃ ಕಾಳಿದಾಸನಿಗೆ ಇವೆಲ್ಲವೂ ಇದ್ದಿದ್ದರಿಂದಲೇ ಅವನ ಉಪಮೆಗಳು ಲೋಕೋತ್ತರವಾಗಿವೆ.

ಒಂದು ವಸ್ತುವಿನೊಡನೆ ಮತ್ತೊಂದನ್ನು ಹೋಲಿಸುವುದೇ ಉಪಮೆ. ಇದು ಬಹಳ ಸರಳವಾದ ವಿವರಣೆ. ಆದರೆ ಇದರ ವ್ಯಾಪ್ತಿ ಬಹಳ ದೊಡ್ಡದು. ಕಾವ್ಯಗಳಲ್ಲಿ ಕವಿಗಳು ಮಾಡಿರುವ ಬಗೆಬಗೆಯಾದ ಹೋಲಿಕೆಯ ಪ್ರಯೋಗ ಗಳನ್ನು ಆಧರಿಸಿ, ನಮ್ಮ ದಕ್ಷಿಣ ದೇಶದವನಾದ ಸಂಸ್ಕೃತದ ಆಲಂಕಾರಿಕ (ರೆಟಾರ್ಶಿಯನ್) ಆಚಾರ್ಯ ದಂಡಿ ತನ್ನ 'ಕಾವ್ಯಾದರ್ಶ' ಎಂಬ ಗ್ರಂಥದಲ್ಲಿ 'ಉಪಮಾ ಚಕ್ರ' ಎಂಬ ಶಿರೋನಾಮೆಯಡಿಯಲ್ಲಿ ಸುಮಾರು ೩೦ ಉಪಮಾಲಂಕಾರದ ಬಹಳ ಸೂಕ್ಷ್ಮವಾದ ಆದರೆ ಸ್ಪಷ್ಟವಾದ ಒಳಭೇದಗಳನ್ನು ಗುರುತಿಸಿದ್ದಾನೆ. ಪ್ರತಿಯೊಂದನ್ನು ಉದಾಹರಣಾ ಪದ್ಯಗಳ ಸಹಿತ ವಿವರಿಸಿದ್ದಾನೆ ಅಂದರೆ ಉಪಮೆಯ ವ್ಯಾಪ್ತಿ ಎಷ್ಟು ದೊಡ್ಡದು ಎಂಬುದನ್ನು ಊಹಿಸಬಹುದು.

ಸುಂದರಿಯೇ ನಿನ್ನ ಅಂಗೈ ತಾವರೆಯಂತೆ ಕೆಂಪಾಗಿದೆ... ಎಂತಲೋ, ನಿನ್ನ ಕಣ್ಣುಗಳು ದುಂಬಿಯಂತೆ ಕಪ್ಪಾಗಿವೆ.. ಅಂತಲೋ, ಉಪಮಾನ (ಹೋಲಿಕೆಗೆ ಹೇಳುವ ಪ್ರಸಿದ್ಧ ವಸ್ತು) ಮತ್ತು ಉಪಮೇಯಗಳ (ಹೋಲಿಸುತ್ತಿರುವ ವಸ್ತು) ಸಾಮಾನ್ಯ ಧರ್ಮವನ್ನು ನೇರ ನೇರವಾಗಿ ಅಂದರೆ ವಾಚ್ಯವಾಗಿ ಹೇಳುವುದು ಉಪಮೆಯ ಒಂದು ವಿಧಾನ. ಈ ವಿಧಾನವನ್ನು ಬಳಸಿದಾಗ ಅದು ಧರ್ಮೋಪಮೆ ಎನಿಸಿಕೊಳ್ಳುತ್ತದೆ.

ಅದೇ ಹೋಲಿಸುತ್ತಿರುವ ಮತ್ತು ಹೋಲಿಕೆಗೆ ಬಳಸುತ್ತಿರುವ ವಸ್ತುಗಳ ಸಾಮಾನ್ಯ ಧರ್ಮವನ್ನು ವಾಚ್ಯವಾಗಿ ಹೇಳದೆ ವ್ಯಂಗ್ಯವಾಗಿ (ಆ ಅರ್ಥ ಧ್ವನಿಸುವಂತೆ), ನಿನ್ನ ಮುಖವು ತಾವರೆಯಂತಿದೆ..., ನಿನ್ನ ಕಣ್ಣುಗಳು ಕನ್ನೈದಿಲೆಯಂತಿದೆ ಎಂದು, ಕೇವಲ ಉಪಮಾನ-ಉಪಮೇಯಗಳನ್ನು ಮಾತ್ರ ಹೇಳಿದಾಗ ಅದು ವಸ್ತೂಪಮೆ ಎಂದೆನಿಸಿಕೊಳ್ಳುತ್ತದೆ.

ನಿನ್ನ ಮುಖದಂತೆ ಪದ್ಮವು ಅರಳಿತ್ತು... ಇದು ವಿಪರ್ಯಾಸೋಪಮೆ. ಸಾಧಾರಣವಾಗಿ ಲೋಕದಲ್ಲಿ ಕಾಣುವ ಪ್ರಸಿದ್ಧ ವಸ್ತುಗಳನ್ನು ಅಪ್ರಸಿದ್ಧ ವಸ್ತುಗಳಿಗೆ ಹೋಲಿಕೆ ಕೊಡುವುದು ವಾಡಿಕೆ. ಅರ್ಥದ ಪ್ರತೀತಿಗೂ ಅದು ಅನುಕೂಲವೇ. ಚಂದ್ರ, ತಾವರೆ, ಕನ್ನೈದಿಲೆ, ಮರಿದುಂಬಿ... ಇವೆಲ್ಲವೂ ಪ್ರಸಿದ್ಧ ವಸ್ತುಗಳೇ. ಇಂಥಹ ಪ್ರಸಿದ್ಧ ವಸ್ತುಗಳ ಧರ್ಮವು (ಅಟ್ರಿಬ್ಯೂಟ್ಸ್) ಮತ್ತೊಂದು ಲೋಕದ ಅಪ್ರಸಿದ್ಧ ವಸ್ತುವಿನಲ್ಲಿ ಕಂಡಾಗ ಹೋಲಿಕೆಗೆ ಬಳಸಿಕೊಂಡು, ಹೋಲಿಸುತ್ತಿರುವ ವಸ್ತುವಿನ ಗುಣಾಧಿಕ್ಯವನ್ನು ಹೇಳುವುದಾಗುತ್ತದೆ. ಅದೇ ಪದ್ಮವೇ ನಿನ್ನ ಮುಖದಂತೆ ಅರಳಿತ್ತು ಎಂದರೆ ಅದು ಉಲ್ಟಾ ಹೇಳುವುದು. ಅಪ್ರಸಿದ್ಧವನ್ನು ಪ್ರಸಿದ್ಧಕ್ಕೆ ಉಪಮಾನವಾಗಿಸುವುದು. ಇದನ್ನೇ ವಿಪರ್ಯಾಸೋಪಮೆ ಎಂದು ಶಾಸ್ತ್ರದಲ್ಲಿ ಹೆಸರಿಸಿದ್ದಾರೆ. ಈ ವಿಪರ್ಯಾಸೋಪಮೆಯನ್ನು ಬಳಸಿದಾಗ ಉಪಮಾನಕ್ಕೆ ಸಿಗುವ ಮನ್ನಣೆ, ಉಂಟಾಗುವ ಗರ್ವದ ಸಂತೋಷ ಊಹಾತೀತ. ನಾಯಕ ಹೀಗೆ ವಿಪರ್ಯಾಸೋಪಮೆಯನ್ನು ಬಳಸಿ ಒಂದೊಮ್ಮೆ ಮುನಿದ ನಾಯಕಿಯನ್ನು ಸಂತೈಸಲು ತೊಡಗಿದನೆಂದರೆ_ ಪರಿಣಾಮದ ರಮಣೀಯತೆಯನ್ನು, ನಾಯಕನಿಗೆ ಸಿಗಬಹುದಾದ ಸವಿ ಸವಿ ಬಹುಮಾನಗಳನ್ನು ನಾವೇ ಊಹಿಸಿಕೊಳ್ಳಬಹುದು. ಅಲಂಕಾರಗಳು ಕಾವ್ಯದಲ್ಲಿ ಈ ಬಗೆಯ ಪರಿಣಾಮದ ರಮಣೀಯತೆಗಾಗಿಯೇ ಇರುವಂತಹವು. ಕವಿಗಳು ಲೆಕ್ಕ ಹಾಕಿಕೊಂಡೇನೂ ಇಂಥಾ ಅಲಂಕಾರಗಳನ್ನು ಇಂತಲ್ಲಿ ಬಳಸುತ್ತಾರೆ ಎಂದಲ್ಲ_ ಹಾಗೆ ಯಾವ ಕವಿಯೂ ಮಾಡಲಾರ. ಭಾವಾವೇಶದ ಜೊತೆ ಲೋಕಜ್ಞಾನ, ಅಧ್ಯಯನ, ಚರಾಚರ ವಸ್ತುಗಳಲ್ಲಿ ಪ್ರೀತಿಯಿದ್ದಲ್ಲಿ ಕವಿ ನುಡಿದದ್ದೆಲ್ಲಾ ಅಲಂಕಾರವಾಗುತ್ತದೆ. ಹೀಗೆ ಅವನು ತನಗೆ ಅರಿಯದೆಯೇ ಮಾಡಿದ ಅಲಂಕಾರ

ಗಳನ್ನು ಆಮೇಲೆ ಸಹೃದಯರೂ ಆದ ಶಾಸ್ತ್ರಜ್ಞರು ಗುರುತಿಸಿ ಆಯ್ದು ಗಂಟುಕಟ್ಟಿ ಇಟ್ಟುಕೊಳ್ಳುತ್ತಾರೆ. ನಮಗೂ ಹಂಚುತ್ತಾರೆ.

ವಿಪರ್ಯಾಸೋಪಮೆಗಿಂತಲೂ ಒಂದು ಹೆಜ್ಜೆ ಮುಂದೆ ಹೋಗ ಬಲ್ಲದ್ದು "ಅದ್ಭುತೋಪಮೆ". ಒಲಿದ ನಲ್ಲೆಯನ್ನೋ, ಮುನಿದ ಮಾನಿನಿಯನ್ನೋ, ಕೋಪದ ಭಾಮಿನಿಯನ್ನೋ ಒಲಿಸಿಕೊಳ್ಳುವ ಸಂದರ್ಭದಲ್ಲಿ ನಾಯಕನು, "ಸುಂದರಿ.. ಕೋಪದಲ್ಲೂ ಇಷ್ಟು ಸುಂದರವಾಗಿ ಕಾಣುತ್ತಿರುವ ನಿನ್ನ ಸೌಂದರ್ಯಕ್ಕೆ ಜಗತ್ತಿನಲ್ಲಿ ಹೋಲಿಕೆಯೇ ಇಲ್ಲವಲ್ಲ. ಒಂದೊಮ್ಮೆ ಪದ್ಮಕ್ಕೆ ಚಂಚಲವಾದ ಮರಿದುಂಬಿಯಂತಹ ಕಣ್ಣುಗಳೇನಾದರೂ ಇದ್ದಿದ್ದರೆ ಅದು ನಿನ್ನ ಮುಖದ ಸೌಂದರ್ಯಕ್ಕೆ ಸರಿಸಾಟಿಯಾಗುತ್ತಿತ್ತು... ಹಾಗಿಲ್ಲವೇ... ನಿನಗೆ ನೀನೇ ಸಾಟಿ..." ಎಂದು ಅಸಂಭಾವ್ಯವಾದ ರೀತಿಯಲ್ಲಿ ಹೊಗಳಿದರೆ ಅದು ಅದ್ಭುತೋಪಮೆ. ಅಸಂಭಾವ್ಯವೇ ಇರಬಹುದು. ಕಪೋಲ ಕಲ್ಪಿತವೇ ಇರಬಹುದು... ಆದರೆ ಒಲಿದ ನಲ್ಲೆ ಮತ್ತೂ ಹೃದಯಕ್ಕೆ ಹತ್ತಿರಳಾಗಿ, ಮಾನಿನಿಯ ಮುನಿಸಿಳಿದು, ಕೋಪನೆಯ ಕೋಪವೆಲ್ಲಾ ಪುರ್ ಎಂದು ಹಾರಿಹೋಗುವ ಪರಿಣಾಮವಂತೂ ಖಚಿತ.

ಇಂಥಹ ಅನೇಕ ಒಳಭೇದಗಳ ಉಪಮೆಗಳ ಅಲಂಕಾರ ಕಾವ್ಯಕನ್ನಿಕೆಯ ಪತ್ತಲದ ನಿರಿಗೆಗಳಲ್ಲಿ ಅವಿತಿವೆ. ಸಿರಿಮುಡಿಯನ್ನು ಸಿಂಗರಿಸಿವೆ. ಉಪಮೆಗಳ ಸುಷಮೆ ಅನನ್ಯವಾದದ್ದು. ಕಾವ್ಯದ ಕಾಂತಿಯನ್ನು ಹೆಚ್ಚಿಸುವ ಶ್ರೀಗಂಧದ ಎಣ್ಣೆ ತೀವಿದ ಸೊಡರುಗಳು ಎನ್ನಬಹುದು.

***

ಕರ್ನಾಟಕ ಇತಿಹಾಸದ ಹೇಮ ಪುಟದ ಪಂಚರತ್ನಗಳು

– . ರಾಧಿಕಾ ವಿ. ಗುಜ್ಜರ್

ತಲೆಗೆ ಸೆರಗುಹೊದ್ದ ಗುಣಶ್ರೀಮಂತ ಅರಸು ಗೃಹಿಣಿಯರಿವರು
ನೆಲ-ಜಲದ ತುಡುಗುಕೋರರಿಗೆ ಮಾನವಮಿ ರಣಚಂಡಿಯಿವರು
ಕರ್ನಾಟಕದ ಪಂಚರತ್ನಗಳು ಉಷಾಕಾಲ ನತವಂದಿತರು
ಇತಿಹಾಸದ ಹೇಮ ಪುಟಕಿರುವ ವೀರ ವನಿತೆಯರಿವರು

ಕರಾವಳಿಯ ತುಳುನಾಡಿನ ಉಳ್ಳಾಲದ ಚೌಟ ವಂಶದರಸಿ
ರಾಣಿ ಅಬ್ಬಕ್ಕ ಧೀರೆ, ಚತುರೆ, ಬಿಲ್ವಿದ್ಯೆ, ಕತ್ತಿವರಸೆ ಕಲಿ
ಪೋರ್ಚುಗೀಸರೊಡನೆ ಸತತ ಕಾದೆ, ಸದಾ ಬಂದರು ರಕ್ಷಿಸಿ
ಕರುನಾಡಿನ ಸಾಗರದ ಗಡಿಗೆ ಭದ್ರ ಕವಚವ ನೀಡಿ

ಕಿತ್ತೂರಿನ ಕಿರಿಯ ರಾಣಿ ಚೆನ್ನಮ್ಮ ಶಿವಭಕ್ತೆ, ಸ್ವಾಭಿಮಾನಿ
ಇಡಿಗಾಳಾದರೆ ಬದುಕುವೆವು, ಬಿಡಿಗಾಳಾದರೆ ಸಾಯುವೆವು
ಒಗ್ಗಟ್ಟಿನ ಮಂತ್ರ ಬೋಧಿಸಿ ಪ್ರಜೆಗಳ ಹುರಿದುಂಬಿಸಿದಾಕೆ
ಥ್ಯಾಕರೆಗೆ ಕಪ್ಪ ಕೊಡದೆ ಬಡಿದು ಹಿಮ್ಮೆಟ್ಟಿಸಿದಾಕೆ

ಯುದ್ಧರಂಗದ ರಣಚಂಡಿ ಬೆಳವಡಿ ಅರಸಿ ಮಲ್ಲಮ್ಮ
ಮರಾಠ ದಂಡನಾಯಕನ ಬಗ್ಗುಬಡಿದು ಉಳಿಸಿದೆ ಸಂಸ್ಥಾನ
ಗೋವುಗಳ ರಕ್ಷಣೆಗೆ ಸ್ತ್ರೀಪಡೆಯೊಂದಿಗೆ ಕಾದು ಜಯಿಸಿ
ಶಿವಾಜಿಯಿಂದಲೆ ಗೌರವ ಮುಜರಾ ಪಡೆದು ಮೆರೆದೆ ಕೀರ್ತಿ

ಕೆಳದಿ ನಾಯಕ ವಂಶದ ದಕ್ಷ, ಚಾಣಾಕ್ಷ ರಾಣಿ ಚೆನ್ನಮ್ಮ
ತನ್ನವರಿಂದಲೇ ಬಂದೊದಗಿದ ಹಗೆಯ ನಿವಾರಿಸಿದ ಅಂಬೆ
ಔರಂಗಜೇಬನಿಗೂ ಅಂಜದೆ ಶಿವಾಜಿ ಪುತ್ರನಿಗಿತ್ತೆ ಅಭಯ
ರೂಪ ಸುಂದರಿ ದರ್ಪಣಕೆ, ರಣದಿ ಕರುಣೆಯಿರದಾ ದುರ್ಗೆ

ಚಿತ್ರದುರ್ಗದ ಮದಕರಿ ನಾಯಕನ ಸೇವೆಯಲ್ಲಿದ್ದೊಬ್ಬ
ಕೋಟೆಯ ಕಾವಲುಗಾರನ ಹೆಂಡತಿ ಸಾಮಾನ್ಯೆ ಓಬವ್ವ
ಗುಪ್ತದ್ವಾರದ ಬಳಿ ಹೈದರಾಲಿಯ ಸೈನಿಕರ ಕಂಡು
ಒನಕೆಯಿಂದಲೇ ಬಡಿದಳು ಬಿಡದೆ ಹೆಗ್ಗಣಗಳ ದಂಡು

ಕರ್ನಾಟಕದ ಪಂಚರತ್ನಗಳು ಉಷಾಕಾಲ ನತವಂದಿತರು
ಇತಿಹಾಸದ ಹೇಮ ಪುಟಕಿರುವ ವೀರ ವನಿತೆಯರಿವರು

***

ವಿಠಲ ದರ್ಶನ

– ಹು.ವಾ. ಶ್ರೀಪ್ರಕಾಶ್

ನಾನು ಪಂಡರಾಪುರಕ್ಕೆ ಹೋಗಿ ಬರಬೇಕು – ಇದ್ದಕ್ಕಿದ್ದಂತೆ ಆರೇಳು ತಿಂಗಳ ಹಿಂದೆ ಈ ಅನಿಸಿಕೆ ಏಕೆ ಬಂತೋ ಗೊತ್ತಿಲ್ಲ !

ನಾನು ಸಾಧಾರಣವಾಗಿ ದೇವಸ್ಥಾನಗಳಿಗೆ ಹೋಗುವವನೇ ಅಲ್ಲ. ಬಾಲ್ಯದಿಂದಲೂ ಹಾಗೇ ಬೆಳೆದವನು. ಎಲ್ಲೋ ಪರೀಕ್ಷೆ ಸಮಯದಲ್ಲಿ ಮನೆಯಲ್ಲಿ ದೇವರಿಗೆ ನಮಸ್ಕಾರ ಮಾಡಿ ಹೋಗುತ್ತಿದ್ದುದುಂಟು. ಹುಬ್ಬಳ್ಳಿಯಲ್ಲಿದ್ದಾಗ ನೆರಮನೆಯವರು ಹೇಳಿಕೊಟ್ಟ 'ಪೂಜ್ಯಾಯ ರಾಘವೇಂದ್ರಾಯ...' ಎಂಬ ನಾಲ್ಕು ಸಾಲನ್ನು ಪ್ರಶ್ನೆ ಪತ್ರಿಕೆ ಕೊಡಲು ಶುರುಮಾಡಿದ ಕೂಡಲೇ ಹೇಳಿಕೊಳ್ಳುತ್ತಿದ್ದೆ. ಯಾವಾಗಲೋ ಸಂಧರ್ಭ ಒದಗಿಬಂದು ದೇವಾಲಯಕ್ಕೆ ಹೋಗುವುದು ಬಿಟ್ಟರೆ, ಪದೇಪದೇ ದೇವಸ್ಥಾನಕ್ಕೆ ಹೋಗುವ ಕ್ರಮ ಇಟ್ಟುಕೊಂಡವನಲ್ಲ. ಹಾಗೆಂದು ನಾನು ನಾಸ್ತಿಕನಲ್ಲ. ಮನಸ್ಸಲ್ಲೇ ತಾಯಿ ಶಾರದೆಯನ್ನು ನೆನೆಯುತ್ತಿದ್ದುದುಂಟು.

ವರ್ಗಾವಣೆಯಾದಾಗ ದಿನ ನಕ್ಷತ್ರ ನೋಡದೇ ಸೂಟ್‌ಕೇಸ್ ಹಿಡಿದು ಹೊರಟು, ಕಛೇರಿಯಲ್ಲಿ ಯಾವ ದಿಕ್ಕೇ ಇರಲಿ ವಾಸ್ತುವಿನ ಬಗ್ಗೆ ತಲೆಕೆಡಿಸಿಕೊಳ್ಳದೇ ಇರುತ್ತಿದ್ದೆ. ನಿವೃತ್ತಿಯಾದ ನಂತರ ಜ್ಯೋತಿಷ್ಯ ಕಲಿಕೆ ಆರಂಭಿಸಿದ ಮೇಲೆ ದಿನ ನಕ್ಷತ್ರಗಳ ಬಗ್ಗೆ ಸ್ವಲ್ಪ ಗಮನಹೋಗಲು ಆರಂಭವಾಯಿತು.

ನಾವಿರುವುದು ಬ್ಯಾಂಕ್ ಕಾಲೋನಿಯಲ್ಲಿ. ಸುತ್ತಮುತ್ತ ನೆರೆಹೊರೆಯರೆಲ್ಲ ನಿವೃತ್ತ ಬ್ಯಾಂಕ್ ಅಧಿಕಾರಿಗಳೇ. ಹೀಗಾಗಿ ಇಲ್ಲಿ ಹಿರಿಯ ನಾಗರಿಕರಿಗೆ ಅನೇಕ ರೀತಿಯ ಸಾಂಸ್ಕೃತಿಕ ಚಟುವಟಿಕೆಗಳು, ಯೋಗ, ಭಜನೆ ಇತ್ಯಾದಿ ನಡೆಯುತ್ತದೆ. ಎಂ.ಆರ್. ಭಟ್‌ರವರ ನೆಲಮಾಳಿಗೆಯಲ್ಲಿ ಯೋಗ ಅಭ್ಯಾಸ ನಡೆಯುತ್ತದೆ. ಹಾಗೆ ಭಜನೆಯಲ್ಲಿ ಪ್ರಸಾದ್ ಅವರು ವಿಠಲ... ವಿಠಲ... ವಿಠಲ... ಎಂದು ಹಾಡತೊಡಗಿದರೆ ಅವರೊಂದಿಗೆ ಹಾಡುತ್ತ ನಾನೂ ಯಾವುದೋ ಭಾವ ಲೋಕಕ್ಕೆ ಹೋಗಿಬಿಡುತ್ತೇನೆ. ಕೆಲವು ತಿಂಗಳ ಹಿಂದಿನಿಂದ ಹೀಗೆ ಪಂಡರಾಪುರಕ್ಕೆ ಹೋಗಬೇಕು ಎನ್ನುವ ಬಯಕೆ ಉಂಟಾಗಿ ಕೆಲವರಲ್ಲಿ ಹೇಳತೊಡಗಿದೆ.

ಬೆಳಗ್ಗೆ ಹನ್ನೊಂದು ಗಂಟೆಯ ಎಳೆ ಬಿಸಿಲಿನಲ್ಲಿ ಫೆರ್ನಾಂಡಿಸ್‌ರೊಂದಿಗೆ ವಾಕ್ ಮಾಡುವಾಗ ಪಂಡರಾಪುರದ ವಿಷಯ ಹೇಳಿದಾಗ, 'ಕೈಕಾಲು ಗಟ್ಟಿ ಇರುವಾಗ ಹೋಗಿ ಬಂದುಬಿಡಬೇಕು' ಎಂದರು. ಯೋಗ ಕಲಿಸುವ ಪ್ರತಿಭಕ್ಕ, 'ಪಂಡರಾಪುರದಲ್ಲಿ ಪಾಂಡುರಂಗನ ಪಾದಗಳನ್ನು ಮುಟ್ಟಿ ನಮಸ್ಕಾರ ಮಾಡಬಹುದು. ಹತ್ತು ರೂಪಾಯಿ ನೋಟುಗಳನ್ನು ಹಿಡಿದುಕೊಂಡು ಹೋಗಿ. ಏಕೆಂದರೆ ಅಲ್ಲೆಲ್ಲ ಕೆಲವು ಕಡೆ ದುಡ್ಡು ಕೇಳುತ್ತಾರೆ' ಎಂಬ ಸಲಹೆ ನೀಡಿದರು. ಮತ್ತೊಬ್ಬ ಹಿರಿಯ ಮಿತ್ರರಾದ ಕುಲಕರ್ಣಿ ಅವರು, 'ಇಲ್ಲಿಂದ ನೇರವಾಗಿ ಗೋಲ್‌ಗುಂಬಜ್ ಎಕ್ಸ್‌ಪ್ರೆಸ್ ಪಂಡರಾಪುರಕ್ಕೇ ಹೋಗುತ್ತದೆ' ಎಂಬ ವಿಷಯ ತಿಳಿಸಿದರು. 'ಅಲ್ಲಿ ಪಿಕ್ ಪಾಕೆಟ್ ಜಾಸ್ತಿ, ಸ್ವಲ್ಪ ಜಾಗ್ರತೆ ಇರಲಿ' ಅನ್ನುವ ಮಾತನ್ನೂ ಹೇಳಿದರು. ಇಷ್ಟೆಲ್ಲಾ ಪೂರಕ ಸಲಹೆಗಳು ಬಂದ ಮೇಲೆ ಇನ್ನೇನು? ಪಂಡರಾಪುರಕ್ಕೆ ಹೋಗುವ ಮನಸ್ಸು ಗಟ್ಟಿ ಆಯಿತು.

ನಾನೇ ರೈಲ್ವೆ ಬುಕ್ ಮಾಡಲು ಲಾಗ್‌ಇನ್ ಸಮಸ್ಯೆಯಾಗಿ ಪರದಾಡುವಾಗ ವಿಚಾರಿಸಿದ ಮೇಲಿನ ಮನೆಯ ರಾಮ್ ಪ್ರಸಾದ್ ದಂಪತಿಗಳು ತಾವೇ ತ್ರಿ ಟಯರ್ ಏಸಿ ಬುಕ್ ಮಾಡಿಕೊಟ್ಟರು

ಅದೇ ದಿನ ತಂಗಿಯ ಫೋನ್ ಬಂದಾಗ ನಾನು ಪಂಡರಾಪುರಕ್ಕೆ ಹೋಗುತ್ತಿದ್ದೇನೆ ಅಂತ ತಂಗಿಗೆ ಹೇಳಿದೆ. "ಹೌದಾ ಅಣ್ಣ ಹೋಗಿ ಬಾ" ಅಂದವಳು ಒಂದು ಪುಟ್ಟ ಕಥೆಯನ್ನೇ ಹೇಳಿದಳು.

ಅಪ್ಪಯ್ಯ, ಅಮ್ಮ ಮತ್ತು ಚಿಕ್ಕವರಾಗಿದ್ದ ನನ್ನ ಇಬ್ಬರು ಅಕ್ಕಂದಿರು ಪಂಡರಾಪುರಕ್ಕೆ ಹೋಗಿದ್ದಾಗ ನನ್ನ ಎರಡನೇ ಅಕ್ಕ ತನ್ನ ಕುತ್ತಿಗೆಗೆ ಹಾಕಿದ್ದ ಚಿನ್ನದ ಸರವನ್ನು ದೋಣಿಯಲ್ಲಿ ಹೋಗುವಾಗ ಆಡಿಸುತ್ತಾ ನೀರಿನಲ್ಲಿ ಬಿಟ್ಟಳಂತೆ. ಸರ ಹೋದ ವ್ಯಥೆಯ ಜೊತೆಗೆ ಅಲ್ಲಿ ಮತ್ತಿನ್ನಾವ ತೊಂದರೆಯಾಯಿತೋ, ಅಪ್ಪ ಇನ್ನು ನಾನು ಪಂಡರಾಪುರಕ್ಕೆ ಬರುವುದಿಲ್ಲ ಎಂದರಂತೆ. ಹೀಗೆ ಹೇಳಿಬಿಟ್ಟೆನಲ್ಲಾ ಅಂತ ಎಷ್ಟೋ ಬಾರಿ ವ್ಯಥೆಪಟ್ಟಿದ್ದರಂತೆ. ತಂಗಿ ಹೇಳಿದ ಕತೆ ಅಚ್ಚರಿ ತಂದರೂ ಅದನ್ನು ದೃಡೀಕರಿಸಲು ಅಪ್ಪ, ಅಮ್ಮ, ಅಕ್ಕಂದಿರಿಬ್ಬರೂ ಈಗ ಇಲ್ಲ.

ಅಕ್ಕನ ಮಕ್ಕಳು, ಮೊಮ್ಮಕ್ಕಳು ಇದ್ದಾರೆ. ಕುತೂಹಲಕ್ಕೆ ಅಕ್ಕನ ಮಗಳಿಗೇ ಫೋನ್ ಮಾಡಿ ತಂಗಿ ಹೇಳಿದ ಕತೆ ಹೇಳಿದಾಗ ಅವಳು ಹೌದು ಅಮ್ಮ ಹೇಳುತ್ತಿದ್ದಳು ಮತ್ತು ಅಮ್ಮನಿಗೂ ಪಂಡರಾಪುರಕ್ಕೆ ಹೋಗುವ ಆಸೆ ಇತ್ತು ಎಂದು ಹೇಳಿ ಒಮ್ಮೆ ಪಂಡರಾಪುರದ ವಿಠಲನ ಫೋಟೋ ನೋಡಿಯೇ ಅವಳು ಹರ್ಷ ವ್ಯಕ್ತಪಡಿಸಿದ್ದ ಪುಟ್ಟ ಆಡಿಯೋ ಮೆಸೇಜ್ ನನಗೆ ಕಳಿಸಿದಳು. ಈ ಎಲ್ಲ ಘಟನೆಗಳೂ ಒಂದು ರೀತಿಯಲ್ಲಿ ಕಾಕತಾಳೀಯವಾಗಿ ಆ ವಿಠಲನ ದರ್ಶನದ ಬಗ್ಗೆ ನನ್ನಲ್ಲಿ ಕಾತುರ ಹೆಚ್ಚಿಸಿದವು.

ಬೆಂಗಳೂರಿನಿಂದ ಸ್ವಲ್ಪ ತಡವಾಗಿ ಸಂಜೆ ಏಳರ ಹೊತ್ತಿಗೆ ಬಿಟ್ಟ ರೈಲು ಮರುದಿನ ಮಧ್ಯಾಹ್ನ ಒಂದು ಗಂಟೆ ಹೊತ್ತಿಗೆ ಪಂಡರಾಪುರ ಸೇರಿತು. ಮೊದಲೇ ಬುಕ್ ಮಾಡಿದ್ದ ಹೋಟೆಲ್ ರೂಮಿಗೆ ಹೋಗಿ ಫ್ರೆಶ್ ಆಗಿ ಸಂಜೆ ವಿಠಲ ಮಂದಿರಕ್ಕೆ ಹೋದೆ. ಸ್ಪೆಶಲ್ ಕ್ಯೂ ಬಗ್ಗೆ ವಿಚಾರಿಸಿದರೆ ಇಲ್ಲ ಎಂದರು. ದೂರದಿಂದ ದರ್ಶನ ಬೇಗ ಲಭ್ಯ. ಪಾದ ಸ್ಪರ್ಶಿಸಬೇಕೆಂದರೆ ಗಂಟೆಗಟ್ಟಲೆ ಕ್ಯೂ ನಿಲ್ಲಲೇ ಬೇಕು. ವಿಧಿಯಿಲ್ಲ, ನಿಂತೆ! ದೊಡ್ಡ ದೊಡ್ಡ ಗುಂಪುಗಳಲ್ಲೇ ಹೆಚ್ಚಾಗಿ ಬರುವ ಜನ.. ಅದೆಷ್ಟು ಸೊಗಸಾದ ಭಜನೆಗಳು.. ಗಾಯನ ಕೇಳಿದಾಗ ಪ್ರಚಾರಕ್ಕೇ ಬರದ ಇಂತಹ ಅದ್ಭುತ ಗಾಯಕರು ಗ್ರಾಮೀಣ ಭಾಗದಲ್ಲಿ ಅದೆಷ್ಟು ಜನ ಇದ್ದಾರೋ ಅನಿಸಿತು.

ಆ ಭಜನೆಯಲ್ಲಿ ಪಾಲ್ಗೊಂಡು ಮುಳುಗಿಬಿಟ್ಟರೆ ಸರದಿ ಸಾಲು ಆಯಾಸವಿಲ್ಲದೆ ಸಾಗುತ್ತದೆ. ವಿಠಲನ ದರ್ಶನವಾದಾಗ ಮನದಲ್ಲಿ ಸಂತಸ.

ರಾತ್ರಿ ಊಟಕ್ಕೆ ಪಂಡರಾಪುರದಲ್ಲಿ ಉತ್ತಮ ಹೋಟೆಲುಗಳು ಕಾಣಿಸಲಿಲ್ಲ. ರಸ್ತೆ ಬದಿಯ ತಿನಿಸುಗಳಿಗೆ ಹೆಚ್ಚಿನ ಬೇಡಿಕೆ ಇದ್ದಂತೆ ಇತ್ತು. ಒಳ್ಳೆಯ ಹೋಟೆಲ್ ಅರಸುತ್ತಾ ನಡೆದೆ. ಎಲ್ಲರೂ ಮರಾಠಿಯಲ್ಲಿ ಮಾತನಾಡುವವರೇ. ಕೆಲವರು ಹಿಂದಿಯಲ್ಲಿ ಕೇಳಿದರೆ ಉತ್ತರಿಸುತ್ತಾರೆ. ಯಾತ್ರಿಗಳಲ್ಲಿ ಕನ್ನಡಿಗರು ಬಹಳ ಜನ ಕಂಡುಬರುತ್ತಾರೆ. ಬಿಳಿಯ ಕಚ್ಚೆಪಂಚೆ, ಶರಟು, ಮುಂಡಾಸು ಅಥವಾ ಬಿಳಿ ಟೋಪಿ ಧರಿಸಿದ ಗ್ರಾಮೀಣ ಭಾಗದವರೇ ಹೆಚ್ಚು.

ಜೊತೆಗಾರನೊಂದಿಗೆ ಕನ್ನಡದಲ್ಲಿ ಮಾತನಾಡಿಕೊಂಡು ಹೋಗುತ್ತಿದ್ದ ಹಿರಿಯನೊಬ್ಬನನ್ನು “ಇಲ್ಲಿ ಒಳ್ಳೆಯ ಊಟ ಎಲ್ಲಿ ಸಿಗುತ್ತದೆ” ಎಂದು ಕೇಳಿದೆ. ಅವರು "ಸ್ವಾಮಿ, ನಾವು ಮಂಡಲಿಕ ಮಂದಿರಕ್ಕೆ ಹೋಗ್ತೀವ್ರಿ. ಅಲ್ಲಿ ಪ್ರಸಾದ ಚಲೋ ಇರ್ತದ್ರಿ. ನಮ್ಮ ಕೂಡ. ಬರ್ರಿ" ಅಂದರು. ಸರಿ, ಅವರ ಜೊತೆ ಹೋದೆ. ದಾರಿಯಲ್ಲಿ ಪರಸ್ಪರ ಪರಿಚಯದೊಂದಿಗೆ ಮಾತನಾಡುತ್ತಾ ಸಾಗುವಾಗ ನನ್ನ ವೃತ್ತಿ ಬಗ್ಗೆ ವಿಚಾರಿಸಿದರು. ನಾನು ಬ್ಯಾಂಕಿನಲ್ಲಿ ವ್ಯವಸ್ಥಾಪಕನಾಗಿ ನಿವೃತ್ತ

ನಾದವನು ಎಂದು ಗೊತ್ತಾದ ಕೂಡಲೇ "ಪಾಂಡುರಂಗನ ದರ್ಶನ ಆದಂಗಾತ್ರಿ" ಅಂತ ಹೇಳಿ ಪಕ್ಕದ ಜೊತೆಗಾರನಿಗೆ ಕೂಡಲೇ ಏನೋ ತೆಗೆದುಕೊಡಲು ಹೇಳಿ ಸನ್ನೆ ಮಾಡಿದರು. ಅವನು ನಾಲ್ಕು ಪುಟಗಳ ಕಿರು ಹೊತ್ತಿಗೆಯನ್ನು ತೆಗೆದುಕೊಟ್ಟ. ಅದರಲ್ಲಿ ಅವರು ಹಳ್ಳಿಯಿಂದ ಪಂಡರಾಪುರಕ್ಕೆ ಮಾಡುವ ಪಾದಯಾತ್ರೆಯ ವಿವರ ಇತ್ತು. ನಿಮ್ಮಿಂದ ಏನಾದರೂ ಸಹಾಯ ಆಗಲಿ ಅಂದಾಗ ಒಳ್ಳೆಯ ಕೆಲಸ, ಜೊತೆಗೆ ನನ್ನನ್ನು ಹೊಗಳಿ ಅಟ್ಟಕ್ಕೇರಿಸಿದ್ದರಿಂದ ರೂ.500 ಕೊಟ್ಟೆ. ಅದರಲ್ಲಿನ ವಿವರಗಳ ಮೇಲೆ ಕಣ್ಣಾಡಿಸಿದಾಗ ಆಶ್ಚರ್ಯವಾಯಿತು.

ಶ್ರೀ ಕ್ಷೇತ್ರ ಪಂಡರಪುರ ಪಾದಯಾತ್ರಾ ಆಮಂತ್ರಣ ಪತ್ರಿಕೆ ಅದಾಗಿತ್ತು. ಸುಮಾರು 15 ದಿನದ ಪಾದಯಾತ್ರೆ ಹೊರಡುವ ಊರು, ಮಧ್ಯಾಹ್ನ ಮತ್ತು ರಾತ್ರಿ ವಸತಿ ಎಲ್ಲೆಲ್ಲಿ ಎಂಬ ಕಾರ್ಯಕ್ರಮ ವಿವರ, ಅಲ್ಲಲ್ಲಿ ಹಳ್ಳಿಗಳಲ್ಲಿ ಊಟ, ಚಹಾ, ಫಳಾರ ಕೊಡುವ ಭಕ್ತಾದಿಗಳ ವಿವರ, ಸೇವಾಕರ್ತರು ಮತ್ತು ದಾನಿಗಳ ವಿವರ ಎಲ್ಲವೂ ಇತ್ತು. ದಿಂಡಿಗೆ ಬರತಕ್ಕವರು ತಮ್ಮ ಹಾಸಿಗೆ, ತಾಟು, ತಂಬಿಗೆ, ಬ್ಯಾಟರಿ ಹಾಗೂ ತಾಳ ತಪ್ಪದೇ ತರಬೇಕು. ದಿಂಡಿಯಲ್ಲಿ ಪ್ರತಿದಿನ ಭಜನೆ ಕೀರ್ತನೆ ಪ್ರವಚನ ಇತ್ಯಾದಿ ಸೇವೆಯು ಯಥಾಶಕ್ತಿ ನಿಯಮಗಳನ್ನು ಅನುಸರಿಸಿಕೊಂಡಿರುತ್ತದೆ. ಪ್ರತಿ ವಸತಿ ಗ್ರಾಮದವರು ದಿಂಡಿ ಸಂತ ಮಂಡಳಿಯ ಲಗೇಜನ್ನು ಮುಂದಿನ ಊರಿಗೆ ಸಾಗಿಸುವ ವ್ಯವಸ್ಥೆ ಮಾಡಬೇಕಾಗಿ ವಿನಂತಿ- ಎಂಬಿತ್ಯಾದಿ ವಿಶೇಷ ಸೂಚನೆಗಳು ಇದ್ದವು. ಕರಪತ್ರ ಓದಿ ವ್ಯವಸ್ಥಿತ ಪಾದಯಾತ್ರೆ ಬಗ್ಗೆ ಖುಷಿ ಅನಿಸಿತು.

ದೇವರ ದರ್ಶನಕ್ಕೆ ಹಳ್ಳಿಗಳಿಂದ ಹೀಗೆ ಜನ ಗುಂಪುಗುಂಪಾಗಿ ಬರುವುದು ಅದೆಷ್ಟು ಚಂದ. ಅನೇಕ ಧಾರ್ಮಿಕ ನಂಬಿಕೆಗಳ ನೆಲೆಯಾದ ಈ ಭರತ ಭೂಮಿಯಲ್ಲಿ ಅದೆಷ್ಟು ಶಕ್ತಿಕೇಂದ್ರಗಳಿವೆ ಅನಿಸಿತು. ನಾನು ಆ ಹಿರಿಯನನ್ನು ವಿಚಾರಿಸಿದಾಗ ಆತ ವರ್ಷಕ್ಕೆ ಎರಡು ಬಾರಿ ಪಂಡರಾಪುರಕ್ಕೆ ಬರುತ್ತೇನೆ ಎಂದ. ಎಲ್ಲಿ ಉಳಿದುಕೊಳ್ಳುತ್ತೀರಿ ಎಂದರೆ "ಒಬ್ಬನೇ ಬಂದಾಗ ಇಲ್ಲೇ ಹೊಳಿ ದಡದಾಗ ಮಲ್ಕೋತೀನ್ರಿ. ಗುಂಪಿನಾಗ ಬಂದಾಗ ಮಠದಾಗ ಇರ್ತೀವ್ರಿ" ಅಂದ. ಹಣ, ಮೊಬೈಲ್ ಹೇಗೆ ಜೋಪಾನ ಮಾಡ್ತೀರಿ ಅಂದೆ. ಅದನ್ನು ಸರಿಯಾಗಿ ಕಟ್ಟಿ ಇಟ್ಟುಕೊಂಡು ಜೋಪಾನ ಮಾಡುತ್ತೇವೆ ಅಂದ. ನನಗೆ ಅವನಾಡಿದ ಮಾತುಗಳನ್ನು ಅದೇ ಗ್ರಾಮೀಣ ನುಡಿಗಳ ಸೊಗಡಿನಲ್ಲಿ ದಾಖಲಿಸಲು ಸಾಧ್ಯವಾಗುತ್ತಿಲ್ಲ

ವಿಠಲನ ದರ್ಶನಕ್ಕೆ ಹೋಗುವಾಗ ಮೊಬೈಲ್ ಒಯ್ಯುವಂತಿರಲಿಲ್ಲ. ಅಲ್ಲೇ ಅಂಗಡಿಯಲ್ಲಿ ರಸೀದಿ ಕೊಟ್ಟು ಇಟ್ಟುಕೊಳ್ಳುವ ಲಾಕರ್ ಸೌಲಭ್ಯ ಇತ್ತು. ಆದರೆ ಜೇಬಿನಲ್ಲಿದ್ದ ಪರ್ಸ್ ಬಗ್ಗೆ ನಿಗಾ ಇಟ್ಟುಕೊಂಡೇ ಕ್ಯೂನಲ್ಲಿ ನಿಂತಿದ್ದರಿಂದ ನನ್ನ ಗಮನ ವಿಠಲನಲ್ಲಲ್ಲದೆ ಪರ್ಸ್ ಮೇಲೂ ಇತ್ತಲ್ಲ! ನಾಳೆ ಇನ್ನೊಮ್ಮೆ ವಿಠಲನ ದರ್ಶನ ಮಾಡಬೇಕು ಅಂದುಕೊಂಡು ಪರ್ಸ್ ಮತ್ತು ಮೊಬೈಲ್ ಹೋಟೆಲ್ನಲ್ಲೇ ಬಿಟ್ಟು ಬೆಳಗ್ಗೆ ಬೇಗ ಹೋದೆ. ದರ್ಶನವೂ ಬೇಗ ಆಯಿತು. ವಿಠಲನ ಹತ್ತಿರ ಹೋಗುತ್ತಿದ್ದಂತೆ ಅಪ್ಪ ಅಮ್ಮ ಅಕ್ಕಂದಿರನ್ನೆಲ್ಲ ನೆನಪು ಮಾಡಿಕೊಂಡು ಹೋಗಿ ವಿಠಲನ ಪಾದಗಳನ್ನು ಸ್ಪರ್ಶಿಸಿದೆ.

***

ನನ್ನದೇ ಕಾಲುಗಳು ಬೇಕು

– ಬೆಂ.ಶ್ರೀ. ರವೀಂದ್ರ

ಅಪ್ಪಳಿಸಲಿದೆ ಭೀಭತ್ಸ ದೈತ್ಯ ಅಲೆ
ಸಹಸ್ರಾರು ಚದರ ನೀಲಾಕಾಶದ
ಬಿರು ಮಧ್ಯಾಹ್ನ ಕಾರ್ಮುಗಿಲು ಕವಿಸಿ
ನಡೆಯಲಿದೆ ಲೂಟಿ
ಬೆವರಲಿ ತೊನೆವ ತೆನೆಯನುಂಡು
ಬರಗಾಲ ಹರಡಿ
ಹುಂಕರಿಸುತಿಹ ಭಂಡ ಚಿಮ್ಮುಂಡೆ
ಖಂಡ ಖಂಡಾಂತರ ಚಲಿಸಿ

ಪಾಪ ಹಸಿವು ಚಿಮ್ಮುಂಡೆ ಹುಲ್ಲನುಣುವುದು
ಇದು ಧರ್ಮ ಇದು ಪ್ರಕೃತಿ ನಡೆವ ಕರ್ಮ
ಹೊಸತೇನು ಎನ್ನುವಿರಾ

ಈಗ ಬಂದಿಹ ಚಿಮ್ಮುಂಡೆಯಲೆಗೆ
ಬೇಕಿಲ್ಲ ಹುಲ್ಲು ಬೇಕು ಬಿಸಿ ರಕ್ತಪಾನ
ಜನಾಂಗಗಳನಳಿಸಿ ಕತ್ತಲು ಕವಿಸಿ
ಜಗದ ಜಗಲಿಯಲಿ ಹೇತು
ಹಮ್ಮಿಗೆ ಹೆಗಲೀವ ಕಸಿವಿಸಿಯ ಕಂತು

ಇತಿಹಾಸವು ಇವರ ಹೆಣಿಕೆಯ ಚಾಪೆ
ಇವರೆಸೆದ ಚಾಪದ ಕಥೆ
ಹೆಣದೆಣಿಕೆಗೆ ಹೆಣಗಾಡಿ ಸೋತ ಗಣಿತ
ತರ್ಕದಂಗಳದಲ್ಲಿ ಕುತರ್ಕಕೆ ಸೋಪಾನ

ಹೀಗೆ...
ಹಿಡಿಯಲಿಲ್ಲವೇ ಅಡ್ಡ ಸುದರ್ಶನ
ಶತ್ರುನಾಶಕೆ ನಡುಹಗಲಲಿ
ಅನಿವಾರ್ಯವೆನ್ನುವರು ಶಾಂತಿಗೆ
ಅಲ್ಲವೆ ಮತ್ತೆ ಧರ್ಮದ ಉಳಿವಿಗೆ
ಇದೋ ಧರ್ಮದ ದೀವಿಗೆ
'ಅಶ್ವಥ್ಥಾಮೋ ಹತಃ ಕುಂಜರಃ'
ತಂಬಿಗೆ ನೀರು ಕುಡಿದೆಡೆ
ಶ್ರವಣಗೆ ಸಿಕ್ಕಿತಲ್ಲವೇ ಬಾಣದ ಬಾನ

ಪುಟಾಣಿ "ಲಹನಾ"
ಕಾಲಾಯಿತೇ ಊನ
ಇಲ್ಲಿ ಪ್ರಾಣಕ್ಕೆ ಪ್ರಾಣವೇ ಗುರಾಣಿ
ಸುರಂಗ ರಂಗದಲಿ ಹೇಷಾರವ

ಮೃದುಮನದ ಇನಿಯು
ರಾಕೆಟ್ಟುಗಳಬ್ಬರದಲಿ ಕೇಳುವುದಿಲ್ಲ
ಹಠ ಬೇಡ ಪುಟಾಣಿ
ಹಾಕಿಸಿಕೊ ಪ್ಲಾಸ್ಟಿಕ್ ಕಾಲು

ನಿನಗೆ ತಿಳಿಯದು
ದ್ರೌಪದೇಯರು ಸರಿರಾತ್ರಿಯ ಗಾಢನಿದ್ರೆಯಲಿ
ಬಲಿಯಾದರಲ್ಲ ಅಶ್ವತ್ಥಾಮನಿಗೆ
ವ್ಯೂಹದ ಒಳಹೊಕ್ಕು ಹೊರಬರಲಿಲ್ಲ ಅಭಿಮನ್ಯು
ಒಂದು ಕಲಿಸಿ ಮತ್ತೊಂದು ಬಿಟ್ಟರಲ್ಲ
ಮೋಸದಿಂದೆಸದ ಕಣೆಗೆ ಎಳೆ ಬದುಕು ಮಸಣವಾಯ್ತು
ಯಾರ ತಲೆಕಾಯಲು ಬಲಿಯಾದ
ಘಟೋತ್ಕಚ ಪಾಶುಪತಕೆ
ಹೇಳು ಏನು ತರ್ಕವಿದು

ಕಣ್ಣಿದ್ದೂ ಕುರುಡಾದಳು ಗಾಂಧಾರಿ
ದೃಷ್ಟಿಯಿತ್ತರೂ ಬೇಡವೆಂದ ಧೃತರಾಷ್ಟ್ರ
ಐದು ಗ್ರಾಮವಲ್ಲ
ನೀಡೆನು ಐದು ಸೂಜಿಮೊನೆ ನೆಲ
ಹುಂಕರಿಸಿದ ಅಹಂಕಾರವಲ್ಲವೆ ಘೋರ

ಕಾಲ ಬದಲಾಗುವುದಿಲ್ಲ
ಕನಸುಗಳು ಅರಳುವುದಿಲ್ಲ
'ಲಹನಾ*"
ನಿನ್ನ ಕಾಲುಗಳು ಮರಳುವುದಿಲ್ಲ
ಮರಳು ಮನುಜಗೆ ಮತಿಯು ಬರುವುದಿಲ್ಲ.

***

ಟಿಪ್ಪಣಿ; ಲಹನಾ= ಇಸ್ರೇಲ್-ಹಮಾಸ್ ಯುದ್ಧದಲ್ಲಿ, 'ಲಹನಾ' ಎಂಬ ಪುಟ್ಟ ಬಾಲೆಯ ಕಾಲಿನ ಮೇಲೆ ಕಟ್ಟಡ ಬಿದ್ದು ಎರಡೂ ಕಾಲುಗಳನ್ನು ಕಳೆದುಕೊಂಡಳು. ಲಹನಾ "ನನಗೆ ಪ್ಲಾಸ್ಟಿಕ್ ಕಾಲು ಬೇಡ, ನನ್ನದೇ ಕಾಲು ಬೇಕು" ಎಂದು ಹಠ ಮಾಡುತ್ತಿದ್ದಾಳೆ. (ಪತ್ರಿಕಾ ವರದಿ)

ಅಡ್ಡ ಉದ್ದ ಪರಿಣಾಮಗಳು

– ಟಿ.ಎಸ್. ಶ್ರವಣಕುಮಾರಿ

ಈ ಸಂಚಿಕೆಯನ್ನು ನಾನು ಮೊದಲೇ ಬರೆಯಬೇಕಿತ್ತೇನೋ... ಇರಲಿ ಈಗಲೂ ತಡವೇನಿಲ್ಲ. ಸ್ವಲ್ಪ ಹೊರಳಿ ನೋಡಬೇಕಷ್ಟೇ, ಸಿನಿಮಾದಲ್ಲಿ ಫ್ಲಾಷ್ ಬ್ಯಾಕ್ ತೋರಿಸಿದ ಹಾಗೆ.

ಮೊದಲ ಸಂಚಿಕೆಯಲ್ಲಿ ನಾನು ದಿನದಲ್ಲೆಷ್ಟು ಸಲ ಎಷ್ಟೆಷ್ಟು ಔಷಧಿಯನ್ನು ಹೊಟ್ಟೆಗಿಳಿಸುತ್ತೇನೆ ಎನ್ನುವುದನ್ನು ತಿಳಿಸಿದ್ದೆ. ಇದೊಂದು ವಿಷವರ್ತುಲ. ಒಂದು ಔಷಧದ ಅಡ್ಡಪರಿಣಾಮಕ್ಕಾಗಿ ಇನ್ನೊಂದನ್ನು ನುಂಗುವುದು; ಅದರ ಅಡ್ಡ ಪರಿಣಾಮಕ್ಕಾಗಿ ಮತ್ತೊಂದನ್ನು!! ರೊಮಟಾಯ್ಡ್ ಸಂಧಿವಾತ ಶುರುವಾಗಿ ಈಗಾಗಲೇ ಮೂವತ್ತು ವರ್ಷಗಳಾಗಿವೆ. ಆರಂಭದಲ್ಲಿ ಹಲವರು ನನಗೆ ಯಾವುದೇ ಅಡ್ಡಪರಿಣಾಮಗಳಿಲ್ಲದ ಆಯುರ್ವೇದ, ಹೋಮಿಯೋಪತಿ ಮತ್ತು ನಾಟಿ ಔಷಧಿಗಳ ಸಲಹೆಯನ್ನು ನೀಡಿದ್ದರು. ಇಂದಿಗೂ ನೀಡುತ್ತಲೇ ಇದ್ದಾರೆ. ನಾನೂ ಕೆಲವು ಬಲ್ಲವರ ಸ್ವಾನುಭವವನ್ನು ಕೇಳಿ, ಮೊದಲ ಐದು ವರ್ಷಗಳು ಈ ಪದ್ಧತಿಗಳಲ್ಲೇ ಔಷಧಿಗಳನ್ನು ಸೇವಿಸಿ, ಕಟ್ಟುನಿಟ್ಟಾಗಿ ಪಥ್ಯವನ್ನು ಪಾಲಿಸಿದರೂ ಅಡ್ಡವೋ, ಉದ್ದವೋ ಪರಿಣಾಮ ಪಕ್ಕಕ್ಕಿರಲಿ; ಬೇಕಾದ ಮುಖ್ಯ ಪರಿಣಾಮವೇ ಆಗದೆ, ಹೇಗೋ ಕಷ್ಟಪಟ್ಟು ನಡೆಯುತ್ತಿದ್ದವಳಿಗೆ ಒಂದೆರಡು ತಿಂಗಳಲ್ಲೇ ಹೆಜ್ಜೆಯಿಡಲೂ ಕೋಲಿನ ಸಹಾಯ ಬೇಕಾಗಿ, ಅಲ್ಲಿಂದ ಮುಂದೆ ಎದ್ದು ನಿಲ್ಲಲೂ ಕಷ್ಟಪಡುವಂತಾಗಿ, ವಾಕರನ್ನು ಆಶ್ರಯಿಸಿದರೂ, ಮನೆಯಲ್ಲೇ ಎರಡು ಹೆಜ್ಜೆ ನಡೆಯಲು ಎಷ್ಟೋ ಕಷ್ಟಪಡುವ ಸ್ಥಿತಿಗೆ ಮುಟ್ಟಿದ್ದಾಯಿತು. ಇದು ಕೇವಲ ನನ್ನ ಅನುಭವ ಮಾತ್ರಾ.

ಬರಿಯ ವೈದ್ಯೋಪಚಾರವಷ್ಟೇ ಅಲ್ಲ. ಹಿತೈಷಿಗಳು, ಬಂಧುಗಳು, ದೇವರು, ದಿಂಡರು, ಜ್ಯೋತಿಷ್ಯಗಳ ಸಲಹೆ ಗಳನ್ನೂ ನೀಡುತ್ತಾರಲ್ಲವೇ! ಅಂತೆಯೇ ಅತ್ಯಂತ ಆಪ್ತರೊಬ್ಬರ ಒತ್ತಾಯದ ಮೇರೆಗೆ ಅವರೊಂದಿಗೆ ನಾಡಿ ಗ್ರಂಥ ಓದುವವರ ಬಳಿಗೆ ಹೋಗಿದ್ದಾಗ ಆ ಪ್ರವೀಣರು 'ಯಾರೋ ತೀರಾ ಹತ್ತಿರದವರೊಬ್ಬರು ಮಾಟ, ಮಂತ್ರ ಮಾಡಿಸಿದ್ದಾರೆಂದೂ, ನಾವು ಇನ್ನೊಂದಿಷ್ಟು ದಕ್ಷಿಣೆ ಕೊಟ್ಟರೆ ಮಾಡಿಸಿದವರು ಯಾರೆಂದು ಹೇಳುವುದಾಗಿಯೂ, ನಂತರ ಅದಕ್ಕೆ ಪರಿಹಾರಗಳನ್ನೂ ಹೇಳುವುದಾಗಿಯೂ, ಹಾಗೆಯೇ ಅವರು ಹೇಳಿದ್ದನ್ನು ಮಾಡದೇ ಹೋದರೆ ಇನ್ನು ಕೆಲವೇ ವರ್ಷಗಳಲ್ಲಿ ನಾನು ಹಾಸಿಗೆ ಹಿಡಿದು ಮಟಾಶ್' ಎಂದೂ ಘಲುಕಿ ನಮ್ಮ ಚಿತ್ತಸ್ವಾಸ್ಥ್ಯವನ್ನು ಕದಡಲು ಯತ್ನಿಸಿದ್ದರು. "ಮಾಟ, ಮಂತ್ರ ಮಾಡಿಸಬಹುದಾದಂತ ಶತ್ರುಗಳು ನನಗೆ ತಿಳಿದಂತೆ ಯಾರೂ ಇಲ್ಲ; ಹಾಗೆ ಯಾರಾದರೂ ಇದ್ದರೂ ಅವರ್‍ಯಾರೆಂದು ತಿಳಿದುಕೊಳ್ಳುವ ಆಸಕ್ತಿಯೂ ನನಗಿಲ್ಲ; ಹಾಗೊಮ್ಮೆ ಒಬ್ಬರು ನನಗೆ ಕೇಡನ್ನು ಬಯಸಿದ್ದರೆ, ನೂರು ಜನ ಒಳಿತನ್ನು ಹಾರೈಸೋವ್ರು ಇದಾರೆ. ಕೆಡುಕು ನಿಜವಾಗುತ್ತೆ ಅನ್ನೋದು ನಿಮ್ಮ ನಂಬಿಕೆಯಾದರೆ, ಶುಭ ಹಾರೈಕೆಗಳೂ ನಿಜವಾಗತ್ತೆ ಅನ್ನೋದು ನನ್ನ ನಂಬಿಕೆ" ಎಂದು ಹೇಳಿ ಎದ್ದು ಬಂದಿದ್ದೆ. ಅವರು ತಿಳಿದುಕೊಂಡಿರುವುದು ಅದೊಂದನ್ನೇ. ಅದು ಅವರ ಕಸುಬು. ನನಗೆ ನಂಬಿಕೆ ಬರಲಿಲ್ಲ. ಹೋಗಲಿ ಬಿಡಿ.

ಅವರನ್ನೇನೋ ಅವಿದ್ಯಾವಂತರು ಎನ್ನೋಣ. ಇನ್ನೊಬ್ಬ ವಿದೇಶಗಳಲ್ಲಿ ಓದಿ ಅನುಭವಗಳನ್ನು ಗಳಿಸಿಕೊಂಡು ಬಂದಿದ್ದ ಪ್ರಖ್ಯಾತ ಮೂಳೆತಜ್ಞ ಡಾಕ್ಟರನ್ನು ಸಂಪರ್ಕಿಸಿದ್ದೆವು. ಆತ ಕಾಲನ್ನು ಮುಟ್ಟುವುದಕ್ಕೂ ಮುಂಚೆಯೇ 'ನನ್ನ ಎರಡೂ ಮಂಡಿಗಳೂ ಶಸ್ತ್ರಚಿಕಿತ್ಸೆಗೆ ಅರ್ಹವಾಗಿರುವುದರಿಂದ, ಮಾಡಿಸದಿದ್ದರೆ ಒಂದೆರಡು ವರ್ಷಗಳಲ್ಲಿ ಹಾಸಿಗೆ ಹಿಡಿಯುವುದಾಗಿಯೂ, ಮುಂದೆ ನನ್ನ ಜೀವನ ದುರ್ಭರವಾಗುವುದರಲ್ಲಿ ತಮಗ್ಯಾವ ಸಂದೇಹವೂ ಇಲ್ಲ' ಎಂದು ಘೋಷಿಸಿಬಿಟ್ಟರು. 'ಪ್ರಪಂಚದ ಯಾವುದೇ ಡಾಕ್ಟರು ಶಸ್ತ್ರಚಿಕಿತ್ಸೆಯಿಲ್ಲದೆ ನನ್ನನ್ನು ನಡೆಸಿದಲ್ಲಿ ತಾವು ತಮ್ಮ

ಕಸುಬನ್ನೇ ಬಿಟ್ಟುಬಿಡುತ್ತೇನೆ' ಎಂದೂ ಶಪಥಗೈದರು. ಹೆದರುವ ಪಿಂಡವಲ್ಲ ನಾನು! 'ಒಂದು ಬಾಗಿಲು ಮುಚ್ಚಿದರೆ ನೂರು ಬಾಗಿಲು ತೆರೆಯುತ್ತವೆ' ಎಂದು ನಂಬಿರುವ ಆಶಾವಾದಿ. ಅದಾದ ಒಂದೆರಡೇ ವರ್ಷಗಳಲ್ಲಿ ಇನ್ನೊಬ್ಬರು ಪರಿಣಿತ ಅಲೋಪತಿ ಸಂಧಿವಾತ ತಜ್ಞ ಡಾಕ್ಟರೇ ಕನಿಷ್ಠ ಔಷಧಿ ಮತ್ತು ವ್ಯಾಯಾಮ ಚಿಕಿತ್ಸೆಯೊಂದಿಗೆ ಮೂರು ವಾರಗಳಲ್ಲೇ ನಾನು ಕೈಬಿಟ್ಟು ನಡೆಯುವಂತೆ ಮಾಡಿದ ಮೇಲೆ ನನ್ನ ಆತ್ಮವಿಶ್ವಾಸ ಸರಿಯೆಂದು ಒಪ್ಪುತ್ತೀರಲ್ಲವೇ?! ಹೋಗಿ ಮೊದಲಿನವರ ಮುಂದೆ ನಡೆದು ತೋರಿಸಿ ಹೇಳಬಹುದಿತ್ತೇನೋ. ಹೋಗಲಿ ಬಿಡಿ; ಅವರ ಉದ್ಯೋಗ ಅವರದ್ದು.

ಔಷಧಿಯೆಂದ ಮೇಲೆ ಅಡ್ಡ ಪರಿಣಾಮಗಳಿದ್ದೇ ಇರುತ್ತವೆ. ನನ್ನ ಡಾಕ್ಟರು ಸುಳ್ಳು ಆಶ್ವಾಸನೆಯನ್ನೇನೂ ಕೊಡಲಿಲ್ಲ. "ಈ ಔಷಧಿ ಸೇವನೆಯಿಂದ ಹತ್ತು ಸಾವಿರ ಜನರಲ್ಲಿ ಒಬ್ಬರಿಗೆ ಕಣ್ಣಿನ ರೆಟೀನಾ ಮೇಲೆ ಪರಿಣಾಮವಾಗುತ್ತೆ ಎಂದು ಸಂಶೋಧನೆಗಳು ತಿಳಿಸಿವೆ. ನೀವು ಪ್ರತಿ ಆರು ತಿಂಗಳಿಗೊಮ್ಮೆ ಕಣ್ಣಿನ ಪರೀಕ್ಷೆ ಮಾಡಿಸುತ್ತಿರಿ. ಏನಾದರೂ ಪರಿಣಾಮವಾದರೆ ನಿಲ್ಲಿಸಿ. ಬೇರೆ ಔಷಧಿ ಕೊಡೋಣ" ಎಂದಿದ್ದರು. ಇಪ್ಪತ್ತು ವರ್ಷಗಳ ನಂತರ ರೆಟೀನ ಮೇಲೆ ಸ್ವಲ್ಪ ಪರಿಣಾಮವಾಗಲು ಆರಂಭವಾಗಿದೆ ಎಂದು ಪರೀಕ್ಷೆಗಳು ತಿಳಿಸಿದವು. ಅದು ವಯೋಸಹಜವಾದದ್ದೋ ಇಲ್ಲವೇ ಔಷಧಿಯ ಪರಿಣಾಮವೋ ತಿಳಿಯದು. ಅಂತೂ ಅದನ್ನು ನಿಲ್ಲಿಸಿ ಬೇರೆ ಮಾತ್ರೆ ಶುರುವಾಯಿತು.

ಬರಿಯ ಒಂದು ಮಾತ್ರೆಯ ಮೇಲೆ ಚಿಕಿತ್ಸೆ ನಿಲ್ಲುವುದಿಲ್ಲವಲ್ಲ; ಬರುಬರುತ್ತಾ ರೋಗವನ್ನು ಮಾರ್ಪಡಿಸುವ ಔಷಧಿಗಳು (Disease Modifing Drugs), ಉತ್ತೇಜಕ ಔಷಧಿಗಳು (Steroids) ಅನಿವಾರ್ಯವಾದವು. ರೋಗವು ಬಲಿಯುತ್ತಾ ಹೋದಂತೆ, ದೇಹದ ಬೇರೆ ನಿಯತಾಂಕಗಳು (Parameters) ಹೆಚ್ಚುಕಡಿಮೆಯಾದಂತೆ, ಔಷಧಿಯ ಪರಿಣಾಮ ವಾಗಿಯೋ, ಇಲ್ಲವೇ ವಯೋಸಹಜವಾಗಿಯೋ ರಕ್ತದೊತ್ತಡ, ಮಧುಮೇಹದಂತಹ ಇನ್ನೊಂದಿಷ್ಟು ಸಮಸ್ಯೆಗಳು ಹುಟ್ಟಿಕೊಂಡು ಅವುಗಳ ನಿವಾರಣೆಗಾಗಿಯೋ, ನಿರ್ವಹಣೆಗಾಗಿಯೋ ಮತ್ತಷ್ಟು ಔಷಧಿಗಳು ತಿಂಗಳ ಕೊಳ್ಳುವ ಪಟ್ಟಿಯಲ್ಲಿ ಸೇರುತ್ತಾ ಹೋದವು. ಏನಾದರಾಗಲೀ, ಎಷ್ಟೇ ಔಷಧಿಗಳನ್ನು ಸೇವಿಸುತ್ತಿದ್ದರೂ, ನನ್ನ ಮಟ್ಟಿಗೆ ನಾನು ಇನ್ನೊಬ್ಬರಿಗೆ ಹೊರೆಯಾಗದಂತೆ ಇದ್ದೇನೆನ್ನುವುದು ಮುಖ್ಯವಲ್ಲವೇ.

ಈಗ್ಗೆ ಹತ್ತು ವರ್ಷಗಳ ಹಿಂದೆ ಇದ್ದಕ್ಕಿದ್ದಂತೆ ಉಸಿರಾಡುವುದೇ ಕಷ್ಟವಾಗಿ, ಕುಟುಂಬದವರಿಗೆ ತಿಳಿದಿದ್ದ, ಹತ್ತಿರವಿದ್ದ ತಜ್ಞ ವೈದ್ಯರ ಬಳಿ ಹೋದಾಗ, ನನ್ನ ಆಮ್ಲಜನಕದ ಮಟ್ಟ 56ಕ್ಕೆ ಇಳಿದಿದ್ದು, ಡಾಕ್ಟರಿಗೆ ಭಯವಾಗಿ "ಇಲ್ಲಿಂದ ಸೀದಾ ಆಸ್ಪತ್ರೆಯೊಳಗೆ, ಇಲ್ಲದಿದ್ದರೆ ಮೃತ್ಯುವಿನೆಡೆಗೆ" ಎನ್ನುವ ಷರಾ ಬರೆದು ಮನೆಗೆ ಹೋಗಿಬರುವುದಕ್ಕೂ ಅವಕಾಶ ನೀಡದೆ ತುರ್ತು ಚಿಕಿತ್ಸಾ ಘಟಕಕ್ಕೆ ದಬ್ಬಿದ್ದರು. ಮೂರು ದಿನಗಳ ಕಾಲ ಅದೆಷ್ಟೋ ರಕ್ತ ಪರೀಕ್ಷೆಗಳು, ಕ್ಷಕಿರಣಗಳು, ಬೇರೆ ಬೇರೆ ಪರೀಕ್ಷೆಗಳನ್ನು ಮಾಡಿದ ಮೇಲೆ ನ್ಯೂಮೋನಿಯಾ ಎನ್ನುವ ನಿರ್ಧಾರಕ್ಕೆ ಬಂದಿದ್ದರು. ನನ್ನ ಕುಟುಂಬದವರಿಗೆ ನನ್ನ ಶ್ವಾಸಕೋಶದ ಪರಿಸ್ಥಿತಿಯನ್ನು ವಿವರಿಸಿ, "ಅವಳ ಆತ್ಮವಿಶ್ವಾಸ ಬಿಟ್ಟರೆ, ದೇಹದ ಇನ್ಯಾವುದೇ ನಿಯತಾಂಕಗಳೂ ಸುಸ್ಥಿತಿಯಿಲ್ಲ. ಅದೇ ಅವಳನ್ನು ಉಳಿಸಿಕೊಳ್ಳಬೇಕಷ್ಟೇ. ನಮ್ಮ ಪ್ರಯತ್ನವನ್ನು ನಾವು ಮಾಡುತ್ತೇವೆ" ಎಂದಿದ್ದರಂತೆ. ನನಗಿನ್ನೂ ಮಾಡಲು ಹಲವು ಜವಾಬ್ದಾರಿಗಳಿದ್ದವಲ್ಲವೇ! ಭಯಕ್ಕೆ ಜಾಗವೇ ಇಲ್ಲ.

ಯಮಕಿಂಕರರು ಸುತ್ತಮುತ್ತ ಕುಣಿದಾಡಿ ಎಡೆಬಿಡದೇ ಹಿಂಬಾಲಿಸುತ್ತಿದ್ದರೂ, ಡಾಕ್ಟರು ವೆಂಟಿಲೇಟರ್ ಮೇಲೆ ನನ್ನನ್ನು ನಾಲ್ಕೈದು ದಿನವಿಟ್ಟು ಯಮಕಿಂಕರರ ಕೈಯಿಂದ ಎಳೆದುಕೊಂಡಿದ್ದರು. ನಾನು ತೆಗೆದುಕೊಳ್ಳುತ್ತಿದ್ದ ಔಷಧಿಯ

ಅಡ್ಡ ಪರಿಣಾಮದಿಂದ ಹೀಗಾಗಿರಬಹುದು ಎಂದೂ ಹೇಳಿದರು. ಅಲ್ಲಿಂದ ಮುಂದೆ ನಾಲ್ಕೈದು ವರ್ಷ ಆ ಔಷಧಿಯನ್ನು ನಿಲ್ಲಿಸಿದ್ದರು. ಮತ್ತೆ ರೋಗದ ಸ್ಥಿತಿ ಉಲ್ಬಣಿಸಿದಾಗ ಬೇರೆ ಉಪಾಯವೇನಿದೆ? ಅದೇ ಮಾತ್ರೆಯನ್ನು ಆರಂಭಿಸಿದರು. ಕಳೆದ ವರ್ಷ ಮತ್ತೆ ಶ್ವಾಸಕೋಶದ ತೊಂದರೆಯಿಂದ ಆಸ್ಪತ್ರೆಗೆ ದಾಖಲಾದಾಗ ಮತ್ತೆ ಆ ಔಷಧಿಯನ್ನು ನಿಲ್ಲಿಸಿದರು. ಈ ವರ್ಷವೂ ಆಸ್ಪತ್ರೆಗೆ ದಾಖಲಾಗಿ ಹೃದಯಕ್ಕೆ ಸ್ಟಂಟ್ ಅಳವಡಿಸಿದ ಮೇಲೆ ಮಿಕ್ಕೆಲ್ಲಾ ನಿಯತಾಂಕಗಳೂ ಮಾನದಂಡದೊಳಗೇ ಇರುವುದರಿಂದ ಅದನ್ನು ಮತ್ತೆ ಪ್ರಾರಂಭಿಸುವ ಅವಶ್ಯಕತೆ ಸಧ್ಯಕ್ಕೆ ಬಂದಿಲ್ಲ.

ಹೃದಯಕ್ಕೆ ಸ್ಟಂಟ್ ಅಳವಡಿಸಿದ ಮೇಲೆ ಒಂದು ಹೊಸ ಸಮಸ್ಯೆ ಎದುರಾಯಿತು. ಇದ್ದಕ್ಕಿದ್ದಂತೆ ಯಾವಾಗಲಾದರೊಮ್ಮೆ ಕಣ್ಣಮುಂದೆ ಬೆಳಕಿನ ರೇಖೆಗಳು ಚಲಿಸತೊಡಗಿದವು. ನಿಶ್ಯಕ್ತಿಗಿರಬಹುದೇನೋ ಎಂದು ನನಗೆ ನಾನೆ ತೀರ್ಮಾನಿಸಿಕೊಂಡುಬಿಟ್ಟೆ. ಮನೆಗೆ ಬಂದ ನಂತರ ಅದು ನಿಂತು ರಾತ್ರಿ ಎಚ್ಚರವಾದಾಗ ಗೋಡೆಯ ತುಂಬಾ ಲಕ್ಷಾಂತರ ಇರುವೆಗಳು ಇರುವಂತೆ, ಗುಂಪುಗುಂಪಾಗಿ ಸಾಲುಗಟ್ಟಿ ಓಡಾಡುತ್ತಿರುವಂತೆ ಭಾಸವಾಗತೊಡಗಿತು. ಗೋಡೆಯ ಮೇಲೆ ಕೈಯಿಟ್ಟರೆ ಏನೂ ಇಲ್ಲ! ನೋಡುತ್ತಿರುವ ಹಾಗೆಯೇ ಸ್ವಲ್ಪ ಹೊತ್ತಿನಲ್ಲಿ ಎಲ್ಲವೂ ಮಾಯ. ಮಲಗಿದ್ದವಳು ಕಣ್ಣುಬಿಟ್ಟರೆ ಗೋಡೆ ಒಂದು ಪರದೆಯಂತೆ, ಗಾಳಿಗೆ ಅಲ್ಲಾಡುತ್ತಿರುವಂತೆ ಇನ್ನೇನು ನನ್ನ ಕೈಯಿಗೇ ತಗುಲುವುದೇನೋ ಎನ್ನುವಂತೆ ಹತ್ತಿರ ಬರುತ್ತಿತ್ತು. ಮಧ್ಯಾಹ್ನ ಮಲಗಿದ್ದವಳಿಗೆ ಎಚ್ಚರವಾದರೆ ನನ್ನ ಮಂಚ ಸೂರಿನ ಹತ್ತಿರದಲ್ಲಿದೆಯೇನೋ..., ಕೈಗೆಟಕುತ್ತಿದೆಯೇನೋ..., ಕಿಟಕಿ, ಬಾಗಿಲುಗಳು ಕೆಳಗಿವೆಯೇನೋ ಎನ್ನುವಂತೆ ಭಾಸ. ಸ್ವಲ್ಪವೇ ಹೊತ್ತಿನಲ್ಲಿ ಮತ್ತೆ ಎಲ್ಲವೂ ಯಥಾಸ್ಥಿತಿಗೆ. ಗೋಡೆಯ ಗಡಿಯಾರ ಒಂದು ಫುಟ್‌ಬಾಲ್ ಕ್ರೀಡಾಂಗಣವಾದಂತೆ. ಅಲ್ಲಿ ಎಷ್ಟೋ ಜನರು ಚೆಂಡನ್ನು ಒದೆಯುತ್ತಾ ಆಟವಾಡುತ್ತಿರುವ ಹಾಗೆ... ಮೊಮ್ಮಗಳ ನೋಟ್ ಪುಸ್ತಕದ ಬರಹವೆಲ್ಲಾ ಗೋಡೆಯ ಮೇಲಿದ್ದ ಹಾಗೆ... ಯಾವುದೋ ಹೆಸರು ತಿಳಿಯದ ದೊಡ್ಡ ಕೀಟವೊಂದು ಮುಖವನ್ನು ತಗುಲಿಕೊಂಡೇ ಹಾರಿ, ಗೋಡೆಯ ಮೇಲೆ ಸರಿದು ಅಲ್ಲಿಂದ ಚಲಿಸುತ್ತಾ ಮಾಯವಾಗುವ ಹಾಗೆ.. ಹೀಗೇ ನಿದ್ರೆಯಿಂದ ಎಚ್ಚರವಾದಾಗೆಲ್ಲಾ ಏನೇನೋ ದೃಶ್ಯಗಳು ಕಣ್ಣಮುಂದೆ!

'ಇದ್ಯಾವುದೂ ನಿಜವಲ್ಲ' ಎಂದು ನನಗೆ ನಿಶ್ಚಿತವಿದ್ದುದರಿಂದ ಭಯವೆನಿಸಲಿಲ್ಲ. ಕಡೆಕಡೆಗೆ ಅವನ್ನು ನೋಡುವುದನ್ನೇ ಒಂದು ಮನರಂಜನೆಯಾಗಿಸಿಕೊಂಡು ಅಂದು ಏನು ಕಾಣಿಸಿತೋ ಅದನ್ನು ನನ್ನವರೊಂದಿಗೆ ಹೇಳಿ ನಗುತ್ತಿದ್ದೆ. 'ಕನಸಿರಬಹುದು' ಎಂದು ಅವರು, 'ಕಣ್ಣು ಬಿಟ್ಟು, ಕುಳಿತು ನೋಡುತ್ತಿದ್ದೀನಲ್ಲಾ' ಎಂದು ನಾನು. ಭಯವಾಗದಿದ್ದರೂ, ಏಕೆ ಹೀಗಾಗುತ್ತಿದೆ ಎಂದಾದರೂ ತಿಳಿದುಕೊಳ್ಳಬೇಕಲ್ಲ. ನನ್ನ ಡಾಕ್ಟರ ಬಳಿ ಹೇಳಿದಾಗ "ಕೆಲವೊಮ್ಮೆ ಔಷಧಿಯ ಅಡ್ಡಪರಿಣಾಮಗಳಿಂದಲೂ ಹಾಗಾಗುತ್ತೆ. ನಿದ್ರೆಯಿಂದ ಎಚ್ಚರವಾದಾಗ ಮಾತ್ರಾ ಹೀಗಾಗುವುದರಿಂದ ಭಯವೇನಿಲ್ಲ. ಯಾವುದಕ್ಕೂ ಒಮ್ಮೆ ನರರೋಗ ತಜ್ಞರನ್ನು ಭೇಟಿಮಾಡಿ" ಎಂದರು. ಅವರನ್ನೂ ಭೇಟಿಮಾಡಿ ಅದೇ ಕಾರಣ ಎಂದು ನಿಶ್ಚಿತಪಡಿಸಿಕೊಂಡಿದ್ದಾಯಿತು. ಆ ಔಷಧಿಯ ಪ್ರಭಾವ ಈಗ ತಗ್ಗಿದೆಯೇನೋ ಈಗೇನೂ ಕಾಣಿಸುತ್ತಿಲ್ಲವೆನ್ನಿ. ಇಲ್ಲದಿದ್ದರೆ ಮನೆಯವರು ಯಾವ ತೀರ್ಮಾನಕ್ಕೆ ಬರುತ್ತಿದ್ದರೋ?!

ಮೊದಲು ಸಂಧಿವಾತ ತಜ್ಞರೊಬ್ಬರೇ ವೈದ್ಯರಿದ್ದರು. ಆಗಾಗ ಕಣ್ಣಿನ ತಪಾಸಣೆಯಾಗಬೇಕಾದ್ದರಿಂದ ನೇತ್ರತಜ್ಞರು ಸೇರಿಕೊಂಡರು. ಇದ್ದಕ್ಕಿದ್ದಂತೆ ಹೊಟ್ಟೆಯಲ್ಲಿ ಯಾವ ಆಹಾರವೂ ನಿಲ್ಲದೆ ತಿಂದ ರೂಪದಲ್ಲೇ ಹೊರಬರತೊಡಗಿದಾಗ ಉದರರೋಗ ಪರಿಣತರ ಪ್ರವೇಶವಾಯಿತು. ಎರಡು ವರ್ಷ ಎಡೆಬಿಡದೆ ಮೂತ್ರನಾಳದ ಸೋಂಕು ಕಾಡಿದಾಗ ಮೂತ್ರರೋಗ ತಜ್ಞರು ಅನಿವಾರ್ಯವಾಯಿತು. ನ್ಯುಮೋನಿಯಾ ಬಂದ ನಂತರ ಫಿಸಿಷಿಯನ್ ಜೊತೆ ಸೇರಿದರು. ಸದ್ಯಕ್ಕೆ ರಕ್ತದೊತ್ತಡ, ಮಧುಮೇಹ ಇವನ್ನೂ ಅವರೇ ನೋಡಿಕೊಳ್ಳುತ್ತಿದ್ದಾರೆ. ಹೃದಯಕ್ಕೆ ಸ್ಟಂಟ್ ಹಾಕಿದ ಮೇಲೆ

ಹೃದಯತಜ್ಞರೊಬ್ಬರ ಸೇರ್ಪಡೆಯಾಗಿದೆ. ಹ್ಯಾಲೋನೈಸೇಶನ್ ಕಾರಣದಿಂದಾಗಿ ನರರೋಗ ತಜ್ಞರೂ ನನ್ನ ವೈದ್ಯರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನಮೂದಿಸಿಕೊಂಡಿದ್ದಾರೆ. ಈ ಪಟ್ಟಿಯಲ್ಲಿ ದಂತವೈದ್ಯರನ್ನು ಸೇರಿಸಿಲ್ಲ.

ಈಗ ಔಷಧಿಯ ಅಡ್ಡ ಪರಿಣಾಮ, ಅದರಿಂದಾದ, ಆಗಬಹುದಾದ ಉದ್ದುದ್ದದ ಪರಿಣಾಮಗಳ ಬಗ್ಗೆ ಯೋಚಿಸುವುದೇ ಇಲ್ಲ. ನನ್ನಂತೆ ಔಷಧಿಯನ್ನು ಸೇವಿಸದೇ ಇರುವವರಿಗೆ ಯಾವ ಖಾಯಿಲೆಯೂ ಬಂದಿಲ್ಲವೇ? ಅವರ್‍ಯಾರೂ ಆಸ್ಪತ್ರೆಗೆ ದಾಖಲಾಗೇ ಇಲ್ಲವೇ? ನನ್ನ ಖಾಯಿಲೆಗಳಿಗೆ ಔಷಧಿಯ ಅಡ್ಡಪರಿಣಾಮ ಎನ್ನುವ ಕಾರಣವನ್ನು ಕೊಡಬಹುದು. ಮಿಕ್ಕವರದ್ದನ್ನು 'ಇದ್ದಕ್ಕಿದ್ದಂತೆ ಹಾಗಾಯಿತು' ಎನ್ನಬಹುದು ಅಷ್ಟೇ. ಎರಡರಲ್ಲೂ ಏನು ವ್ಯತ್ಯಾಸವಿದೆ?!

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061

ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ –

ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 219 ನಡೆದ ದಿನಾಂಕ: 11 ನವೆಂಬರ್ 2023

ಸಂಚಿಕೆಯ ಬಿಡುಗಡೆ ದಿನಾಂಕ: 16 ಡಿಸೆಂಬರ್ 2023 – ಶನಿವಾರ

ಸಮನ್ವಯ ಸಮಿತಿ – ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ 219 – ಅಧ್ಯಕ್ಷರ ಅನಿಸಿಕೆಗಳು

- ಡಾ. ಶುಭಶ್ರೀ ಪ್ರಸಾದ್

ಎಲ್ಲ ಸಹೃದಯರಿಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳು. ನೋಡಿಯೋ ಸಾಹಿತ್ಯ ದಾಸೋಹದಲ್ಲಿ ನನ್ನ ಅನಿಸಿಕೆಗಳನ್ನು ಹಂಚಿಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಸಾಹಿತ್ಯ ದಾಸೋಹದ ಎಲ್ಲ ಸಂಚಾಲಕರಿಗೂ ವಂದನೆಗಳು.

ಸಾಹಿತ್ಯ ಬದುಕಿನ ಬಿಂಬ. ಮಾನವೀಯತೆ, ಸಂಸ್ಕಾರ, ಅನುಕಂಪ, ಕರುಣೆಗಳನ್ನು ಕಲಿಸುವುದೇ ಕಲೆ ಮತ್ತು ಸಾಹಿತ್ಯದ ಬಹು ಮುಖ್ಯ ಭೂಮಿಕೆ. ನಿಜ ಅರ್ಥದಲ್ಲಿ ಸಾಹಿತ್ಯ ಪ್ರಜ್ಞೆ ಎನ್ನುವುದು ಸುಪ್ತ ಪ್ರಜ್ಞೆಯೇ ಎನಿಸುತ್ತದೆ. ಸಾಹಿತ್ಯ ಒಂದು ರೀತಿಯ ಮೌಲ್ಡಿಂಗ್ ಎನ್ನಬಹುದು. ರಾಕ್ಷಸನ ಮನಸ್ಸನ್ನೂ ಪರಿವರ್ತನೆ ಮಾಡುವ ಶಕ್ತಿ ಸಾಹಿತ್ಯಕ್ಕಿದೆ. ಇನ್ನು ಸೃಜನಶೀಲತೆಯೇ ಬದುಕಿನ ಜೀವಾಳ. ಸೃಜಶೀಲತೆಯನ್ನು ಕಳೆದುಕೊಂಡ ಮನುಷ್ಯ ಜೀವಂತವಿದ್ದೂ ಇಲ್ಲದ ಹಾಗೆ. ಸೃಜನಶೀಲತೆ ಕೇವಲ ಕಲೆ ಮತ್ತು ಸಾಹಿತ್ಯಕ್ಕಷ್ಟೇ ಮೀಸಲಲ್ಲ. ಹಾಗೆ ಅದು ಮೀಸಲಾಗಿಬಿಟ್ಟರೆ ಸಾಮಾನ್ಯ ಮನುಷ್ಯರ ಬದುಕು ವ್ಯರ್ಥ ಎಂದರ್ಥವಾಗಿಬಿಡುತ್ತದೆ. ಅದು ಹಾಗಲ್ಲ. ಸೃಜನಶೀಲತೆ ಬದುಕಿನ ನಡೆ. ಮಾಡುವ ಪ್ರತಿ ಕೆಲಸದಲ್ಲೂ, ಅದು ಕೃಷಿಯಾಗಿರಬಹುದು, ಐ.ಟಿ ಆಗಿರಬಹುದು, ಅಡುಗೆ ಆಗಿರಬಹುದು, ಕಸ ಗುಡಿಸುವುದೇ ಇರಬಹುದು – ಮಾಡುವ ಕೆಲಸದಲ್ಲಿ ಶ್ರದ್ಧೆ, ಸಂಯಮ, ಶಿಸ್ತು, ಹೊಸತನ ಅಂದರೆ ಹೊಸ ಹಾದಿಯ ಹುಡುಕುವಿಕೆ ಇದ್ದರೆ ಅದೂ ಸೃಜನಶೀಲತೆಯೇ.

ಆದರೆ ಸಾಹಿತ್ಯಕ್ಕಿರುವ ಶಕ್ತಿ ವಿಶೇಷ, ಮತ್ತಷ್ಟು ಹೊಸ ಹೊಸ ಹೊಳಹುಗಳನ್ನು ಹೊಮ್ಮಿಸಿ ಹೊಸ ಸಾಧ್ಯತೆಗಳತ್ತ ಹೊರಳಿಸುವುದು. ನಮ್ಮ ಮನದಾಳಕ್ಕಿಳಿದು ಶಾಂತಿ, ನೆಮ್ಮದಿ ಸಂತೋಷಗಳನ್ನು ಕೊಡುವುದೇ ಸಾಹಿತ್ಯದ ಮೂಲ ಧ್ಯೇಯವೆಂದು ನನಗೆ ಸದಾ ಅನಿಸುತ್ತೆ.

ಇಂದಿನ ಸಾಹಿತ್ಯ ದಾಸೋಹ ಕನ್ನಡ ರಾಜ್ಯೋತ್ಸವದ ವಿಶೇಷ. ಕನ್ನಡ ಎಂದಾಕ್ಷಣ ನಮಗೆಲ್ಲ ಏನೋ ರೋಮಾಂಚನ. ಒಂದು ಮಮಕಾರ, ಒಂದು ಹೆಮ್ಮೆ, ಒಂದು ಪ್ರೀತಿ. ನಮ್ಮ ಭಾಷೆಯೇ ನಮ್ಮ ಉಸಿರು. ನಮ್ಮ ಮನದ ಭಾವವನ್ನು ಸಶಕ್ತವಾಗಿ ಹೊರಹೊಮ್ಮಿಸಲು ಮಾತೃಭಾಷೆಯೇ ಪ್ರಧಾನ ಮಾಧ್ಯಮ. **'ಎನಿತು ಇನಿದು ಈ ಕನ್ನಡ ನುಡಿಯು, ಮನವನು ತಣಿಸುವ ಮೋಹನ ಸುಧೆಯು, ಗಾನವ ಬೆರೆಯಿಸಿ ವೀಣೆಯ ದನಿಯೊಳು, ವಾಣಿಯ ನೇವುರ ನುಡಿಸುತೆ ಕುಣಿಯಲು, ಮಾಣದೆ ಮೆರೆಯುವ ಮಂಜುಲ ರವವೋ, ಎನಿತು ಇನಿದು ಈ ಕನ್ನಡ ನುಡಿಯು ....'.** ಆನಂದಕಂದರ ಈ ಸವಿನುಡಿ ನಮ್ಮೆಲ್ಲರ ಎದೆಯ ದನಿ. ದೈನಂದಿನ ವ್ಯವಹಾರದಲ್ಲಿ ನಾವು ಅನ್ಯ ಭಾಷೆಗಳನ್ನು ಅನಿವಾರ್ಯವಾಗಿ ಬಳಸುತ್ತೇವೆ. 'ಬೆಳಕು ಎಲ್ಲಿಂದ ಬಂದರೂ ಸರಿಯೇ. ಆದರೆ ನಾವು ನಿಂತ ನೆಲ ಕುಸಿಯಬಾರದು' ಎನ್ನುವ ಗಾಂಧೀಜಿಯವರ ನುಡಿಯಂತೆ ಬೇರೆ ಬೇರೆ ಭಾಷೆಗಳನ್ನು ಬಳಸಿದರೂ, ನಮ್ಮ ಇನಿದಾದ ಭಾಷೆಯನ್ನು ನಮ್ಮ ಹೃದಯದ ಭಾಷೆಯಾಗಿ ಮಾಡಿಕೊಂಡರೆ ನಿರಭಿಮಾನ ಎಂಬುದೇ ಕಾಣದು. ಮತ್ತು ಸದಾ ಸದಾ ಬಳಸುತ್ತಾ ಹೋದಾಗ ಮಾತ್ರವೇ ಯಾವುದೇ ಭಾಷೆ ಜೀವಂತವಾಗಿ ಇರಲು ಸಾಧ್ಯ. ಹಾಗೆ ನಮ್ಮ ಭಾಷೆಯನ್ನು ಜೀವಂತವಾಗಿರಿಸಿ ತನ್ಮೂಲಕ ನಾವೂ ಜೀವಂತಿಕೆಯನ್ನು ಮೆರೆಯೋಣ.

ಇಂದಿನ ಕನ್ನಡ ರಾಜ್ಯೋತ್ಸವ ವಿಶೇಷ ಸಾಹಿತ್ಯ ದಾಸೋಹದಲ್ಲಿ ಚಿತ್ತರಗೊಂಡ ನಮ್ಮ ಸದಸ್ಯರ ಪ್ರಸ್ತುತಿಗಳತ್ತ ಕಣ್ಣು ಹಾಯಿಸೋಣ.

1. ಶ್ರೀಮತಿ ಪೂರ್ಣಿಮಾ ಭಗವಾನ್ – ಎರಡು ಕವನಗಳು

ಶ್ರೀಮತಿ ಪೂರ್ಣಿಮಾ ಭಗವಾನ್ ಅವರು ಒಂದು ಗಜಲ್ ಹಾಗೂ ಮತ್ತೊಂದು ಕವನವನ್ನು ಪ್ರಸ್ತುತಪಡಿಸಿದ್ದಾರೆ. ಗಜಲಿನಲ್ಲಿ '*ಅವನಿಯಲಿ ಜನಿಸಿದ ಮೇಲೆ ಕಷ್ಟಸುಖಗಳು ಸಹಜವು, ಸಾವಧಾನದ ನಡೆ ನುಡಿ ಅಳವಡಿಸಿ ನಡೆಯುತಿರು ಗೆಳತಿ*' ಎನ್ನುವ ಸಾಲುಗಳು ಹಾಗೂ '*ತಂದಿರುವ ಕರ್ಮಫಲ ಅನುಭವಿಸಲೇಬೇಕಿದೆ ನಾವು, ಬಂದಿದ್ದನ್ನು ಧೈರ್ಯವಾಗಿ ಎದುರಿಸಲು ಕಲಿಸುವರು ಗೆಳತಿ*' ಎನ್ನುವ ಸಾಲುಗಳು ಮೋಹಕವಾಗಿವೆ.

'ನೆನಪಿನೋಕುಳಿ' ಕವನದಲ್ಲಿನ '*ದೇಹದ ವಯಸು ಎಷ್ಟಾದರೇನು?/ ಮನದ ಮಾತಿಗೆ ಮುಪ್ಪಿಹುದೇನು?/ ಮರ ಮುಪ್ಪಾದರೆ ಹುಳಿ ಮುಪ್ಪೇನು?/ ಜೀವನ ಸಂಭ್ರಮಕೆ ಕೊನೆ ಇಹುದೇನು?*' ಎನ್ನುವ ಸಾಲುಗಳು ಮತ್ತೆ ಮತ್ತೆ ಮೆಲುಕು ಹಾಕಿ ವಯಸ್ಸು ದೇಹಕ್ಕಷ್ಟೇ, ಮನಸ್ಸಿಗಲ್ಲ. ಜೀವನವೆಂದರೆ ಸಂಭ್ರಮವೇನೇ ಎಂದು ನಮಗೆ ನಾವೇ ಹೇಳಿಕೊಂಡು ಮರುಹುಟ್ಟು ಪಡೆಯುವಂತಿದೆ. ಶ್ರೀಮತಿ ಪೂರ್ಣಿಮಾ ಅವರಿಗೆ ಅಭಿನಂದನೆಗಳು.

2. ಶ್ರೀಮತಿ ಶೀಲಾ ಅರಕಲಗೂಡು – ಎರಡು ಕವನಗಳು

ಶ್ರೀಮತಿ ಶೀಲಾ ಅರಕಲಗೂಡು ಅವರ ಕವನಗಳು 'ಅಡುಗೆಮನೆ ಆಧ್ಯಾತ್ಮ' ಹೆಸರಿನದ್ದು. ಮೊದಲನೆಯ ಕವನ 'ಹದ'. ಅಡುಗೆ ಎನ್ನುವುದೊಂದು ವಿಶಿಷ್ಟ ಕಲೆ. ಅದೊಂದು ಆಧ್ಯಾತ್ಮಿಕ ಅನುಸಂಧಾನವು ಹೌದು. ಅಡುಗೆ ಮನೆಗಿಂತ ಔಷಧಾಲಯವುಂಟೇ? ಊಟವೇ ಸವಿಮದ್ದು. '*ಆಧ್ಯಾತ್ಮ ಚಿಂತನೆಗೆ ಮತ್ತದರ ಮಂಥನಕೆ/ ಅಡುಗೆಮನೆ ಬಲು ಸೊಗಸು ತಪಸಿನಾ ಗುಹೆಯು। ದೇಹಕ್ಕೆ ವ್ಯಾಯಾಮ ಮನ ಬೇರೆ ಆಯಾಮ/ ಧ್ಯಾನಸ್ಥ ಸ್ಥಿತಿಗಾಗಿ ಪಾಕಮನೆಯು*' ಎಂದು ಆರಂಭಿಸಿ, *ಅಂತೆ* '*ಜೀವನವಿಹುದು ಪಾಕಶಾಲೆಯ ರೀತಿ*' ಎಂದು ಅಡುಗೆಯನ್ನೂ ಬದುಕಿನ ಹದವನ್ನೂ ಸಮೀಕರಿಸಿರುವ ರೀತಿ ಅದ್ಭುತವಾಗಿದೆ.

ಇವರ ಮತ್ತೊಂದು ಕವನ 'ಚಮಚವಾಗುವ ಬಯಕೆ' – '*ಹದಗೊಂಡು ನಲಿಯೋಣ ಈ ಬಾಳಲಿ/ ತಾವೆಷ್ಟು ದುಡಿದರೂ ಸ್ವಾರ್ಥವೊಂದಿಷ್ಟಿಲ್ಲ/ ತಮಗಾಗಿ ಬಳಸದೆಯೆ ಕೊಟ್ಟು ತಣಿಯುವುವು। ಕರ್ಮಯೋಗಿಗಳಾಗಿ ಸೇವೆಯನು ಮಾಡುತ್ತ/ ಕೃಷ್ಣ ಬೋಧಿಸಿದಂತೆ ಬಾಳುತಿಹವು*' ಇದಕ್ಕೆ ವ್ಯಾಖ್ಯಾನವೇ ಬೇಕಿರದಷ್ಟು ಸವಿಯಾಗಿದೆ. ಪ್ರತಿಭಾವಂತ ಯುವಕವಿ ರಾಜೇಂದ್ರಪ್ರಸಾದ್ ಅವರು ಹೇಳುವಂತೆ 'ಎಲ್ಲ ಅಭಿರುಚಿಗಳೂ ದೊರಕುವ ಮೊದಲು ಸಿಕ್ಕುವ ರುಚಿ ಬಾಯಿರುಚಿ'. 'ಅಡುಗೆಯೆಂಬ ಆತ್ಮಸಂಗಾತ' ಎನ್ನುವ ಅವರ ಲೇಖನವಂತೂ ಅದ್ಭುತ. ಮತ್ತೊಮ್ಮೆ ಆಸಕ್ತರ ಕೂಡ ಅದನ್ನು ಹಂಚಿಕೊಳ್ಳುವೆ. ಶ್ರೀಮತಿ ಶೀಲಾ ಅರಕಲಗೂಡು ಅವರಿಗೆ ಅಭಿನಂದನೆಗಳು.

3. ಡಾ. ಸತ್ಯವತಿ ಮೂರ್ತಿ – ಹೊಳೆಯುದೆಲ್ಲ ಹೊನ್ನಲ್ಲ (ಕವನ)

"ಆಲ್ ದಟ್ ಗ್ಲಿಟ್ಟರ್ಸ್ ಈಸ್ ನಾಟ್ ಗೋಲ್ಡ್" ಎನ್ನುವುದನ್ನು ನಾವು ಬಾಲ್ಯದಿಂದಲೇ ಕೇಳುತ್ತಾ ಬೆಳೆದಿಹೆವು. ಡಾ. ಸತ್ಯವತಿ ಮೂರ್ತಿಯವರು ಆ ಹೆಸರಿನ ಆಂಗ್ಲಭಾಷೆಯ ಕವನದ ಆಶಯವನ್ನು 'ಹೊಳೆಯುದೆಲ್ಲ ಹೊನ್ನಲ್ಲ' ಎಂಬ ಶೀರ್ಷಿಕೆಯೊಂದಿಗೆ ಕನ್ನಡಕ್ಕೆ ತಂದಿದ್ದಾರೆ. ಇಡೀ ಕವನದಲ್ಲಿ ಮಧ್ಯೆ ಮಧ್ಯೆ ಮಿಂಚಿನ ಸಾಲುಗಳು ಹೊಳೆಯುತ್ತವೆ.

'ಹೆಣ್ಣದು ಚಿನ್ನವ ಬಿಡುವಳೆ ಏನು?/ ಮೀನನು ಕಂಡಿಹ ಮಾರ್ಜಾಲವೇನು?' ಆಗಿರಬಹುದು, *'ಮೂರ್ಖಗೆ ಮಿತ್ರರ ನಾಕಾಣೆ/ ಆಸೆಬುರುಕಗೆ ಮಿತ್ರರು ಯಾರು?'* ಎಂಬ ಸಾಲೇ ಆಗಿರಬಹುದು. ಕೊನೆಯಲ್ಲಿ ಹೇಳುವ *'ಮರಳಿಬಾರದ ಕಾಲದ ಪರಿಯಾ/ ಮುಂದಿಟ್ಟ ಹೆಜ್ಜೆಯು ಹಿಂದಕ್ಕೆ ಬಾರದು/ ಮಿಂಚಿದ ಕಾರ್ಯವು ಚಿಂತಿಸೆ ಹರಿಯದು'* ಅತ್ಯಂತ ಸೊಗಸಾಗಿದೆ. ಒಟ್ಟಾರೆ ಕವನ ಅರ್ಥಪೂರ್ಣವಾಗಿದೆ. ಅಭಿನಂದನೆಗಳು ಡಾ.ಸತ್ಯವತಿ ಮೂರ್ತಿ ಅವರಿಗೆ.

4. ಶ್ರೀ ಗಣಪತಿ ಹೆಗಡೆ – 'ಕವಿಸಮಯ'

ಶ್ರೀ ಗಣಪತಿ ಹೆಗಡೆಯವರದ್ದು ಪಾಂಡಿತ್ಯಪೂರ್ಣವಾದ ಲೇಖನ. ಮರೆತುಹೋಗಿದ್ದ ಹಲವನ್ನು ಮತ್ತೆ ನೆನಪಿಸಿದ್ದಕ್ಕಾಗಿ ಅವರಿಗೆ ವಂದನೆಗಳು. 'ಕವಿಸಮಯ' ದ ಬಗ್ಗೆ ಅವರ ಪ್ರಸ್ತುತಿಯಿತ್ತು. '*ಲೋಕದಲ್ಲಿ ವಸ್ತುತಃ ಇಲ್ಲದೆಯೂ, ಶಾಸ್ತ್ರದಲ್ಲಿ ಪ್ರಸಿದ್ಧವಲ್ಲದೆಯೂ ಇರುವ ಅನೇಕ ಸಂಗತಿಗಳನ್ನು ಕವಿಗಳು, ಒಬ್ಬರಾದ ಮೇಲೆ ಮತ್ತೊಬ್ಬರು ಒಂದೇ ರೀತಿಯಿಂದ ಹೇಳುತ್ತಾ ಬಂದು ರೂಢಿಗೆ ತಂದಿರುತ್ತಾರೆ. ಈ ರೂಢಿಗೆ ಕವಿಸಮಯವೆಂದು ಹೆಸರು* ಎಂದು ಹೇಳುತ್ತಾ, *ಅಮೂರ್ತ ಭಾವನೆಗಳಿಗೆ ಮೂರ್ತಸ್ವರೂಪ ಕೊಡುವುದು ಒಂದು ಬಗೆಯ ಕವಿಸಮಯ* ಎನ್ನುತ್ತಾರೆ. 1.*ಅಸದಾಖ್ಯಾತಿ, 2.ಸದಕೀರ್ತನ, 3.ನಿಯಮ, 4.ಐಕ್ಯ* ಎಂಬ ನಾಲ್ಕು ಬಗೆಯ ಕವಿಸಮಯದ ಕುರಿತೂ ಸೂಕ್ಷ್ಮವಾಗಿ ವಿವರಿಸಿದ್ದಾರೆ. ಶ್ರೀ ಗಣಪತಿ ಹೆಗಡೆಯವರಿಗೆ ಈ ಪ್ರಸ್ತುತಿಗಾಗಿ ಅಭಿನಂದನೆಗಳು.

5. ಶ್ರೀ ವಿಠ್ಠಲ್ ಇಜೇರಿ – 'ಚಾವಣಿ ಏರಿದ ಮುದುಕ'

ಶ್ರೀ ವಿಠ್ಠಲ್ ಇಜೇರಿಯವರು ಪ್ರಸ್ತುತಪಡಿಸಿದ 'ಚಾವಣಿ ಏರಿದ ಮುದುಕ' – 1971ರ ಒಂದು ಚಲನಚಿತ್ರವನ್ನು ಕುರಿತಾದದ್ದು. ಒಂದು ಸಮುದಾಯ ಎದುರಿಸುವ ಆತಂಕ, ಬಿಕ್ಕಟ್ಟುಗಳನ್ನು ಚಿತ್ರಿಸುವ ಮತ್ತು ಇಜೇರಿಯವರೇ ಹೇಳುವಂತೆ, *'ಇಂದಿಗೂ ಸಂಗೀತಮಯ ಚಿತ್ರ ನಿರ್ಮಿಸುವವರಿಗೆ ಈ ಚಿತ್ರ ಒಂದೆರಡು ಸಲ ವೀಕ್ಷಿಸಲು ಚಿತ್ರಬ್ರಹ್ಮರು ಸಿಫಾರಸು ಮಾಡುತ್ತಾರೆ. ಸಿನಿಪ್ರಿಯರಿಗೆ ಉತ್ತಮ ಕತೆ, ಲೋಕಸಂಗೀತ, ಉತ್ತಮ ಚಿತ್ರಸಂಗೀತ, ಸಾಂಪ್ರದಾಯಿಕ ನೃತ್ಯಗಳು, ಉತ್ತಮ ಫೋಟೋಗ್ರಾಫಿ, ಅಲ್ಲಲ್ಲಿ ತಿಳಿಹಾಸ್ಯ ಮತ್ತು ಸುಂದರ ಪ್ರಾಕೃತಿಕ ದೃಶ್ಯಗಳೊಂದಿಗೆ ಇಷ್ಟವಾಗುತ್ತದೆ. ಈ ಚಿತ್ರ ನೋಡಿದ ನಂತರ ಸಂತೋಷ, ವಿಸ್ಮಯ, ಉಲ್ಲಾಸ, ಸಹಾನುಭೂತಿ, ದುಃಖ, ಇವು ನಮ್ಮೊಂದಿಗೆ ಜೊತೆಗೆ ಬರುತ್ತವೆ. ಇದು ಆಸ್ಕರ್ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ಬಾಚಿಕೊಂಡಿದೆ'* ಎನ್ನುವ ಇಜೇರಿಯವರು, ಈಚೆಗೆ ನೋಡಿದ ಕೋಟಿಗಟ್ಟಲೆ ಬಾಚಿಕೊಂಡ ಪ್ಯಾನ್ ಇಂಡಿಯಾ ಸಿನಿಮಾ ನೋಡಿದ ನಂತರ '*ಇನ್ನೂರು ರೂಪಾಯಿ ದಂಡ ಮತ್ತು ಮೂರು ಗಂಟೆ ಶಿಕ್ಷೆ ಅನಿಸಿತು. ಅಷ್ಟೇ ಆಗಿದ್ದರೆ ಪರವಾಗಿರಲಿಲ್ಲ, ನನಗೆ ತಪ್ಪು ಮಾಡಿದ ಮತ್ತು ಅದಕ್ಕಾಗಿ ಪರಿಹಾರ ರೂಪದಲ್ಲಿ ಒಂದು ಹಳೆಯ ನನ್ನ ಮೆಚ್ಚಿನ ಚಿತ್ರ ನೋಡಬೇಕು ಎಂಬ ಹಂಬಲ ಉಂಟಾಯಿತು'* ಎಂದು ಹೇಳಿ 'ದಿ ಫಿಡರಲ್ ಆನ್ ದಿ ರೂಫ್' ಚಿತ್ರದ ಬಗ್ಗೆ ಬರೆಯುತ್ತಾರೆ. ಇಜೇರಿಯವರೂ ನಮ್ಮಲ್ಲಿನ ಅನೇಕರಂತೆ ನಾಸ್ಟಾಲ್ಜಿಕ್ ಆಗುತ್ತಾರೆ. ಒಂದು ಉತ್ತಮ ಚಿತ್ರವಿಮರ್ಶೆಗಾಗಿ ಅವರಿಗೆ ಅಭಿನಂದನೆಗಳು.

6. ಶ್ರೀಮತಿ ಸಿ.ಆರ್. ಕಮಲಾಕ್ಷಿ – 'ನಭೋಮಂಡಲದ ಧ್ರುವತಾರೆ – ಡಿವಿಜಿ' (ಕಚನ)

ನೋವುಂಡವಗೆ ಸಾಂತ್ವನ ನೀಡುವ
ನಲಿಯುತ ಮರೆವನ ಎಚ್ಚರಗೊಳಿಸುವ
ಅರಿವಿನ ಕಗ್ಗಗಳ ರಸಧಾರೆ ಹರಿಸಿದರು
ಭಗವದ್ಗೀತೆ ಸಮಾನ ಮುಕ್ತಕ ಸೃಜಿಸಿದರು

ಎಂದು ಡಿ.ವಿ.ಜಿ.ಯವರ ಕುರಿತಾಗಿ ಉತ್ತಮ ಕವನ ರಚಿಸಿರುವ ಶ್ರೀಮತಿ ಕಮಲಾಕ್ಷಿ ಅವರು ಮುಂದುವರೆದು, *ಹಚ್ಚಿದ ಅರಿವಿನ ಬೆಳಕು ಬೆಳಗಲಿ ಅನವರತ* ಎನ್ನುತ್ತಾರೆ. ಶ್ರೀಮತಿ ಕಮಲಾಕ್ಷಿ ಅವರಿಗೆ ಅಭಿನಂದನೆಗಳು.

7. ಶ್ರೀ ಎನ್. ಶಂಕರ ರಾವ್ – 'ತನು ಮನ ಕನ್ನಡ' (ಕವನ)

ಶ್ರೀ ಎನ್. ಶಂಕರ ರಾವ್ ಅವರು ರಾಜ್ಯೋತ್ಸವ ವಿಶೇಷ ದಾಸೋಹದಲ್ಲಿ ಕನ್ನಡ ಗೀತೆಯೊಂದನ್ನು ಪ್ರಸ್ತುತ ಪಡಿಸಿದ್ದಾರೆ.

ಕನ್ನಡ ಬರೀ ಭಾಷೆಯಲ್ಲವೋ
ಸಂಸ್ಕೃತಿಯ ಪ್ರತೀಕವದು ಕಾಣೋ/
ಭಾವುಕತೆಯ ಆತ್ಮೀಯ ಭಾಷೆಯದು
ನಮ್ಮಿಂದಾಗಲಿ ನಮ್ಮ ಭಾಷೆಗೆ ಆದ್ಯತೆಯು//

ಎಂದು ಬರೆಯುವ ಶಂಕರ ರಾವ್ ಅವರ ಕನ್ನಡ ಪ್ರೀತಿಯನ್ನು ಅಭಿನಂದಿಸುತ್ತೇನೆ.

8. ಶ್ರೀಮತಿ ರೇಣುಕಾ ದೇಸಾಯಿ – 'ಒಂದು ಸಾವಿನ ಸುತ್ತ' (ಕಿರು ನಾಟಕ)

ಸಾವು ಮನುಷ್ಯ ಬಯಸದ ಸತ್ಯ. ಜಾತಸ್ಯ ಮರಣಂ ಧ್ರುವಂ ಅಂತ ತಿಳಿದಿದ್ದರೂ ಇರುವ ತನಕ ಹೋರಾಟ ಹಾರಾಟ ತಪ್ಪಿದ್ದಲ್ಲ. ತಾನು ತನದು ಎಂಬ ಮಮಕಾರವನ್ನು ಹೊರತುಪಡಿಸಿಯೂ ಅಹಮಿಕೆ, ಬೂಟಾಟಿಕೆ, ಮೌಢ್ಯ, ಸಂಕುಚಿತ ಮನೋಭಾವವನ್ನು ತಳೆದು ತಾನೂ ಅನುಭವಿಸಿ, ಇತರರಿಗೂ ನೋವು ಸಂಕಟಗಳನ್ನೀವ ಬದಲು ಇರುವಾಗ ತಾನೂ ಉಪಕರಿಸುತ್ತಾ ಸಂತಸದಿಂದಿದ್ದು ಇತರರಿಗೂ ಸಂತಸ ನೀಡುವುದೇ ಮಾನವ ಜನ್ಮದ ಶ್ರೇಷ್ಠತೆ. *ಶ್ರೀಮತಿ ರೇಣುಕಾ ದೇಸಾಯಿಯವರ 'ಒಂದು ಸಾವಿನ ಸುತ್ತ' ಕಿರುನಾಟಕ ಒಂದು ಸಾವಿನ ಮೂಲ ಕೆದಕುತ್ತಾ "ಮನುಷ್ಯ ಸಮಾಜದ ವಿಕೃತ ಮನಸುಗಳ ವಿಚಾರವೇ ಹೀಗೆ." "ಗೌಡ್ರ ಸಾವಿನಲ್ಲಿ ಮಗಳನ್ನ ಕಂಡ ಜನ, ನಾಯಿಯನ್ನು ಯಾಕೆ ಮರತ್ರು?"* ಎಂಬ ಬಹು ದೊಡ್ಡ ಪ್ರಶ್ನೆಯನ್ನು ಎತ್ತುತ್ತಾರೆ. ಹೀಗೆ ಒಂದು ಸಾವಿಗೆ ಎತ್ತುವ ಪ್ರಶ್ನೆ ಇಡೀ ಸಮಾಜಕ್ಕೆ ಕೇಳುವ ಪ್ರಶ್ನೆಯಾಗಿಬಿಡುತ್ತದೆ. ಯಾವುದೇ ಸಂದರ್ಭವನ್ನೂ ನಾವು ನಮಗೆ ಬೇಕಾದಂತೆ ತಿರುಚಿಕೊಂಡು ನಮಗೆ ಬೇಕಾದವರನ್ನು ರಕ್ಷಿಸಿಕೊಳ್ಳಲು ಇತರರನ್ನು ದೂಷಿಸುವ ವಿಕೃತತೆಯ ಮುಖದ ಪರಿಚಯವನ್ನು ಈ ಕಿರುನಾಟಕದ ಕೊನೆಯ ಸಾಲುಗಳು ಮಾಡಿಕೊಡುತ್ತವೆ. ರೇಣುಕಾ ಅವರಿಗೆ ಅಭಿನಂದನೆಗಳು.

9. ಶ್ರೀಮತಿ ಮಾಧುರಿ ಕೃಷ್ಣ – 'ಬಾಂಧವ್ಯ'

'ಅರ್ಥವಾಗದೇ ಏನು! ಚೆನ್ನಾಗೇ ತಿಳಿದಿತ್ತು. ಬದುಕಿಡೀ ಘಾಟಿ ಹತ್ತೀ ಇಳಿದು ಪ್ರಯಾಣ ಸಾಗಿಸಿಯೇ ಬಂದ ನಮ್ಮಂಥವರಿಗೆ ಇದನ್ನು ಯಾರೂ ಹೇಳಿಕೊಡಬೇಕಾಗೇ ಇರಲಿಲ್ಲ!' ಎನ್ನುವ ಸಾಲುಗಳು ಹೊಸ ಹೊಳಹಿಗೆ ಕೊಂಡೊಯ್ಯುತ್ತದೆ. *'ಆ ಮೂರು ಪದವಿ ಕಾಲದ ವರ್ಷಗಳಲ್ಲಿ ಒಂದು ದಿನ ಬಾಯ್ಬಿಟ್ಟು ನಾವು ವಿದ್ಯಾರ್ಥಿಗಳಾಗಲೀ, ವಿದ್ಯಾರ್ಥಿನಿಯರಾಗಲೀ ಮಾತಾಡಿದವರು ನಾವಲ್ಲ.... ಇಂದು ಹುಟ್ಟಿನಿಂದಲೂ ಒಟ್ಟಿಗೇ ಬೆಳೆದು ಬಂದವರಂತೆ ಒಬ್ಬರನ್ನೊಬ್ಬರು ಆಕ್ಷೇಪಿಸಿಕೊಳ್ಳುತಿದ್ದೇವೆ! ಬದುಕಿನ ಈ ಬಾಂಧವ್ಯ ಅದೆಷ್ಟು ವಿಚಿತ್ರವಾದುದಲ್ಲವೇ!'* ಎಂದು ಕೊನೆಗೆ ಬರುವಾಗ ಗೆಳೆತನದ ಸಿಹಿಯನ್ನು ಎತ್ತಿಹಿಡಿಯುತ್ತಾರೆ. 'ಬಾಂಧವ್ಯ' ಎಂಬ ಸೊಗಸಾದ ಲೇಖನಕ್ಕೆ ಮಾಧುರಿ ಮೇಡಂ ಅವರಿಗೆ ಅಭಿನಂದನೆಗಳು.

10. ಶ್ರೀಮತಿ ಎಲ್. ಗಿರಿಜಾ ರಾಜ್ – 'ನಿಜಮಪ್ಪ ಸೌಂದರ್ಯ ಆತ್ಮಕ್ಕೆ ಸೇರ್ದುದು'

'ಲೋಕದೊಳ್ ಹೊರಮೆಯ್ಯನೀಕ್ಷಿಸುತೆ ಸೊಬಗನಾರೈವವರ್ ಬರಿಯ ಬೆಪ್ಪುಗಳಲ್ತೆ, ನಿಜಮಪ್ಪ ಸೌಂದರ್ಯ ಅತ್ಮಕ್ಕೆ ಸೇರ್ದುದು, ಚಂದನದ ಕೊರಡು ಮುರುಟಿರ್ದರೇನು? ಊನಾಯ್ತೆ ಗಂಧಕ್ಕೆ?" ಎನ್ನುವ ಕುವೆಂಪು ಅವರ 'ಶ್ರೀ ರಾಮಾಯಣದರ್ಶನಂ'ನ ದೊಡ್ಡ ಕಾಣ್ಕೆಯೊಂದನ್ನು ಶ್ರೀಮತಿ ಗಿರಿಜಾರಾಜ್ ಅವರು ತಮ್ಮ ಪ್ರಸ್ತುತಿಯಲ್ಲಿ ಮಂಥರೆಯ ಪಾತ್ರಚಿತ್ರಣವನ್ನು ಕಟ್ಟಿಕೊಡುವಲ್ಲಿ ಉದ್ಘೋಷಿಸುತ್ತಾರೆ. *'ಮಂಥರೆಯ ಅಂತರಂಗದಲ್ಲಿ ದಯಾ ಲಕ್ಷ್ಮಿಯನ್ನು ಕಾಣುವ ಕವಿಯ ದರ್ಶನದೃಷ್ಟಿ ಮಹೋನ್ನತ!'* ಎಂದು ಹೇಳಿ ಮುಗಿಸುವ ಲೇಖಕಿ ಎಲ್ಲರೊಳಗೂ ಒಳಿತು ಕೆಡಕುಗಳೆರಡೂ ಇರುತ್ತವೆ. ಕಾಣುವ ದೃಷ್ಟಿಗೆ ಕಣ್ಣಿರಬೇಕು ಎನ್ನುವುದನ್ನು ವೇದ್ಯಗೊಳಿಸುತ್ತಾರೆ. ಶ್ರೀಮತಿ ಗಿರಿಜಾ ರಾಜ್ ಅವರಿಗೆ ಇಂಥ ದೊಡ್ಡ ಕಾಣ್ಕೆಯನ್ನು ಕವಿಯ ತಟ್ಟೆಯಿಂದ ನಮಗೆ ಉಣಿಸಿದ್ದಕ್ಕೆ ಅಭಿನಂದನೆಗಳು

11. ಶ್ರೀಮತಿ ಮಾಲತಿ ಶ್ರೀನಿವಾಸನ್ – ಎರಡು ಕವನಗಳು

ನೀರು, ದಡಗಳನ್ನು ದೇಹ ಮನಸುಗಳಿಗೆ ಹೋಲಿಸಿ, ಎರಡೂ ಸಮಸ್ಥಿತಿಯಿದ್ದರೆ ಬದುಕು ಸರಾಗ ಎನ್ನುವ ದೊಡ್ಡ ತತ್ವವನ್ನು ತಮ್ಮ 'ನೀರು ದಡ' ಕವನದಲ್ಲಿ ವ್ಯಕ್ತಪಡಿಸಿದ ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರು 'ವಿಕಸನ' ಎಂಬ ಮತ್ತೊಂದು ಕವನವನ್ನೂ ವಾಚಿಸಿದರು. ಅದು ಜೀವವಿಕಾಸವನ್ನು ಕುರಿತಾದದ್ದು. ಈ ಕವನ ವೈಜ್ಞಾನಿಕವಾಗಿದ್ದೂ ಜೀವಶಾಸ್ತ್ರವೆಂಬ ಕಲೆಯೆಂತಲೂ ಆಧ್ಯಾತ್ಮವೆಂತಲೂ ಭಾಸವಾಗುತ್ತದೆ. ಮಾಲತಿಯವರೇ ಹೇಳುವ ಹಾಗೆ –

ಇದು ಜೀವಶಾಸ್ತ್ರದ ಕಲೆಯೋ
ಜೀವನದ ಕಲೆಯೋ, ಅಣುರೇಣು
ತೃಣ ಕಾಷ್ಟದಲಿ ಅವನ ಇರವ
ತೋರಿಸುವ ಬರಿ ಆಧ್ಯಾತ್ಮವೋ?. . .

ಏನಿದೀ ಪರಸ್ಪರ ನಿರ್ಭರತೆ ವಿಕಸನ ಕ್ರಿಯೆಯ
ನಿಗೂಢತೆ, ವಿಜ್ಞಾನಿ ತತ್ವಜ್ಞಾನಿಗಳ ಸಮ್ಮಿಲನ
ಸೃಷ್ಟಿ ಸ್ಥಿತಿ ಲಯ ಪ್ರಕ್ರಿಯೆಯ ಸುಂದರ ಚಿತ್ರಣ.

ಎಂದು ಕೊನೆಗಾಣುವ ಕವನ ಮನದಲೊಂದು ಅಚ್ಚರಿಯ ವಲಯವನ್ನು ಸೃಷ್ಟಿಸುತ್ತದೆ. ಅದಕ್ಕಾಗಿ ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರಿಗೆ ಅಭಿನಂದನೆಗಳು.

12. ಶ್ರೀ ಬೆಂ.ಶ್ರೀ. ರವೀಂದ್ರ – 'ನನ್ನದೇ ಕಾಲುಗಳು ಬೇಕು' (ಕವನ)

ಯುದ್ಧ ಎಂಬುದು ಜೀವಕುಲಕ್ಕೆ ಎಂದಿಗೂ ಮಾರಕವೇ. ಯುದ್ಧ ಈವರೆವಿಗೂ ಯಾರಿಗಾದರೂ ನೆಮ್ಮದಿ ಶಾಂತಿಯನ್ನು ತಂದುಕೊಟ್ಟಿದ್ದೇ ಇಲ್ಲ. ಹಮಾಸ್ ಯುದ್ಧದಲ್ಲಿ 'ಲಹನಾ' ಎಂಬ ಪುಟ್ಟ ಹುಡುಗಿ ತನ್ನ ಕಾಲನ್ನು ಕಳೆದುಕೊಂಡು 'ತನಗೆ ಪ್ಲಾಸ್ಟಿಕ್ ಕಾಲು ಬೇಡ, ನನ್ನದೇ ಕಾಲು ಬೇಕು' ಎಂದು ಹಠ ಮಾಡುತ್ತಿರುವ ಸುದ್ದಿ ಶ್ರೀ ಬೆಂ.ಶ್ರೀ. ರವೀಂದ್ರ ಅವರನ್ನು ಕಾಡಿ 'ನನ್ನದೇ ಕಾಲುಗಳು ಬೇಕು' ಎಂಬ ಕವನವನ್ನು ಬರೆಸಿದೆ.

ಈಗ ಬಂದಿಹ ಚಿಮ್ಮುಂಡೆಯಲೆಗೆ
ಬೇಕಿಲ್ಲ ಹುಲ್ಲು ಬೇಕು ಬಿಸಿ ರಕ್ತಪಾನ
ಜನಾಂಗಗಳನಳಿಸಿ ಕತ್ತಲು ಕವಿಸಿ
ಜಗದಜಗಲಿಯಲಿ ಹೇತು
ಹಮ್ಮಿಗೆ ಹೆಗಲೀವ ಕಸಿವಿಸಿಯ ಕಂತು

ಎನ್ನುವ ಕವಿ ಜನಾಂಗಗಳನು ಅಳಿಸಿ ಕತ್ತಲು ಕವಿಸುವ ರಕ್ತಪಾನ ಬೇಡುವ ಯುದ್ಧದ ಕುರಿತು ಆತಂಕ ವ್ಯಕ್ತಪಡಿಸುತ್ತಾರೆ. *'ಕಾಲ ಬದಲಾಗುವುದಿಲ್ಲ/ ಕನಸುಗಳು ಅರಳುವುದಿಲ್ಲ/'* ಎಂಬ ಸಾಲುಗಳು ಆತಂಕವನ್ನೂ, ದುಃಖ ಸಂಕಟಗಳನ್ನೂ, ಭಯವನ್ನೂ ಮುಂದಿರಿಸುತ್ತವೆ. ಇಡೀ ಕವನ ಮಹಾಭಾರತದ ಘಟನೆಗಳನ್ನೂ ಇಂದಿನ ಮಾರಣಾಂತಿಕ ಯುದ್ಧವನ್ನೂ ಮುಖಾಮುಖಿಯಾಗಿಸಿದೆ. ಸಾಹಿತ್ಯದ ಶಕ್ತಿಯೇ ಅಂಥದ್ದು. ಸುತ್ತಲಿನ ತಲ್ಲಣಗಳು ಮನದೊಳಗಿಳಿದು ಸಂವೇದನೆ ಉಂಟುಮಾಡದಿದ್ದಲ್ಲಿ ಮನುಷ್ಯನಾಗಿರಲು ಸಾಧ್ಯವಿಲ್ಲ. ಅಂಥಹುದರಲ್ಲಿ ಸಾಹಿತಿಯೊಳಗಿನ ಸೃಜನಶೀಲತೆ ಸ್ಪಂದಿಸದಿರುವುದೇ? ಅತ್ಯುತ್ತಮ ಕವನಕ್ಕಾಗಿ ಶ್ರೀ ಬೆಂ.ಶ್ರೀ. ರವಿಂದ್ರ ಅವರಿಗೆ ಮನದಾಳದ ಅಭಿನಂದನೆಗಳು.

13. ಶ್ರೀ ಭ.ರಾ.ವಿ. – 'ಹಗಲುಗನಸು' (ಕವನ)

ಮನುಷ್ಯನ ಮನಸ್ಸು ಒಂದು ವಿಶಿಷ್ಟ ಲೋಕ, ವಿಶಿಷ್ಟ ಹಂದರ, ಒಂದು ಕಂತೆ, ಒಂದು ಸಂತೆಯೂ. ಇಲ್ಲಿ ನಡೆಯುವ ವ್ಯಾಪಾರ ಯಾರ ಊಹೆಗೂ ನಿಲುಕದ್ದು. ಬೇರೆಯವರಿಗಿರಲಿ, ಸ್ವತಃ ತನಗೆ ತಾನೂ ಸಹ ತನ್ನ ಮನಸ್ಸಿನ ತರ್ಕವನ್ನಾಗಲೀ, ಚಂಚಲತೆಯನ್ನಾಗಲೀ ಊಹಿಸಲಾರ. ಅದನ್ನು ಅಂಕೆಯಲ್ಲಿಟ್ಟುಕೊಳ್ಳುವುದು ಒಂದು ದೊಡ್ಡ ಸಾಹಸವೇ ಸರಿ. ಮನಸ್ಸಿಗೆ ಸಂಬಂಧಿಸಿದ 'ಹಗಲುಗನಸು' ಎಂಬ ಕವನವನ್ನು ಶ್ರೀ ಭ.ರಾ.ವಿಜಯಕುಮಾರ್ ಅವರು ಪ್ರಸ್ತುತಪಡಿಸಿದ್ದಾರೆ.

ಸುತ್ತ ಸುತ್ತುತಿರುವ ಮನ
ಹಾಡಿಗಿಲ್ಲ ಏಕತಾನ
ಎಲ್ಲಿ ಏನೊ ಎತ್ತಲೋ?
ಮಂಜು ಬೆಳಕು ಕತ್ತಲೋ?

ಎನ್ನುವ ಕವಿ, *'ಹಗಲುಗನಸು ಸ್ನಾನದಲ್ಲಿ ಮನದ ಶಾಂತಿಯೆಲ್ಲ ಚೆಲ್ಲಿ'*ಎಂದು ಶ್ರಮವಿರದ ಕನಸು ನನಸಾಗದು, ಅದು ಕೇವಲ ಶಾಂತಿ ಕದಡಿಕೊಳ್ಳುವ ನಿಷ್ಫಲ ಯತ್ನ ಎಂಬ ತತ್ತ್ವವನ್ನು ನಿರೂಪಿಸುತ್ತಾರೆ.

ಅಲ್ಲಿ ತಡೆವರಾರು ಇಲ್ಲ
ನನದೆ ನ್ಯಾಯ ತೀರ್ಪುಎಲ್ಲ
ನಾನೆ ಮುಗಿಲು ಎತ್ತರ, ನನ್ನದೇ ಮಹತ್ತರ
ಎಂದೊ ಎಲ್ಲೊ ನೋಡಿದಂತ
ಎಲ್ಲೊ ಓದಿ ಕೇಳಿದಂತ
ಮನದ ಮತಿಯ ಸುಪ್ತ ಸ್ಥಿತಿಯ
ಬಯಕೆಯೆಲ್ಲ ಗೋಚರ ಕನಸಿನಲ್ಲು ಕಾತರ!

ಎನ್ನುವಲ್ಲಿ ಮನುಷ್ಯನ ಸ್ವಭಾವ ಅವನ ಮನಸ್ಸಿಗೆ ಸಂಬಂಧಿತ ಎಂದು ಕನಸು ಮತ್ತು ಮನಸುಗಳ ಕುರಿತಾದ ಸೊಗಸಾದ ಕವನವನ್ನು ಶ್ರೀ ಭ.ರಾ.ವಿ ಅವರು ನೀಡಿದ್ದಾರೆ. ಅಭಿನಂದನೆಗಳು.

14. ಶ್ರೀ ಕೆ.ಆರ್.ವೆಂಕಟೇಶ್ – 'ಜೇನುಗೂಡು, ಜೇನುನೊಣಗಳು ಹಾಗೂ ನಾನು'

ಶ್ರೀ ಕೆ.ಆರ್.ವೆಂಕಟೇಶ್ ಅವರು ಜೇನು ನೊಣದಿಂದಾಗುವ ಸಿಹಿ ಪ್ರಯೋಜನದ ಜೊತೆಗೆ ಜೇನುಗೂಡು ಕಟ್ಟಿದಾಗ ಜೇನು ನೊಣ ಕಚ್ಚಿದಾಗ ಆಗುವ ಭಯ, ತೊಂದರೆಗಳ ಕುರಿತಾದ ಸ್ವಾನುಭವವನ್ನು ದೀರ್ಘ ಲೇಖನದಲ್ಲಿ

ವಿವರಿಸಿದ್ದಾರೆ. *'ಆ ಗರಿ ಬಿದ್ದ ಸ್ಥಳದಲ್ಲಿ ಮುರಿದ ಜೇನುಗೂಡಿನ ಮೇಲೆ ಒಂದು 30-40 ಜೇನುನೊಣಗಳು ಅದರ ಸುತ್ತಲೇ ಓಡಾಡುತ್ತಿತ್ತು. ಹಿತ್ತಲ ಬಾಗಿಲ ಬಳಿ ಒಂದಷ್ಟು ನೊಣಗಳು ಕೊನೆಯುಸಿರೆಳೆಯುವ ಸ್ಥಿತಿಯಲ್ಲಿ ಮತ್ತೆ ಕೆಲವು ಅವುಗಳ ರೋಷವೆಲ್ಲಾ ಉಡುಗಿ ಮೆತ್ತಗಾಗಿದ್ದವು. ಬಿಸಿ ರಕ್ತದ ಯುವಶಕ್ತಿ ಉಡುಗಿ ವೃದ್ಧಾಪ್ಯದ ಅಸಹಾಯಕತೆ ಕಾಡುವಂತೆ ಅವುಗಳು ಕಾಣಿಸುತ್ತಿದ್ದವು.'* ಎನ್ನುವ ಹೋಲಿಕೆ ಆಪ್ಯಾಯ ಎನಿಸಿತು. ಶ್ರೀ ವೆಂಕಟೇಶ್ ಅವರಿಗೆ ಅಭಿನಂದನೆಗಳು.

15. ಶ್ರೀಮತಿ ಶಾಂತಾ ನಾಗಮಂಗಲ – 'ಉಪಮೆ – ನಿನದದೆಷ್ಟು ಸುಷಮೆ...'

ಶ್ರೀಮತಿ ಶಾಂತಾ ನಾಗಮಂಗಲ ಅವರ ಬರಹ ಅತ್ಯಂತ ಪಾಂಡಿತ್ಯಪೂರ್ಣವಾಗಿದೆ. ಧರ್ಮೋಪಮೆ, ವಸ್ತೂಪಮೆ, ವಿಪರ್ಯಾಸೋಪಮೆ, ಅದ್ಭುತೋಪಮೆಗಳನ್ನು ವಿವರಿಸುತ್ತಾ, *'ಮುನಿದ ಮಾನಿನಿಯನ್ನೋ, ಕೋಪದ ಭಾಮಿನಿಯನ್ನೋ ಒಲಿಸಿಕೊಳ್ಳುವ ಸಂದರ್ಭದಲ್ಲಿ ನಾಯಕನು ಅಸಂಭಾವ್ಯವಾದ ರೀತಿಯಲ್ಲಿ ಹೊಗಳಿದರೆ ಇದು ಅದ್ಭುತೋಪಮೆ. ಅಸಂಭಾವ್ಯವೇ ಇರಬಹುದು. ಕಪೋಲ ಕಲ್ಪಿತವೇ ಇರಬಹುದು ಆದರೆ ಒಲಿದನಲ್ಲೆ ಮತ್ತೂ ಹೃದಯಕ್ಕೆ ಹತ್ತಿರಳಾಗಿ, ಮಾನಿನಿಯ ಮುನಿಸಿಳಿದು, ಕೋಪನೆಯ ಕೋಪವೆಲ್ಲಾ ಪುರ್ರೆಂದು ಹಾರಿ ಹೋಗುವ ಪರಿಣಾಮವಂತೂ ಖಚಿತ'* ಎಂದು ಮಂದಹಾಸ ತರಿಸುವಂತೆ ಬರೆದು *'ಇಂತಹ ಅನೇಕ ಒಳಭೇದಗಳ ಉಪಮೆಗಳ ಅಲಂಕಾರ ಕಾವ್ಯಕನ್ನಿಕೆಯ ಪತ್ತಲದ ನಿರಿಗೆಗಳಲ್ಲಿ ಅವಿತಿವೆ. ಸಿರಿಮುಡಿಯನ್ನು ಸಿಂಗರಿಸಿವೆ. ಉಪಮೆಗಳ ಸುಷಮೆ ಅನನ್ಯವಾದದ್ದು. ಕಾವ್ಯದ ಕಾಂತಿಯನ್ನು ಹೆಚ್ಚಿಸುವ ಶ್ರೀಗಂಧದ ಎಣ್ಣೆ ತೀಡಿದ ಸೊಡರುಗಳು ಎನ್ನಬಹುದು.'* ಎಂದು ತಾವೂ ವಿದ್ವತ್ಪೂರ್ಣವಾಗಿ ಉಪಮೆಯನ್ನೇ ಕೊಡುತ್ತಾ ಲೇಖನವನ್ನು ಪೂರ್ಣಗೊಳಿಸುತ್ತಾರೆ. ಶಾಂತಾ ನಾಗಮಂಗಲ ಅವರಿಗೆ ಅಭಿನಂದನೆಗಳು

16. ಶ್ರೀಮತಿ ರಾಧಿಕಾ ವಿ. ಗುಜ್ಜರ್ – ಎರಡು ಕವನಗಳು

'ಕಸ ಸೋಸಿ ತಂದಿಹೆವು ತರಿ ಎರೆಮಣ್ಣು
ತುಂಬಿಸುವೆವು ಶ್ರದ್ಧೆಯಿಂದ ಗಂಗಾಳಕ್ಕಿನ್ನು
ಮಧ್ಯ ಕೂರುವುದು ನೀರು ತುಂಬಿದ ಘಟ
ಸುತ್ತ ನವಧಾನ್ಯ ಹರಡುವುದೇ ಪ್ರತಿಪದ'

ಎಂದು ನವರಾತ್ರಿಯ ಆರಂಭದಿಂದ ದಿನದ ವೈಶಿಷ್ಟ್ಯವನ್ನು ತಮ್ಮ 'ಕರುನಾಡ ದಸರಾ' ಕವನದಲ್ಲಿ ವರ್ಣಿಸಿದ್ದಾರೆ, ಶ್ರೀಮತಿ ರಾಧಿಕಾ ಗುಜ್ಜಾರ್. ಅವರ ಮತ್ತೊಂದು ಕವನ – 'ಕರ್ನಾಟಕ ಇತಿಹಾಸದ ಹೇಮಪುಟದ ಪಂಚರತ್ನಗಳು' – ಇದರಲ್ಲಿ

'ತಲೆಗೆ ಸೆರಗು ಹೊದ್ದ ಗುಣ ಶ್ರೀಮಂತ ಅರಸು ಗೃಹಿಣಿಯರಿವರು
ನೆಲ-ಜಲದ ತುಡುಗುಕೋರರಿಗೆ ಮಾನವಮಿ ರಣಚಂಡಿಯಿವರು'

ಎಂದು ಆರಂಭಿಸಿ, ಚನ್ನಮ್ಮ, ಮಲ್ಲಮ್ಮ, ಅಬ್ಬಕ್ಕ, ಓಬವ್ವನಂತಹ ವೀರವನಿತೆಯರ ಕುರಿತಾಗಿ ಹೆಮ್ಮೆಯಿಂದ ಬರೆಯುತ್ತಾರೆ. *'ಇಡಿಗಾಳಾದರೆ ಬದುಕುವೆವು, ಬಿಡಿಗಾಳಾದರೆ ಸಾಯುವೆವು'* ಎಂಬ ಸಾಲನ್ನು ಓದುತ್ತಿದ್ದರೆ ಮೈನವಿರೇಳುತ್ತದೆ. ಶ್ರೀಮತಿ ರಾಧಿಕಾ ಗುಜ್ಜಾರ್ ಅವರಿಗೆ ಅಭಿನಂದನೆಗಳು

17. ಶ್ರೀ ಹು.ವಾ.ಶ್ರೀ. – 'ವಿಠಲನ ದರ್ಶನ'

ಶ್ರೀ ಹು.ವಾ.ಶ್ರೀ. ಅವರ *'ವಿಠ್ಠಲನ ದರ್ಶನ' ಪ್ರವಾಸ ಲೇಖನ ಪ್ರಸ್ತುತಿ ಸೊಗಸಾಗಿದೆ. 'ದೊಡ್ಡ ದೊಡ್ಡ ಗುಂಪುಗಳಲ್ಲೇ ಹೆಚ್ಚಾಗಿ ಬರುವ ಜನ .ಅದೆಷ್ಟು ಸೊಗಸಾದ ಭಜನೆಗಳು.. ಗಾಯನ ಕೇಳದಾಗ ಪ್ರಚಾರಕ್ಕೇ ಬರದ ಇಂತಹ ಅದ್ಭುತ ಗಾಯಕರು ಗ್ರಾಮೀಣ ಭಾಗದಲ್ಲಿ ಅದೆಷ್ಟು ಜನ. ಇದ್ದಾರೋ ಅನಿಸಿತು. ಆ ಭಜನೆಯಲ್ಲಿ ಪಾಲ್ಗೊಂಡು ಮುಳುಗಿಬಿಟ್ಟರೆ ಸರದಿ ಸಾಲು ಆಯಾಸವಿಲ್ಲದೆ ಸಾಗುತ್ತದೆ. ವಿಠಲನ ದರ್ಶನ ಸಂತಸ ತಂದಿತ್ತು..'* ಎನ್ನುವ ಹು.ವಾ.ಶ್ರೀ ಅವರು, *'ವಿಠಲನ ಹತ್ತಿರ ಹೋಗುತ್ತಿದ್ದಂತೆ ಅಪ್ಪ ಅಮ್ಮ ಅಕ್ಕಂದಿರನ್ನೆಲ್ಲ ನೆನಪು ಮಾಡಿಕೊಂಡು ವಿಠಲನ ಪಾದಗಳನ್ನು ಸ್ಪರ್ಶಿಸಿದೆ'* ಎಂದು ಲೇಖನವನ್ನು ಕೊನೆಗೊಳಿಸುತ್ತಾರೆ. ಕೊನೆಯ ಸಾಲುಗಳು ಹೃದಯ ಸ್ಪರ್ಶಿಯಾಗಿವೆ. ಮನದಾಳದ ಅಭಿನಂದನೆಗಳು.

18. ಶ್ರೀಮತಿ ಶ್ರವಣಕುಮಾರಿ – 'ಅಡ್ಡ ಉದ್ದ ಪರಿಣಾಮಗಳು'

ಶ್ರೀಮತಿ ಶ್ರವಣಕುಮಾರಿಯವರ ಬರಹಗಳು ಅತ್ಯಂತ ಆಪ್ತವಾಗಿ ಓದಿಸಿಕೊಂಡು ಹೋಗುತ್ತವೆ. ಔಷಧಿಯ ಅಡ್ಡ ಪರಿಣಾಮಗಳ ಬಗೆಗೆ ನಮಗೆಲ್ಲಾ ತಿಳಿದಿತ್ತು. ಆದರೆ ಇವರ ಬರಹ ಓದಿದ ಮೇಲೆ ಅಡ್ಡ ಉದ್ದ ಎಲ್ಲ ಪರಿಣಾಮಗಳೂ, ಮನೋಸ್ಥೈರ್ಯದ ಮಹಿಮೆಯೂ ಕಣ್ಣಮುಂದೆ ಚಿತ್ರಿತವಾಗುತ್ತದೆ. *'ಮೊದಲು ಸಂಧಿವಾತ ತಜ್ಞರೊಬ್ಬರೇ ವೈದ್ಯರಿದ್ದರು. ಆಗಾಗ ಕಣ್ಣಿನ ತಪಾಸಣೆಯಾಗಬೇಕಾದ್ದರಿಂದ ನೇತ್ರತಜ್ಞರು ಸೇರಿಕೊಂಡರು. ಇದ್ದಕ್ಕಿದ್ದಂತೆ ಹೊಟ್ಟೆಯಲ್ಲಿ ಯಾವ ಆಹಾರವೂ ನಿಲ್ಲದೆ ತಿಂದ ರೂಪದಲ್ಲೇ ಹೊರಬರತೊಡಗಿದಾಗ ಉದರ ರೋಗ ಪರಿಣತರ ಪ್ರವೇಶವಾಯಿತು. ಎರಡು ವರ್ಷ ಎಡೆಬಿಡದೆ ಮೂತ್ರನಾಳದ ಸೋಂಕು ಕಾಡಿದಾಗ ಮೂತ್ರರೋಗ ತಜ್ಞರು ಅನಿವಾರ್ಯವಾಯಿತು. ನ್ಯುಮೋನಿಯಾ ಬಂದ ನಂತರ ಫಿಸಿಷಿಯನ್ ಜೊತೆ ಸೇರಿದರು. ಸದ್ಯಕ್ಕೆ ರಕ್ತದೊತ್ತಡ, ಮಧುಮೇಹ ಇವನ್ನೂ ಅವರೇ ನೋಡಿಕೊಳ್ಳುತ್ತಿದ್ದಾರೆ. ಹೃದಯಕ್ಕೆ ಸ್ಟಂಟ್ ಹಾಕಿದಮೇಲೆ ಹೃದಯ ತಜ್ಞರೊಬ್ಬರ ಸೇರ್ಪಡೆಯಾಗಿದೆ. ಹ್ಯಾಲೋಸೈನೇಶನ್ ಕಾರಣದಿಂದಾಗಿ ನರರೋಗ ತಜ್ಞರೂ ನನ್ನ ವೈದ್ಯರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನಮೂದಿಸಿಕೊಂಡಿದ್ದಾರೆ. ಈ ಪಟ್ಟಿಯಲ್ಲಿ ದಂತವೈದ್ಯರನ್ನು ಸೇರಿಸಿಲ್ಲ'* ಎಂದು ಬರೆಯುವ ಲೇಖಕಿಯ ಮನೋಸ್ಥಿತಿ ಇತರರಿಗೆ ಮಾದರಿ. ಎಷ್ಟು ಅನಾರೋಗ್ಯ ಕಾಡಿದರೂ ಒಳಗಿನ ಚೈತನ್ಯ ಕುಗ್ಗದಿದ್ದರೆ ಪರಿಸ್ಥಿತಿಯನ್ನು ತಿಳಿಹಾಸ್ಯದ ದೃಷ್ಟಿಯಿಂದ ನೋಡಿ ಬದುಕನ್ನು ಹಗುರಾಗಿಸಬಹುದು ಎಂಬುದನ್ನು ಶ್ರೀಮತಿ ಶ್ರವಣಕುಮಾರಿಯವರು ಸಾಕ್ಷೀಕರಿಸಿದ್ದಾರೆ.

ರಾಜ್ಯೋತ್ಸವ ಎನ್ನುವುದು ಎಂದೋ ಒಂದು ದಿನ ಆಚರಿಸುವುದಲ್ಲ, ಒಂದು ಮಾಸ ಆಚರಿಸುವುದಲ್ಲ. ಅದು ಮನದ ಮಾಸದ ಪ್ರೀತಿಯಾಗಬೇಕು. ಹಾಗೆ ನಮ್ಮ ಭಾಷೆಯ ಬಗೆಗಿನ ಪ್ರೀತಿ ಸದಾ ಹಸಿರಾಗಿರಲಿ ಎಂದು ಆಶಿಸುತ್ತಾ, ಸಾಹಿತ್ಯ ದಾಸೋಹ ನಿರಂತರವಾಗಿ ಸಾಗಲಿ ಎಂದು ಹಾರೈಸುತ್ತ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ. ದೀಪಾವಳಿ ಹಬ್ಬ ಎಲ್ಲರ ಬಾಳಿನಲ್ಲಿ ಆರೋಗ್ಯ, ಸಮೃದ್ಧಿ, ಸಂತಸ ಮತ್ತು ನೆಮ್ಮದಿಗಳ ದೀಪವನ್ನು ಹೊತ್ತಿಸಿ ಬೆಳಗಲಿ. ವಂದನೆಗಳು.

***